# ಕರ್ನಾಟಕ ವಿಕಾಸ

## Karnataka Vikas

ಸೆಪ್ಟಂಬರ್ 2015
September 2015



**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸುತ್ತೋಲೆಗಳ ಸಂಗ್ರಹ ಹಾಗೂ ಕರ್ನಾಟಕ ವಿಕಾಸ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದರು.**




**ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಮುದ್ದೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ದಿನಾಂಕ 20-8-2015ರಂದು ಏರ್ಪಡಿಸಿದ ವಿಶೇಷ ಗ್ರಾಮಸಭೆಯಲ್ಲಿ ಭಾಗವಹಿದ್ದರು**

# ಗ್ರಾಮಸಭೆಯ ಛಾಯಾಚಿತ್ರಗಳು














# ಕರ್ನಾಟಕ ವಿಕಾಸ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ


ಸೆಪ್ಟೆಂಬರ್ 2015 ಸಂಪುಟ : 56
Volume : 56

September 2015 ಸಂಚಿಕೆ: 10
Issue : 10


## ಈ ಸಂಚಿಕೆಯೊಳಗೆ


5. ಸಚಿವಾಲಯದಿಂದ ಸಂದೇಶ

7. ಮುಖಪುಟ ವರದಿ – ನಾಗೇಂದ್ರಕುಮಾರ ಜೆ.ಟಿ.

10. ವರದಿ – ಅಶೋಕ ಜಿ. ಪಾಟೀಲ
– ಗಿರಿಜಾ ಶಂಕರ

14. ಲೇಖನ – ಬೂವನಹಳ್ಳಿ ನಾಗರಾಜ್
– ಮಂಜುನಾಥ. ಡಿ. ಜೆ.
– ಶ್ರೀಮತಿ ಕವಿತಾ ಎಂ,
– ಎಲ್.ಎಸ್. ದಿನೇಶ
– ಡಾ. ರೇವಯ್ಯ ಒಡೆಯರ್

30. ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ – ಬಿ.ಎನ್.ಇಟಗಿಮಠ

32. ಯಶೋಗಾಥೆ – ಮೋಸಿನ್ ಖಾನ್
– ಚಂದ್ರಶೇಖರ ಮೋರೆ

38. ಕವಿಯ(ಕ್ಷ) ಪ್ರಶ್ನೆ? – ಎ. ಗಜಲಕ್ಷ್ಮಿ

39. ಕಾವ್ಯ ವಿಕಾಸ – ಕೊಮಾರಿಗೌಡ ಹೊಸಗೌಡ್ರು

40. ಪಂಚತಂತ್ರ ವರದಿ

41. ಸಕಾಲ ವರದಿ

42. ಸುತ್ತೋಲೆಗಳು






ಪ್ರಕಾಶಕರು
**ಕೆ. ಯಾಲಕ್ಕಿ ಗೌಡ**
ನಿರ್ದೇಶಕರು (ಪಂ. ರಾಜ್ )
ಹಾಗೂ ಸರ್ಕಾರದ ಪದನಿಮಿತ್ತ
ಜಂಟಿ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ವೈ. ಮಹಾಂಕಾಳಪ್ಪ**
ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**



**ವಾರ್ಷಿಕ ಚಂದಾ**

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ಪಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಛೇರಿ ವಿಳಾಸ**


ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857.
www.rdpr.kar.nic.in
Email : kvrdpr@gmail.com


**ವಿಶೇಷ ಸೂಚನೆ**

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಆಗಸ್ಟ್ 2015ರ 'ಕರ್ನಾಟಕ ವಿಕಾಸ' ಪತ್ರಿಕೆಯು ಶ್ರೇಷ್ಠ ವಿಜ್ಞಾನಿ ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ರವರ ಭಾವ ಚಿತ್ರದೊಂದಿಗೆ ಮುದ್ರಣಗೊಂಡಿರುವುದು ತುಂಬ ಆಕರ್ಷಣೀಯವಾಗಿದೆ. ಪಂಚಾಯತ್ ಇಲಾಖೆಗೆ ಡಾ॥ ಎನ್.ನಾಗಾಂಬಿಕಾ ದೇವಿಯವರು ಸರ್ಕಾರದ ಪ್ರಧಾನ ಕಾರ್ಯದರ್ಶಿಯಾಗಿ ಬಂದಿರುವುದು ಬಹಳ ಸಂತೋಷವಾಗಿದೆ. ತುಮಕೂರು ಜಿಲ್ಲೆಯ ಕೆಸರಮಡು ಗ್ರಾಮ ಪಂಚಾಯತಿಯಲ್ಲಿ ರಾಜೀವಗಾಂಧಿ ಸೇವಾಕೇಂದ್ರ ನಿರ್ಮಿಸಿರುವುದು ಮಾದರಿ ಗ್ರಾಮ ಪಂಚಾಯತಿಗೆ ಪೂರಕವಾಗಿದೆ. ಬಾಗಲಕೋಟೆ ಜಿಲ್ಲಾ ಪಂಚಾಯತಿ ಅಂತರ್ಜಲ ಮರುಪೂರಣ ನಿರ್ಮಾಣಕ್ಕೆ ಒತ್ತುಕೊಟ್ಟು ಸಾಧನೆ ಮಾಡಿರುವುದು ಶ್ಲಾಘನೀಯ. ಬೆಳಗಾವಿ ಜಿಲ್ಲೆ ಅತಿ ಹೆಚ್ಚು ಗೋಬರ್‌ಗ್ಯಾಸ್ ಬಳಕೆದಾರರಿಗೆ ಉತ್ತೇಜನ ನೀಡಿರುವುದು ರಾಜ್ಯಕ್ಕೆ ಮಾದರಿ ಜಿಲ್ಲೆಯಾಗಿದೆ. ಪತ್ರಿಕೆಯಲ್ಲಿನ ಸಕಾಲ ಪ್ರಗತಿ ವರದಿ, ಸುತ್ತೋಲೆಗಳು, ಗ್ರಾಮವಿಕಾಸ, ಕವಿಯ(ಕ್ಷ) ಪ್ರಶ್ನೆಗಳು, ಓದುಗರಿಗೆ ಚೈತನ್ಯ ನೀಡಿವೆ.

**ಶ್ರೀ ಮರಿದೇವರ ಸಿದ್ದಪ್ಪ**
ನಿವೃತ್ತ ಶಿಕ್ಷಕ, ಚೌಡಾಪುರ ಅಂಚೆ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ–583135

ಆಗಸ್ಟ್ 2015ರ "ಕರ್ನಾಟಕ ವಿಕಾಸ" ಪತ್ರಿಕೆ ಮುಖಪುಟದಲ್ಲಿ ಪ್ರತಿಭೆಯಿಂದಲೇ ಉತ್ತುಂಗಕ್ಕೇರಿ ಕಣ್ಮರೆಯಾದ ಮಾಜಿ ರಾಷ್ಟ್ರಪತಿ, ಭಾರತರತ್ನ ಪುರಸ್ಕೃತ ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ರವರ ಭಾವಚಿತ್ರ ಪತ್ರಿಕೆಗೆ ಕಳೆ ತಂದಿದೆ. ಅಲ್ಲದೇ ಓದುಗರಿಗೆ ಆಕರ್ಷಣೀಯವಾಗಿದೆ. ರೈತರ ಆತ್ಮಸ್ಥೈರ್ಯವನ್ನು ತುಂಬುವ ಮಹತ್ವದ ಹೊಣೆ ಸರ್ಕಾರದ ಮೇಲಿದೆ. ರೈತ ಹತಾಶನಾಗಿ ಕೈಚೆಲ್ಲಿ ಅಸಹಾಯಕನಾಗಿ ಆತ್ಮಹತ್ಯೆಯತ್ತ ಸಾಗುವುದು ನಿಜಕ್ಕೂ ಆತಂಕಕಾರಿ ಬೆಳವಣಿಗೆ. ಸರಕಾರ ನೀಡುವ ಸೌಲಭ್ಯಗಳನ್ನು ಬಳಸಿ ಧೈರ್ಯದಿಂದ ಬಾಳಬೇಕಾಗಿದೆ. ನಮ್ಮ ನಾಡಿನ ನೇಗಿಲಯೋಗಿ ಡಾ॥ ಎಂ.ಎಸ್.ವಿಘ್ನೇಶ್ ರವರ ಲೇಖನ ಸಮಯೋಚಿತವಾಗಿದೆ. ಸ್ಥಿರ ಶೀರ್ಷಿಕೆಗಳು ಸ್ವಾಗತಾರ್ಹ. ಗಾಂಧೀಜಿಯವರ ಕನಸು ನನಸಾಗಿಸುವತ್ತ ಶ್ರಮಿಸೋಣ.

**ಶ್ರೀ ಕೊತ್ತಲ ಮಹದೇವಪ್ಪ**
ಲೇಖಕ, ವಿನಾಯಕನಗರ, ಲಕ್ಷ್ಮೇಶ್ವರ, ಗದಗ–582116

ಆಗಸ್ಟ್ 2015ರ "ಕರ್ನಾಟಕ ವಿಕಾಸ" ಮಾಜಿ ರಾಷ್ಟ್ರಪತಿ, ಭಾರತರತ್ನ ಪುರಸ್ಕೃತ ಡಾ॥ಎ.ಪಿ.ಜೆ.ಅಬ್ದುಲ್ ಕಲಾಂ ರವರ ಭಾವಚಿತ್ರದೊಂದಿಗೆ ಮೂಡಿಬಂದಿರುವುದು ಆಕರ್ಷವಾಗಿದೆ. ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಗ್ರಾಮೀಣ ಪ್ರದೇಶವನ್ನು ಅಭಿವೃದ್ಧಿಪಡಿಸುವಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಶ್ರಮಿಸುತ್ತಿರುವುದು ಸಂತೋಷವಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಸುತ್ತೋಲೆಗಳು, ಸರ್ಕಾರದ ನಡವಳಿಗಳು, ಸಚಿವಾಲಯ ಸಂದೇಶ, ಲೇಖನಗಳು, ಯಶೋಗಾಥೆಗಳು, ವರದಿಗಳು ವಿದ್ಯಾರ್ಥಿಗಳಿಗೆ ಹಾಗೂ ಗ್ರಾಮೀಣ ಜನರಿಗೆ ಪ್ರಯೋಜನಕಾರಿಯಾಗಿದೆ.

**ಶ್ರೀ ಚಂದ್ರಶೇಖರ ಎಂ.**
ತಮ್ಮೇನಹಳ್ಳಿ ಪಾಳ್ಯ, ಸರ್ಕಾರಿ ಶಾಲೆ ಹತ್ತಿರ,
ಅಚ್ಚುತನಗರ ಪೋಸ್ಟ್, ಬೆಂಗಳೂರು 560107.

# ಸಚಿವಾಲಯದಿಂದ ಸಂದೇಶ



**ಸಂಜೀವ ಕುಮಾರ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬಹುಮಹಡಿಗಳ ಕಟ್ಟಡ, ಬೆಂಗಳೂರು

ಪ್ರಿಯ ಬಂಧುಗಳೇ,

**ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಸಭೆಗಳಲ್ಲಿ ರಾಷ್ಟ್ರಗೀತೆ, ನಾಡಗೀತೆ ಕಡ್ಡಾಯವಾಗಲಿ .....**

ರಾಜ್ಯದ ಪಂಚಾಯತ್ ಸಂಸ್ಥೆಗಳ ಕಚೇರಿಗಳಲ್ಲಿ ಪ್ರತಿದಿನ ತ್ರಿವರ್ಣ ಧ್ವಜ ಹಾರಿಸಬೇಕು ಎಂದು ಮಾನ್ಯ ಸಚಿವರು ನಿರ್ಧರಿಸಿದ ಹಿನ್ನೆಲೆಯಲ್ಲಿ ಭಾರತದ ರಾಷ್ಟ್ರ ಧ್ವಜವನ್ನು ರಾಜ್ಯದ ಎಲ್ಲಾ ಗ್ರಾಮ/ತಾಲೂಕು/ಜಿಲ್ಲಾ ಪಂಚಾಯತಿ ಕಚೇರಿಗಳಲ್ಲಿ ಪ್ರತಿದಿನ ಹಾರಿಸುವ ಬಗ್ಗೆ ದಿನಾಂಕ:30.07.2013 ರಲ್ಲಿ ಸರ್ಕಾರವು ಆದೇಶ ಹೊರಡಿಸಿ ಅದರಂತೆ ದಿನವೂ ರಾಜ್ಯದ ಎಲ್ಲಾ ಪಂಚಾಯತ್ ಸಂಸ್ಥೆಗಳ ಕಚೇರಿಗಳಲ್ಲಿ ಬೆಳಗ್ಗೆ ರಾಷ್ಟ್ರ ಧ್ವಜಾರೋಹಣ ಮತ್ತು ಸಂಜೆ ಅವರೋಹಣ ನಡೆಸಲಾಗುತ್ತಿರುವುದು ರಾಷ್ಟ್ರಾಭಿಮಾನದ ಸಂಕೇತವಾಗಿದೆ.

ಹಾಗೆಯೇ ರಾಷ್ಟ್ರಗೀತೆ ಮತ್ತು ನಾಡಗೀತೆಯ ಮಹತ್ವವನ್ನು ನಮ್ಮೆಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಸಾರುವಂತಾಗಬೇಕು ಎಂಬ ಮಾನ್ಯ ಸಚಿವರ ಆಶಯದ ಹಿನ್ನೆಲೆಯಲ್ಲಿ ಮೂರೂ ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ/ತಾಲ್ಲೂಕು/ಜಿಲ್ಲಾ ಪಂಚಾಯತಿಗಳ ಸಾಮಾನ್ಯ ಸಭೆಗಳು, ವಿಶೇಷ ಸಭೆಗಳು, ಕೆಡಿಪಿ ಸಭೆಗಳು ಮತ್ತು ಗ್ರಾಮ ಸಭೆಗಳ ಪ್ರಾರಂಭದಲ್ಲಿ ನಾಡಗೀತೆಯೊಂದಿಗೆ ಪ್ರಾರಂಭಿಸಿ ಸಭೆಯನ್ನು ರಾಷ್ಟ್ರಗೀತೆಯೊಂದಿಗೆ ಮುಕ್ತಾಯಗೊಳಿಸಲು ಕ್ರಮಕೈಗೊಳ್ಳಲಾಗಿದ್ದು ಈ ಬಗ್ಗೆ ಸುತ್ತೋಲೆಯನ್ನು ಸಹ ಹೊರಡಿಸಲಾಗಿದೆ.

ರಾಜ್ಯದ ಜನತೆಗೆ ರಾಷ್ಟ್ರಾಭಿಮಾನವನ್ನು ಮೂಡಿಸುವ ಇಂತಹ ಕ್ರಮಗಳ ಕಡ್ಡಾಯ ಅನುಷ್ಠಾನದ ಬಗ್ಗೆ ನಮ್ಮೆಲ್ಲಾ ಮೂರೂ ಹಂತದ ಪಂಚಾಯತ್ ರಾಜ್ ಅಧಿಕಾರಿಗಳಿಗೆ ಅಗತ್ಯ ನಿರ್ದೇಶನ ನೀಡಲಾಗಿದೆ. ಯಾವುದೇ ಸಂದರ್ಭದಲ್ಲೂ ರಾಷ್ಟ್ರಗೀತೆ ಮತ್ತು ನಾಡಗೀತೆಯ ಘನತೆಗೆ ಚ್ಯುತಿಬಾರದಂತೆ ಕ್ರಮವಹಿಸುವುದು ಈ ಎಲ್ಲಾ ಅಧಿಕಾರಿಗಳ ಜವಾಬ್ದಾರಿಯಾಗಿರುತ್ತದೆ.

## ವಿಶೇಷ ಗ್ರಾಮ ಸಭೆಗಳು ನಿರಂತರವಾಗಿರಲಿ . . . .

ಸ್ಥಳೀಯ ಜನರ ಬೇಡಿಕೆಗಳು, ನಿರೀಕ್ಷೆಗಳು ಮತ್ತು ಅವರ ಆಶೋತ್ತರಗಳಿಗೆ ಸ್ಪಂದಿಸಿ ಅಗತ್ಯವಾಗಿ ಬೇಕಾಗಿರುವಂತಹ ಸೌಲಭ್ಯಗಳನ್ನು ಕಲ್ಪಿಸಲು ಅಗತ್ಯ ಮಾಹಿತಿ, ವಿವರಗಳನ್ನು ಪಡೆಯಲು ಗ್ರಾಮೀಣ ಮಟ್ಟದಲ್ಲಿಯೇ ನಡೆಯುವ ಗ್ರಾಮ ಸಭೆಯು ಅತ್ಯಂತ ಸೂಕ್ತ ವೇದಿಕೆಯಾಗಿರುತ್ತದೆ. ಇಂತಹ ಸಭೆಗಳಲ್ಲಿ ನಿರ್ಧರಿಸಲಾದ ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಲ್ಲಿ ನಿಸ್ಸಂದೇಹವಾಗಿ ಗ್ರಾಮೀಣಾಭಿವೃದ್ಧಿ ಆಗುವುದಲ್ಲದೆ, ಸ್ಥಳೀಯ ಜನರ ನಿರೀಕ್ಷೆಗಳಿಗೆ ಸ್ಪಂದಿಸಿದಂತಾಗಿ ಗ್ರಾಮೀಣ ಜನರು ಸಂತೃಪ್ತಿಯ ಜೀವನವನ್ನು ನಡೆಸಲು ಸಾಧ್ಯವಾಗುತ್ತದೆ ಎನ್ನುವುದರಲ್ಲಿ ಯಾವುದೇ ಸಂದೇಹವಿಲ್ಲ. ವಿಕೇಂದ್ರೀಕೃತ ಆಡಳಿತದ ಮೂಲ ತತ್ವದ ಆಶಯಗಳೂ ಸಹ ಇದನ್ನೇ ಪ್ರತಿಪಾದಿಸುತ್ತವೆ.

ಈ ಎಲ್ಲಾ ಅಂಶಗಳನ್ನು ಮನಗೊಂಡು ಕನಿಷ್ಠ ವರ್ಷದಲ್ಲಿ ಎರಡು ಬಾರಿ ಗ್ರಾಮ ಸಭೆ/ ವಾರ್ಡ್ ಸಭೆಯನ್ನು ಕಡ್ಡಾಯವಾಗಿ ನಡೆಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಸ್ಪಷ್ಟಪಡಿಸಿದೆ. ರಾಜ್ಯದ ಗ್ರಾಮ ಪಂಚಾಯತಿಗಳಿಗೆ ಇತ್ತೀಚೆಗಷ್ಟೆ ಚುನಾವಣೆ ನಡೆದು ನೂತನ ಗ್ರಾಮ ಪಂಚಾಯತ್ ಚುನಾಯಿತ ಪ್ರತಿನಿಧಿಗಳು ಆಯ್ಕೆಗೊಂಡಿರುತ್ತಾರೆ. ಗ್ರಾಮ ಪಂಚಾಯತಿಗಳಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ನೂತನ ಆಡಳಿತ ಮಂಡಳಿಯು ಗ್ರಾಮ ಸಭೆಯ ಬಗ್ಗೆ ತಿಳುವಳಿಕೆ ನೀಡುವ ಸಲುವಾಗಿ ಮತ್ತು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಏಕ ಕಾಲದಲ್ಲಿ ವಿಶೇಷ ಗ್ರಾಮ ಸಭೆಗಳನ್ನು ನಡೆಸಬೇಕು ಎಂಬ ನಿರ್ಧಾರದಂತೆ ದಿನಾಂಕ:20.08.2015ರಂದು ವಿಶೇಷ ಗ್ರಾಮ ಸಭೆಯನ್ನು ನಡೆಸಲಾಗಿದೆ.

ವಿಶೇಷವೆಂದರೆ ಇಂತಹ ವಿಶೇಷ ಗ್ರಾಮ ಸಭೆಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು, ಸಚಿವರುಗಳು, ಶಾಸಕರುಗಳು, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಸದಸ್ಯರುಗಳಲ್ಲದೇ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪಾಲ್ಗೊಂಡು ಅಗತ್ಯ ನಿರ್ಧಾರಗಳನ್ನು ಕೈಗೊಂಡಿದ್ದು ಗ್ರಾಮ ಸಭೆಗಳ ಮಹತ್ವವನ್ನು ನೂತನ ಸದಸ್ಯರುಗಳಿಗೆ ಅರಿವು ಮೂಡಿಸುವಲ್ಲಿ ಅಗತ್ಯ ಪಾತ್ರ ವಹಿಸಿದೆ. ಗ್ರಾಮ ಪಂಚಾಯತಿಗಳಲ್ಲಿ ನಡೆಸಲಾಗುವ ಗ್ರಾಮ ಸಭೆಗಳು ಸರಿಯಾಗಿ ನಡೆಯುತ್ತಿವೆ ಎಂದು ದೃಢಪಡಿಸಲು ಗ್ರಾಮ ಸಭೆಗಳ ವಿಡಿಯೋ ಚಿತ್ರೀಕರಣ ನಡೆಸುವುದನ್ನು ಕಡ್ಡಾಯ ಮಾಡಿರುವುದು ಸಹ ಸಮಂಜಸವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ವಿಶೇಷ ಗ್ರಾಮ ಸಭೆಗಳು ನಿರಂತರವಾಗಿ ನಡೆಯುವಂತಾಗಲಿ ಎಂಬುದೇ ನನ್ನ ಆಶಯ.



(ಸಂಜೀವ ಕುಮಾರ್)

ಮುಖಪುಟ ವರದಿ

# ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸುತ್ತೋಲೆಗಳ ಸಂಗ್ರಹ ಹಾಗೂ ಕರ್ನಾಟಕ ವಿಕಾಸ ವಿಶೇಷ ಸಂಚಿಕೆ ಬಿಡುಗಡೆ ಸಮಾರಂಭ

– ನಾಗೇಂದ್ರಕುಮಾರ ಜೆ.ಟಿ.

ಕರ್ನಾಟಕ ವಿಕಾಸ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಇಲಾಖಾ ಸಚಿವರಾದ ಮಾನ್ಯ ಶ್ರೀ ಎಚ್.ಕೆ.ಪಾಟೀಲ ರವರು ಬಿಡುಗಡೆ ಮಾಡಿ, ರಾಜ್ಯದ ಗ್ರಾಮ ಪಂಚಾಯಿತಿಗಳಿಗೆ ನೂತನವಾಗಿ ಆಯ್ಕೆಯಾಗಿರುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಶುಭಾಷಯ ಕೋರಿ ಮಾತನಾಡಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯು ಸ್ಯಾಟ್‌ಕಾಮ್‌ನಲ್ಲಿ ಆಯೋಜಿಸಿದ್ದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ ಹೊರಡಿಸಲಾದ ಸುತ್ತೋಲೆ, ಅಧಿಸೂಚನೆ, ಆದೇಶಗಳ ಸಂಗ್ರಹ ಹಾಗೂ ಕರ್ನಾಟಕ ವಿಕಾಸ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಇಲಾಖಾ ಸಚಿವರಾದ ಮಾನ್ಯ ಶ್ರೀ ಎಚ್.ಕೆ.ಪಾಟೀಲರವರು ದಿನಾಂಕ 11-08-2015ರಂದು ಬಿಡುಗಡೆ ಮಾಡಿ, ರಾಜ್ಯದ ಗ್ರಾಮಪಂಚಾಯಿತಿಗಳಿಗೆ ನೂತನವಾಗಿ ಆಯ್ಕೆಯಾಗಿರುವ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರಿಗೆ ಶುಭಾಶಯ ಕೋರಿ ಮಾತನಾಡಿದರು.



ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸುವ ಗ್ರಾಮಗಳ ಪಂಚಾಯತ್‌ರಾಜ್‌ನ ಮೂರು ಹಂತದ ಸಂಸ್ಥೆಗಳಿಗೆ ಅನುಕೂಲವಾಗಲು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದ ಮುಖ್ಯಕಾರ್ಯಚರಣೆ ಅಧಿಕಾರಿಯಾದ ಶ್ರೀ ಪ್ರಭಾಷ್‌ಚಂದ್ರ ರೇ ರವರ ನೇತೃತ್ವದಲ್ಲಿ

ರಾಜ್ಯ ಐಇಸಿ ಸಂಯೋಜಕರು, ಎಮ್‌ಜಿ.ಎನ್.ಆರ್.ಇ.ಜಿ.ಎ. ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು



ರಾಜ್ಯ ಐಇಸಿ ಶಾಖೆ ಏಪ್ರಿಲ್ 2012 ರಿಂದ ಜುಲೈ 2015ರವರೆಗೆ ಹೊರಡಿಸಲಾಗಿರುವ ಅಧಿಸೂಚನೆ, ಸುತ್ತೋಲೆ, ಆದೇಶ, ಅಧಿಕೃತ ಜ್ಞಾಪನಗಳ ಸಂಗ್ರಹವನ್ನು ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಮೂರು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಕಾರ್ಯಕ್ರಮ ಅನುಷ್ಠಾನ ಗೊಳಿಸಲು ಎದುರಾಗುವ ಸಮಸ್ಯೆಗಳನ್ನು ಪರಿಹರಿಸಲು ಈ ಕೈಪಿಡಿ ಸಹಕಾರಿಯಾಗಲಿದೆ. ಹಾಗೆಯೇ ಗ್ರಾಮಗಳಲ್ಲಿ ಗುಣಾತ್ಮಕ ಬದಲಾವಣೆ ತರಲು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರೂಪಿಸಲಾಗಿರುವ ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದ ಯಶೋಗಾಥೆ ಹಾಗೂ ಅನುಷ್ಠಾನದ ಮಾರ್ಗಸೂಚಿಗಳನ್ನು ಒಳಗೊಂಡ ಕರ್ನಾಟಕ ವಿಕಾಸ ಪತ್ರಿಕೆಯ ವಿಶೇಷ ಸಂಚಿಕೆಯನ್ನು ಸಹ ಮುದ್ರಿಸಿದ್ದು, ಈ ಸಂಚಿಕೆ ಅಧಿಕಾರಿಗಳಿಗೆ ಉಪಯುಕ್ತವಾಗಲಿದೆ ಎಂದರು.

ಗ್ರಾಮೀಣ ಜನತೆ ಆತ್ಮಸ್ಥೈರ್ಯ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುವ ಜನತೆಯ ಮನಪರಿವರ್ತಿಸಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅಕುಶಲ ಉದ್ಯೋಗ ನೀಡಿ ಅವರಲ್ಲಿ ಆತ್ಮಸ್ಥೈರ್ಯ ತುಂಬಬೇಕು. ಉದ್ಯೋಗ ಬಯಸುವ ಪ್ರತಿಯೊಬ್ಬರಿಗೂ ಕೆಲಸ ನೀಡಿ ಗ್ರಾಮೀಣ ಪ್ರದೇಶದಲ್ಲಿ ಬಾಳಿಕೆಯ ಆಸ್ತಿ ಸೃಜಿಸಲು ಗ್ರಾಮ ಪಂಚಾಯತಿಯ ನೂತನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಾಗೂ ಸದಸ್ಯರು ದೃಢಸಂಕಲ್ಪ ತೊಟ್ಟು ಗುಳೆ ಸಂಸ್ಕೃತಿಯನ್ನು ತೊಲಗಿಸುವ ಧ್ಯೇಯ ಹೊಂದಬೇಕು ಎಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಶ್ರೀ ಎಚ್.ಕೆ.ಪಾಟೀಲರವರು ಕರೆ ನೀಡಿದರು.

ಹಳ್ಳಿಗಳು ಇಂದಿಗೂ ಸರಿಯಾದ ರಸ್ತೆ ಸಂಪರ್ಕ, ಸತ್ತವರನ್ನು ಹೂಳಲು ಸ್ಮಶಾನ, ಕೃಷಿ ಒಕ್ಕಲು ಮಾಡಲು ರೈತಕಣ, ಒಳಚರಂಡಿ, ಕುಡಿಯುವ ನೀರಿನ ಸೌಕರ್ಯಗಳಿಂದ ವಂಚಿತವಾಗಿರುವುದಲ್ಲದೆ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಸಣ್ಣ/ಅತಿಸಣ್ಣ ರೈತರಿಗೆ ಅನುಕೂಲವಾಗಲು ರೇಷ್ಮೆ, ಕೃಷಿ, ತೋಟಗಾರಿಕೆ ಬೆಳೆ ತಾಂತ್ರಿಕವಾಗಿ ಬೆಳೆಯುತ್ತಿಲ್ಲ. ಇವರಿಗೆ ಸಹಕಾರಿಯಾಗಲು ಮಹಾತ್ಮಗಾಂಧಿ



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಮ್ಮೂರ ಕೆರೆ, ನಮ್ಮ ಹಳ್ಳಿ ನಮ್ಮ ನೀರು, ರೈತರ ಭೂ ಅಭಿವೃದ್ಧಿ, ಸ್ಮಶಾನ ಅಭಿವೃದ್ಧಿ, ರೈತರ ಕಣ, ಕುರಿ/ದನದ ದೊಡ್ಡಿಯಂತಹ ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗಿದೆ. ಇವು ಗ್ರಾಮಗಳ ಸಮಗ್ರ ಅಭಿವೃದ್ಧಿಯ ದೂರದೃಷ್ಟಿಯಿಂದ ಜಾರಿಗೆ ತಂದಿದ್ದು, ಜನರ ನಿರೀಕ್ಷೆಯನ್ನು ಹುಸಿಮಾಡದೇ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಸೌಲಭ್ಯವನ್ನು ಜನರಿಗೆ ಎಟಕುವಂತೆ ಮಾಡುವ ಧ್ಯೇಯ ಹೊಂದಿರಬೇಕು. ಯೋಜನೆಯಡಿ ನಿರ್ವಹಿಸುವ ಕೆಲಸಗಳಲ್ಲಿ ಯಂತ್ರಗಳನ್ನು ಬಳಸುವ ಬದಲು ಕೂಲಿ ಕಾರ್ಮಿಕರನ್ನು ಬಳಸಿಕೊಂಡು ಅಕುಶಲರಿಗೆ ನೆರವಾಗಬೇಕು ಎಂದರು.

ಶ್ರೀ ಸಂಜೀವ ಕುಮಾರ್, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಪ್ರಾಸ್ತಾವಿಕವಾಗಿ ಮಾತನಾಡಿ ಗ್ರಾಮಗಳ ಅಭಿವೃದ್ಧಿಗೆ ಸರ್ಕಾರದ ಹತ್ತು ಹಲವು ಕಾರ್ಯಕ್ರಮಗಳನ್ನು ಜಾರಿಗೆ ತಂದು ಅನುಷ್ಠಾನಕ್ಕೆ ಅನುದಾನ ಒದಗಿಸಲಾಗುತ್ತಿದೆ. ಈ ಅನುದಾನವನ್ನು ಸದುಪಯೋಗಪಡಿಸಿಕೊಂಡು ಗ್ರಾಮೀಣ ಮೂಲಸೌಕರ್ಯಗಳಾದ ಕುಡಿಯುವ ನೀರು, ರಸ್ತೆ ಅಭಿವೃದ್ಧಿ ಕೆಲಸಗಳಿಗೆ ಹೆಚ್ಚಿನ ಒತ್ತು ನೀಡಬೇಕು. ಪ್ರತಿ ಗ್ರಾಮ ಪಂಚಾಯತಿಯಲ್ಲಿ ಗ್ರಾಮ ಸಭೆಗಳನ್ನು ಸಮರ್ಪಕವಾಗಿ ನಡೆಸಿ ಉದ್ಯೋಗ ಖಾತರಿ, ಸ್ವಚ್ಛ ಭಾರತ ಮಿಷನ್, ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂಸ್ಥೆ(ಸಂಜೀವಿನಿ) ಯೋಜನೆಯಡಿ ಸೌಲಭ್ಯ ಒದಗಿಸುವ ಮೂಲಕ ಗ್ರಾಮೀಣ ಜನರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಸದೃಢರನ್ನಾಗಿ ಮಾಡಬೇಕು. ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಕಾರ್ಯಕ್ರಮ ಗಳನ್ನು ಸರಳೀಕರಿಸಿದ್ದು ಯೋಜನೆಯ ಉದ್ದೇಶವನ್ನು ಈಡೇರಿಸುವಲ್ಲಿ ಗ್ರಾಮ ಪಂಚಾಯತಿಯ ಸಿಬ್ಬಂದಿಗಳು ಹಾಗೂ ಚುನಾಯಿತ ಜನಪ್ರತಿನಿಧಿಗಳು ಒಟ್ಟಿಗೆ ಗ್ರಾಮಗಳ ಅಭಿವೃದ್ಧಿಗೆ ಸಹಕಾರಿಯಾಗಬೇಕು ಎಂದರು.

ಡಾ. ಎನ್. ನಾಗಾಂಬಿಕಾ ದೇವಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆರವರು ಮಾತನಾಡಿ ಮುಂಗಾರು ಮುನ್ನವೇ ರಾಜ್ಯದಲ್ಲಿ ಕರಾಳ ಬರದ ಛಾಯೆ ಆವರಿಸಿದೆ. ಅದರಲ್ಲಿಯೂ ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆಯಂತಹ ಆರ್ಥಿಕ ಸಂಕಷ್ಟಗಳು ಎದುರಾಗಿ ಜನತೆ ಆತ್ಮಸ್ಥೈರ್ಯ ಕಳೆದುಕೊಳ್ಳುತ್ತಿದ್ದಾರೆ. ಇದನ್ನು ತಡೆಯುವಲ್ಲಿ ಗ್ರಾಮ ಪಂಚಾಯತಿಯ ಚುನಾಯಿತ ಪ್ರತಿನಿಧಿಗಳ ಪಾತ್ರ ಮುಖ್ಯವಾಗುತ್ತದೆ. ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಇ-ಮೇಲ್ ಇಲ್ಲವೇ ಪತ್ರ ಮುಖೇನ ಇಲಾಖೆ ಜೊತೆ ಸಂವಹನ ನಡೆಸಿ ಸಮಸ್ಯೆ ಪರಿಹರಿಸಿಕೊಂಡು ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಬೇಕು ಎಂದರು.

ವರದಿ

# ಆಧುನಿಕ ತಂತ್ರಜ್ಞಾನದತ್ತ ನರಗುಂದ ತಾಲೂಕ ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳು



**ಅಶೋಕ ಜಿ. ಪಾಟೀಲ**

ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್‌ಗಳ ನಡುವೆ ನೇರ ವಿಡಿಯೋ ಕಾನ್ಫರೆನ್ಸ್ ವ್ಯವಸ್ಥೆಗೆ ಒಳಪಟ್ಟಿದ್ದು ಇದು ರಾಜ್ಯದಲ್ಲೇ ಪ್ರಥಮ.

ದಿನಾಂಕ: 15-08-2015 ರಂದು ನರಗುಂದ ತಾಲ್ಲೂಕು ಪಂಚಾಯತ್ ಆವರಣದಲ್ಲಿರುವ ಉದ್ಯಾನವನ ಹಾಗೂ ನವೀಕೃತ ಸಭಾ ಭವನದ ಉದ್ಘಾಟನೆಯನ್ನು, ಸನ್ಮಾನ್ಯ ಶ್ರೀ. ಎಚ್. ಕೆ. ಪಾಟೀಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನೆರವೇರಿಸಿದರು.



ತಾಲ್ಲೂಕು ಪಂಚಾಯತ್ ಆವರಣದಲ್ಲಿ ಹೊಸದಾಗಿ ನಿರ್ಮಾಣಗೊಂಡಿರುವ ಉದ್ಯಾನವನ ಹಾಗೂ ನವೀಕೃತ ಸಭಾ ಭವನವನ್ನು ಉದ್ಘಾಟಿಸಿ ಸಚಿವರು ಮಾತನಾಡುತ್ತ ಆಧುನಿಕ ಜಗತ್ತಿನಲ್ಲಿ ಬದಲಾವಣೆಗೆ ತಕ್ಕಂತೆ ನರಗುಂದ ತಾಲ್ಲೂಕು ಪಂಚಾಯತ್ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

ನವೀಕೃತ ಸಭಾ ಭವನದಲ್ಲಿ ನರಗುಂದ ತಾಲ್ಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತಿಗಳ ನಡುವೆ ನೇರ ವಿಡಿಯೋ ಕಾನ್ಫರೆನ್ಸ್ ವ್ಯವಸ್ಥೆಗೆ ಒಳಪಟ್ಟಿದ್ದು ಇದು ರಾಜ್ಯದಲ್ಲೇ ಪ್ರಥಮ. ಮುಂದಿನ ದಿನಗಳಲ್ಲಿ ವಿಧಾನ ಸಭೆಯಿಂದ ಪಂಚಾಯತಿಗಳ ಮಧ್ಯೆ ನೇರ ವಿಡಿಯೋ ಕಾನ್ಫರೆನ್ಸ್ ವ್ಯವಸ್ಥೆ ಜಾರಿಗೊಳಿಸುವುದಾಗಿ ಸಚಿವರು ಹೇಳಿದರು. ಈ ರೀತಿಯ ಅತ್ಯಾಧುನಿಕ ಅಂತರ್ಜಾಲ ಸಂಪರ್ಕದಿಂದ

ಕಾರ್ಯನಿರ್ವಾಹಕ ಅಧಿಕಾರಿ, ತಾಲೂಕ ಪಂಚಾಯತ ನರಗುಂದ, ಗದಗ ಜಿಲ್ಲೆ



ತಾಲ್ಲೂಕು ಪಂಚಾಯತ್‌ನಲ್ಲಿ ನಡೆಯುವ ಎಲ್ಲಾ ಸಭೆಗಳನ್ನು ಗ್ರಾಮ ಪಂಚಾಯತ್‌ನಲ್ಲಿ ವೀಕ್ಷಿಸಿ ಮಾಹಿತಿಯನ್ನು ಪಡೆದುಕೊಳ್ಳಬಹುದಾಗಿದೆ. ಹಾಗೂ ನಡವಳಿ ಚಿತ್ರೀಕರಣ ಮತ್ತು ಧ್ವನಿಮುದ್ರಣ ಆಗುತ್ತಲಿರುತ್ತದೆ.

ಸಭೆಯಲ್ಲಿ ನಡೆಯುವ ಚರ್ಚೆಯಲ್ಲಿ ಅಧಿಕಾರಿಗಳು ಕೆಲ ಯೊಜನೆಗಳ ಮಾಹಿತಿಯನ್ನು ತಪ್ಪಾಗಿ ನೀಡಿದಲ್ಲಿ ಇದನ್ನು ಸಚಿವರು ಗಮನಿಸಿ ಅಥವಾ ಸಂಬಂಧಿಸಿದ ಅಧಿಕಾರಿಗಳಾಗಲಿ ನೇರವಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪುನಃ ಚರ್ಚಿಸಿ ಯೋಜನೆಯ ಸಮಗ್ರ ಮಾಹಿತಿ ಪಡೆಯಬಹುದಾಗಿದೆ ಈ ರೀತಿಯ ನೂತನ ತಾಂತ್ರಿಕತೆಯನ್ನು ತಾಲ್ಲೂಕು ಪಂಚಾಯತ್‌ಗಳಲ್ಲಿ ಅಳವಡಿಸಲಾಗುತ್ತಿದೆ ಎಂದು ಸಚಿವರು ಹೇಳಿದರು.

ಜಿಲ್ಲೆಯ ನರಗುಂದ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತ್‌ಗಳು, ತಾಲ್ಲೂಕು ಪಂಚಾಯತ್ ಕಛೇರಿಯೊಂದಿಗೆ ವಿಡಿಯೋ ಕಾನ್ಫರೆನ್ಸ್ ಸೌಲಭ್ಯ ಹೊಂದಿರುವುದು ಹೆಮ್ಮೆಯ ಸಂಗತಿಯಾಗಿದೆ, ಮೂರು ಗ್ರಾಮಗಳನ್ನು ಅತೀ ಕಡಿಮೆ ಅವಧಿಯಲ್ಲಿ ಸಂಪೂರ್ಣ ಬಯಲು ಶೌಚಮುಕ್ತ ಗ್ರಾಮಗಳಾಗಿ ಪರಿವರ್ತಿಸಿ, ಸಾಧನೆ ಮಾಡಿದ್ದು, ಸ್ವಾತಂತ್ರ್ಯೋತ್ಸವದ ಅಂಗವಾಗಿ ನರಗುಂದ ತಾಲ್ಲೂಕು ನೀಡಿರುವ ಅಮೂಲ್ಯ ಕೊಡುಗೆಗಳು ಎಂದು ಸಚಿವರು ಜಿಲ್ಲಾ ಪಂಚಾಯತ್ ಕಾರ್ಯಾಲಯದ ಇ-ಆಫೀಸ್ ವ್ಯವಸ್ಥೆಗೆ ಚಾಲನೆ ನೀಡಿ ಸಮಾರಂಭದಲ್ಲಿ ಮಾತನಾಡಿದರು.

ಸ್ವಚ್ಛ ಗ್ರಾಮ ಅಭಿಯಾನ ಯೋಜನೆಯಡಿ ಬಯಲು ಶೌಚಮುಕ್ತ ಗ್ರಾಮಗಳನ್ನಾಗಿ ಮಾಡಿ ಯಶಸ್ಸು ಸಾಧಿಸಿದ ಹುಣಶೀಕಟ್ಟಿ, ಕಣಕೀಕೊಪ್ಪ ಹಾಗೂ ರಡ್ಡೇರನಾಗನೂರ ಗ್ರಾಮ ಪಂಚಾಯತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಅಧ್ಯಕ್ಷರುಗಳಿಗೆ ಸಚಿವರು ಪ್ರಶಸ್ತಿ ಫಲಕಗಳಿಂದ ಸನ್ಮಾನಿಸಿದರು.

ಸನ್ಮಾನ್ಯ ಶ್ರೀ.ಬಿ. ಆರ್. ಯಾವಗಲ್ ಶಾಸಕರು ನರಗುಂದ, ಶ್ರೀ ನಾಗರಾಜ ಛಬ್ಬಿ ವಿಧಾನ ಪರಿಷತ್ ಸದಸ್ಯರು, ಶ್ರೀ.ಡಿ.ಆರ್.ಪಾಟೀಲ ಅಧ್ಯಕ್ಷರು ಎ.ಪಿ.ಎಮ್.ಸಿ ಗದಗ, ಶ್ರೀಮತಿ ಶಾಂತವ್ವ ಚಂದಂಡಿನ ಅಧ್ಯಕ್ಷರು ಜಿಲ್ಲಾ ಪಂಚಾಯತ್ ಗದಗ, ಶ್ರೀಮತಿ. ಹೆಬ್ಬಳ್ಳೆವ್ವ ಹೆಚ್ ದೊಡಮನಿ, ಅಧ್ಯಕ್ಷೆ ತಾಲ್ಲೂಕು ಪಂಚಾಯತ್ ಗದಗ, ಶ್ರೀಮತಿ. ಪಾರವ್ವ ಎಸ್.ಹಡಗಲಿ, ಉಪಾಧ್ಯಕ್ಷೆ, ತಾಲ್ಲೂಕು ಪಂಚಾಯತ್ ಗದಗ, ಶ್ರೀ. ಅನಿಲಕುಮಾರ ಪಾಟೀಲ, ಮಾಜಿ ಮಹಾ ಪೌರ, ಶ್ರೀ.ಆರ್ ಬಿ ಪಾಟೀಲ ಮಾಜಿ ಶಾಸಕರು, ಶ್ರೀಮತಿ ಶಾಂತವ್ವ ಬಿ ಯಲಿಗಾರ, ಸಾಮಾಜಿಕ ನ್ಯಾ ಸಮಿತಿ ಅಧ್ಯಕ್ಷೆ, ತಾಲ್ಲೂಕು ಪಂಚಾಯತ್ ಸದಸ್ಯರಾದ ಶ್ರೀಮತಿ ಭೀಮವ್ವ ಬಿ ಶಿರಹಟ್ಟಿ, ಶ್ರೀ ಗುರಪ್ಪ ಎಸ್ ಆದೆಪ್ಪನವರ, ಶ್ರೀ ವಿ. ಎನ್. ಕೊಳ್ಳಿಯವರ, ಶ್ರೀ.ಎಮ್. ವಿ. ಮೇಟಿ ಹಾಗೂ ಶ್ರೀ ಬಿ.ಎಸ್. ಪಾಟೀಲರವರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ವರದಿ

# ಮುದೇನಹಳ್ಳಿಯಲ್ಲಿ ವಿಶೇಷ ಗ್ರಾಮ ಸಭೆ

–ಗಿರಿಜಾ ಶಂಕರ್

ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕಿನ ಮುದೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ದಿನಾಂಕ 20–08–2015ರಂದು ಏರ್ಪಡಿಸಿದ್ದ ವಿಶೇಷ ಗ್ರಾಮಸಭೆಯನ್ನು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಉದ್ಘಾಟಿಸಿದರು.



ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ತಾಲ್ಲೂಕಿನ ಮುದ್ದೇನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಏರ್ಪಡಿಸಿದ ವಿಶೇಷ ಗ್ರಾಮಸಭೆಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಭಾಗವಹಿಸಿದ್ದು ಸಭೆಗೆ ವಿಶೇಷ ಶೋಭೆ ತಂದಿತು.

ಕೈಗಾರಿಕೆಗಳು ಇಲ್ಲದಿದ್ದರೆ ಅಭಿವೃದ್ಧಿಯೇ ಇಲ್ಲ ಎಂಬ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯನವರ ಮಾತಿನಂತೆ ಪಂಚಾಯ್ತಿಗೊಂದು ಸಣ್ಣ ಸಣ್ಣ ಉದ್ದಿಮೆಗಳನ್ನು ಸ್ಥಾಪಿಸಬೇಕಾಗಿದೆ. ಈ ಹಂತದಲ್ಲಿ ಮುದ್ದೇನಹಳ್ಳಿ ಗ್ರಾಮ ಪಂಚಾಯತ್‌ನಲ್ಲಿ ಸಣ್ಣ ಸಣ್ಣ ಉದ್ದಿಮೆಗಳು ಆರಂಭವಾಗಲಿ ಇದರಿಂದ ಗ್ರಾಮದ ಜನತೆಗೆ ಕೆಲಸ, ಕನಿಷ್ಠ ಆದಾಯ ಸಿಗುವುದರ ಜೊತೆಗೆ ತಲಾ ಆದಾಯ ಹೆಚ್ಚಾಗಿ ರಾಜ್ಯ ರಾಷ್ಟ್ರದ ಸಂಪತ್ತು ವೃದ್ಧಿಯಾಗಲಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಎಚ್.ಕೆ.ಪಾಟೀಲ್ ಹೇಳಿದರು.

ತಾಲ್ಲೂಕಿನ ಸರ್. ಎಂ. ವಿಶ್ವೇಶ್ವರಯ್ಯರವರ ಜನ್ಮಸ್ಥಳ ಮುದ್ದೇನಹಳ್ಳಿಯ ಸರ್. ಎಂ. ವಿಶ್ವೇಶ್ವರಯ್ಯರವರ ಮನೆಯ ಮುಂಬಾಗದಲ್ಲಿರುವ ಗ್ರಾಮ ಪಂಚಾಯತ್ ಕಚೇರಿ ಮುಂದೆ ರಾಜೀವ್ ಗಾಂಧಿ ಅವರ ಜನ್ಮದಿನದ ಪ್ರಯುಕ್ತ ಹಮ್ಮಿಕೊಂಡಿದ್ದ ಗ್ರಾಮಸಭೆಗೆ ಚಾಲನೆ ನೀಡಿ ಸಚಿವರು ಮಾತನಾಡಿದರು.

ಪಂಚಾಯತಿಗೊಂದು ಸಣ್ಣಸಣ್ಣ ಉದ್ದಿಮೆ ಕೇಂದ್ರ ಆರಂಭಿಸಲು ವಿಟಿಯುನವರೊಂದಿಗೆ ಜಿಲ್ಲಾ ಪಂಚಾಯತಿ ಸಿಇಒ, ಡಿಸಿ, ಜಿಲ್ಲಾ ಪಂಚಾಯತಿ

ಕಾರ್ಯನಿರ್ವಹಣಾ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ



ಉಪ ಕಾರ್ಯದರ್ಶಿ ಮಾತುಕತೆ ನಡೆಸಿ ಪಂಚಾಯತಿಯಲ್ಲಿ ಸಣ್ಣ ಉದ್ದಿಮೆ ಪ್ರಾರಂಭಸಲು ಮುಂದಾಗುವ ಮೂಲಕ ಮಾದರಿಯಾಗಬೇಕೆಂದು ಸೂಚಿಸಿದರು.

ಮುದ್ದೇನಹಳ್ಳಿ ಗ್ರಾಮ ಪಂಚಾಯತಿಯು ದೊಡ್ಡ ಗ್ರಾಮ ಪಂಚಾಯತಿ ಎನಿಸಿದ್ದು ಇಲ್ಲಿರುವ ಕಂಗಾನಹಳ್ಳಿಯನ್ನು ಗ್ರಾಮ ಪಂಚಾಯತಿಯನ್ನಾಗಿ ಮಾಡಲು ಶಾಸಕ ಡಾ. ಕೆ. ಸುಧಾಕರ್ ಪ್ರಸ್ತಾವನೆ ನೀಡಿದ್ದಾರೆ. ಈ ಕುರಿತು ಸರ್ಕಾರದಲ್ಲಿ ಪರಿಶೀಲನೆ ನಡೆಸುವುದಾಗಿ ಸಚಿವರು ತಿಳಿಸಿದರು.

ಶುದ್ಧ ನೀರಿನ ಘಟಕ ಆರಂಭಿಸಲು ರಾಜ್ಯ ಸರ್ಕಾರ ಬುಧವಾರ 137 ಹೆಚ್ಚುವರಿ ಘಟಕಕ್ಕೆ ಮಂಜೂರು ಮಾಡಿ ಹೊಸ ಆದೇಶ ಹೊರಡಿಸಿದೆ. ಜಿಲ್ಲಾ ಪಂಚಾಯತಿ ಸಿಇಓ ಜಿಲ್ಲೆಗೆ ಅವಶ್ಯಕತೆಯಿರುವ 219 ಘಟಕಗಳೊಂದಿಗೆ ಹೆಚ್ಚುವರಿಯಾಗಿ 137 ಶುದ್ಧೀಕರಣ ಘಟಕಗಳನ್ನು ಅಳವಡಿಸಲಿ. ಜಿಲ್ಲೆ ಹಣವನ್ನು ನಿಧಾನವಾಗಿ ಖರ್ಚು ಮಾಡುತ್ತಿರುವುದರಿಂದ ಜನರಿಗೆ ಸೌಕರ್ಯಗಳು ವಿಳಂಬವಾಗುತ್ತಿದೆ. ಡಿಸೆಂಬರ್ ಒಳಗೆ ಶುದ್ಧ ಕುಡಿಯುವ ನೀರಿನ ಘಟಕ ಪ್ರಾರಂಭವಾಗಬೇಕು ಮತ್ತು 100 ಶುದ್ಧ ನೀರಿನ ಘಟಕಗಳು ಈ ವಿಭಾಗದಲ್ಲಿ ಅಳವಡಿಕೆಯಾಗಿರಬೇಕು ಎಂದು ಸಚಿವರು ತಿಳಿಸಿದರು.

ಪ್ರಜ್ಞಾವಂತರು ಹುಟ್ಟಿದ ನಾಡಲ್ಲಿ ಬಯಲು ಶೌಚಮುಕ್ತ ಮಾಡಲು ಎಲ್ಲರ ಮನೆಯಲ್ಲೂ ಶೌಚಾಲಯ ಅಗತ್ಯವಾಗಿದೆ. ಅದನ್ನು ನಿರ್ಮಿಸಲು ಸರ್ಕಾರ 12 ಸಾವಿರ ರೂ. ಸಹಾಯಧನ ನೀಡುತ್ತದೆ. ಇದರ ಹೊರತಾಗಿ ಹೆಚ್ಚಿನ ಹಣ ಆದರೂ ಅದನ್ನು ಎಲ್ಲರೂ ತೆತ್ತು ತಮ್ಮ ಮನೆಗೊಂದು ಶೌಚಾಲಯ ನಿರ್ಮಿಸಿಕೊಂಡರೆ ಆರೋಗ್ಯ, ಸ್ವಚ್ಛತೆ ಮೂಡುತ್ತದೆ. ಸ್ತ್ರೀಯರಿಗೆ ಬಹಳ ಅನುಕೂಲವಾಗಲಿದೆ. ಇದನ್ನರಿತು ಎಲ್ಲರೂ ಶೌಚಾಲಯ ನಿರ್ಮಿಸಲು ಮುಂದಾಗುವ ಮೂಲಕ ಗ್ರಾಮ ಪಂಚಾಯತಿಯನ್ನು ಮಾದರಿಯಾಗಿಸಿ ಎಂದು ಸಚಿವರು ಕರೆ ನೀಡಿದರು.

ದೇಶದಲ್ಲಿ ಎರಡು ವರ್ಗಗಳಿವೆ. ಒಂದು ಬಾಟಲ್ ನೀರು ಕುಡಿಯುವ ವರ್ಗವಾದರೆ ಮತ್ತೊಂದು ಶ್ರಮಜೀವಿ ಅಲ್ಲೆಲ್ಲೋ ಸಿಗುವ ಕೆರೆ ಕುಂಟೆ ನೀರು ಕುಡಿದು ದಣಿವಾರಿಸಿಕೊಳ್ಳುವ ವರ್ಗ. ರಾಜ್ಯ ಸರ್ಕಾರ ಸನ್ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ನವರ ನೇತೃತ್ವದಲ್ಲಿ ಪ್ರತಿ ಪಂಚಾಯ್ತಿಯ ಕಟ್ಟ ಕಡೆಯ ವ್ಯಕ್ತಿಗೂ ಶುದ್ಧ ಕುಡಿಯುವ ನೀರು ಒದಗಿಸುವುದು ಆದ್ಯ ಕರ್ತವ್ಯ ಎಂದು ಭಾವಿಸಿದೆ ಎಂದರು.

ಈ ಸಂದರ್ಭದಲ್ಲಿ ಮುದ್ದೇನಹಳ್ಳಿ ಗ್ರಾಮ ಪಂಚಾಯತಿಯ ಮುದ್ದೇನಹಳ್ಳಿ, ಜೇಗಟೇನಹಳ್ಳಿ ಮತ್ತು ಗಂಟಗಾನಹಳ್ಳಿ ಪಂಚಾಯತಿಗಳು ಬಯಲು ಶೌಚಮುಕ್ತ ಗ್ರಾಮಗಳೆಂದು ಪಂಚಾಯತಿಗಳ ಎಲ್ಲರ ಮನೆಯಲ್ಲಿ ಶೌಚಾಲಯ ನಿರ್ಮಿಸುವ ಮೂಲಕ ಮಾದರಿಯಾಗಿದೆ. ಈ ಹಿನ್ನೆಲೆಯಲ್ಲಿ ಮಾಜಿ ಶಾಸಕ



ಎಸ್.ಎಂ.ಮುನಿಯಪ್ಪನವರ ಸ್ವಂತ ಗ್ರಾಮ ಜೇಗಟೇನಹಳ್ಳಿ ಗ್ರಾಮ ಪಂಚಾಯತಿಗೆ ಸಚಿವರಾದ ಎಚ್.ಕೆ.ಪಾಟೀಲರವರು ಪ್ರಶಸ್ತಿಪತ್ರ ನೀಡಿ ಗೌರವಿಸಿದರು.

ಸಮಾರಂಭದಲ್ಲಿ ಶಾಸಕ ಡಾ॥ ಕೆ. ಸುಧಾಕರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ, ನಾಗಾಂಬಿಕ ದೇವಿ, ಡಿಸಿ ವೆಂಕಟೇಶ್, ಜಿಲ್ಲಾ ಪಂಚಾಯತ್ ಸಿಇಓ ಕಾವೇರಿ, ಜಿಲ್ಲಾ ಪಂಚಾಯತ್ ಅಧ್ಯಕ್ಷ ಮುನೇಗೌಡ, ಗ್ರಾಮ ಪಂಚಾಯತ್ ಅಧ್ಯಕ್ಷೆ ಲಲಿತ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸಿದ್ದರಾಮಯ್ಯ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೃಷ್ಣಮೂರ್ತಿ, ಸಿಕಾರ್ಡ್ ಬ್ಯಾಂಕ್ ಅಧ್ಯಕ್ಷ ನಾಗೇಶ್ ಮತ್ತಿತರು ಹಾಜರಿದ್ದರು.

# ವಿಕೇಂದ್ರೀಕರಣ ಹಾಗೂ ಮಹಿಳೆ

– ಬೂವನಹಳ್ಳಿ ನಾಗರಾಜ್

ಲೇಖನ

ಮಹಿಳೆಯರ ಸಾಮಾಜಿಕ ಸ್ಥಾನಮಾನದ, ಅವರ ವೈವಾಹಿಕ ನೀತಿ ನಿಯಮಾವಳಿಗಳ ವಿಷಯದಲ್ಲಿ ಯಾವುದೇ ರೀತಿಯ ಯಾವುದೇ ಬಗೆಯ ಶಾಸ್ತ್ರ ವಾಕ್ಯಗಳನ್ನು ನೆಪಮಾಡಿ ಶೋಷಿಸುವುದು ಶುದ್ಧ ತಪ್ಪು.

ಹಿಂದುಳಿದ ವರ್ಗ ಜಾತಿಗಳಂತೆ ಮಹಿಳೆಯರಿಗೂ ಸಂಸ್ಕೃತಿ, ವಿದ್ಯಾಭ್ಯಾಸ, ಸನಾತನ ಆಧ್ಯಾತ್ಮಕ ಸಂಸ್ಕೃತಿ ಅತ್ಯಾವಶ್ಯ. ಇದರಿಂದ ಅವರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಸಮರ್ಥರಾಗುತ್ತಾರೆ.

– ಸ್ವಾಮಿ ವಿವೇಕಾನಂದ




ಮಹಿಳಾ ಮೀಸಲಾತಿಯಿಂದ ನಮ್ಮ ಮಹಿಳೆಯರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಪಾಲ್ಗೊಂಡು ಗ್ರಾಮೀಣ ಪ್ರದೇಶದ, ಗ್ರಾಮಗಳ ಮತ್ತು ಬಡಜನರ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ವಿಶೇಷವಾಗಿರುತ್ತದೆ.

ಹಿಂದೆ ಸ್ತ್ರೀ–ಪುರುಷರ ನಡುವೆ ಅಸಮಾನತೆಯ ನೆರಳಲ್ಲಿ ಮಹಿಳೆ ಸಾಗುತ್ತಿದ್ದ ಕಾಲಘಟ್ಟಗಳಲ್ಲಿ ಪ್ರಭಾವಿ ಹಿನ್ನೆಲೆಯುಳ್ಳ ಮಹಿಳೆಯರು ಮನೆತನಗಳ ಹಿನ್ನೆಲೆ ಮತ್ತು ಪರಿಸ್ಥಿತಿಯ ಸಂದರ್ಭಾನುಸಾರ ಮಹಿಳೆಯರು ಆಡಳಿತದಲ್ಲಿ ಭಾಗವಹಿಸಿದ ಹಲವಾರು ನಿದರ್ಶನಗಳನ್ನು ಕಾಣಬಹುದಾಗಿತ್ತು.

ಈ ನಿದರ್ಶನಗಳೆಲ್ಲವೂ ಸಂದರ್ಭದ ಅನಿವಾರ್ಯಗಳಾಗಿದ್ದವೇ ಹೊರತು ಸ್ತ್ರೀಯರಿಗೆ ಸಮಾನ ಸ್ಥಾನಮಾನಗಳನ್ನು ನೀಡಿರುವ ಸಮ–ಸಮಾಜದ ಪ್ರತೀಕವಾಗಿರಲಿಲ್ಲ.

ಪ್ರಸ್ತುತ ಜಾಗತೀಕರಣದ ನೆಲೆಯಲ್ಲಿ ಸಾಗುತ್ತಿರುವ ಸಂದರ್ಭದಲ್ಲಿ ಲೋಕಸಭಾ, ರಾಜ್ಯಸಭಾ ಹಾಗೂ ವಿಧಾನಸಭಾ ಸದಸ್ಯತ್ವದ ಸ್ಥಾನಗಳಲ್ಲಿಯೂ ಸಹ ಮಹಿಳೆಯರಿಗೆ ಮೀಸಲಾತಿಯನ್ನು ನೀಡುವ ನಿಟ್ಟಿನಲ್ಲಿ ಚಿಂತನೆಗಳು ಆರಂಭಗೊಂಡಿವೆ. ಈ ದಿಸೆಯಲ್ಲಿ ಮಸೂದೆಯೊಂದು ಶಾಸನವಾಗಲು

ನಿರ್ದೇಶಕರು (ಸುಗ್ರಾಯೋ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು



ಲೋಕಸಭೆಯಲ್ಲಿ ಮಂಡಿತವಾಗಿದೆ. ಮುಂಬರುವ ದಿನಗಳಲ್ಲಿ ಚರ್ಚೆಯಾಗಿ ಹೊಸ ಯುಗದಲ್ಲಿ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯಗಳು ಸಿಗುವಂತಹ ಆವಿಷ್ಕಾರ ರೂಪುಗೊಳ್ಳಬೇಕಾಗಿದೆ. ಇದು ಔಚಿತ್ಯ ಹಾಗೂ ಅರ್ಥಪೂರ್ಣ ಕೂಡ.

### ವಿಕೇಂದ್ರೀಕರಣದ ವ್ಯವಸ್ಥೆಯಲ್ಲಿ ಸ್ತ್ರೀ :

ಹಿಂದೆ ವಂಶ ಪಾರಂಪರ್ಯ ಆಡಳಿತದ ಕುರುಹುಗಳಾಗಿ ಈ ಹಿಂದೆ ಪಂಚಾಯಿತಿ ಸಂಸ್ಥೆಗಳಲ್ಲಿ ಸ್ತ್ರೀಯರು ಪ್ರಧಾನ ಪಾತ್ರ ವಹಿಸುತ್ತಿದ್ದ ಸಂದರ್ಭಗಳನ್ನು ಹೊರತುಪಡಿಸಿ ಮಹಿಳೆಯರಿಗೆ ಮೀಸಲಾತಿಗಳನ್ನು ಕಲ್ಪಿಸಿದ್ದ ಉದಾಹರಣೆ ಕಾಣಸಿಗುವುದಿಲ್ಲ.

### 80ರ ದಶಕದಲ್ಲಿ ...

- ದೇಸಿ ಚಿಂತನೆಗಳ ಫಲವಾಗಿ ಕರ್ನಾಟಕದಲ್ಲಿ ಎರಡು ಹಂತದ ವಿಕೇಂದ್ರೀಕರಣ ವ್ಯವಸ್ಥೆಯ ಕರ್ನಾಟಕ ಜಿಲ್ಲಾ ಪರಿಷತ್ತುಗಳು, ತಾಲ್ಲೂಕು ಸಲಹಾ ಸಮಿತಿಗಳು, ಮಂಡಲ ಪಂಚಾಯತಿಗಳು ಮತ್ತು ನ್ಯಾಯ ಪಂಚಾಯತಿಗಳ ಕಾಯ್ದೆ, 1983ನ್ನು ರೂಪಿಸಿ 1987ರಲ್ಲಿ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿರುತ್ತದೆ.
- ಅಲ್ಲದೆ 18 ವಯಸ್ಸಿನವರಿಗೆ ಮತದಾನದ ಹಕ್ಕು, ಮಹಿಳೆಯರಿಗೆ ಶೇ.25 ಮೀಸಲು ಹಾಗೂ ಪ.ಜಾತಿ/ಪ.ಪಂಗಡದವರಿಗೆ ಜನಸಂಖ್ಯೆ ಆಧಾರಿತ ಮೀಸಲು ನಿಗದಿಗೊಳಿಸಿದ್ದು ವಿಕೇಂದ್ರೀಕರಣದ ಹೊಸ ಪರ್ವಕ್ಕೆ ನಾಂದಿಯಾಯಿತು.
- ಕರ್ನಾಟಕದ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಸಂವಿಧಾನದ 73 ಹಾಗೂ 74ನೇ ತಿದ್ದುಪಡಿಗಳನ್ನು ತರುವ ಆರಂಭಗಳಿಗೆ ಮಾದರಿಯಾಯಿತು.

ಈ ರೀತಿ ರಾಜ್ಯದಲ್ಲಿ ಪಂಚಾಯತ್ ವ್ಯವಸ್ಥೆಯಲ್ಲಿ ಶೇ.25 ರಷ್ಟು ಮೀಸಲಾತಿಯನ್ನು ಕಲ್ಪಿಸಿದ್ದರ ಫಲವಾಗಿ ರಾಜ್ಯದ ಜಿಲ್ಲಾ ಪರಿಷತ್‌ಗಳ 908 ಸದಸ್ಯರಲ್ಲಿ 216 ಮಂದಿ ಮಹಿಳಾ ಸದಸ್ಯರು ಆಯ್ಕೆಯಾಗಿ ಬರಲು ಅವಕಾಶವಿತ್ತು.

ಈ ಮಹಿಳಾ ಮೀಸಲಾತಿಯಿಂದ ನಮ್ಮ ಮಹಿಳೆಯರು ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ಪಾಲ್ಗೊಂಡು ಗ್ರಾಮೀಣ ಪ್ರದೇಶದ, ಗ್ರಾಮಗಳ ಮತ್ತು ಬಡಜನರ ಸಮಸ್ಯೆಗಳಿಗೆ ಮುಖಾಮುಖಿಯಾಗಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದು ವಿಶೇಷವಾಗಿರುತ್ತದೆ.

ಕೇವಲ ಸದಸ್ಯತ್ವ ಸ್ಥಾನಗಳಲ್ಲದೇ ಪದಾಧಿಕಾರಿಗಳ ಹುದ್ದೆಗಳಲ್ಲೂ ಆಡಳಿತ ನಡೆಸಿ ಸ್ತ್ರೀ ಸಮಾನತೆಯ ಹೊಸ ಮನ್ವಂತರಕ್ಕೆ ಮುನ್ನುಡಿ ಬರೆದಿದ್ದಾರೆ.

### 90ರ ದಶಕದ ನಂತರದ ದಿನಗಳಲ್ಲಿ ...

- ಶ್ರೀ ರಾಜೀವ್ ಗಾಂಧಿರವರಿಗೆ ಮೇಲ್ ಸ್ತರದಲ್ಲಿದ್ದ ಅಧಿಕಾರವನ್ನು, ಅನುದಾನಗಳನ್ನು ಕೆಳಗಿನ ಹಂತದ ಸಂಸ್ಥೆಗಳಿಗೆ ವಿಕೇಂದ್ರೀಕರಿಸಿ ಮೂರು ಹಂತದ ಪಂ.ರಾಜ್ ವ್ಯವಸ್ಥೆಯನ್ನು ಏಕರೂಪಿಯಾಗಿ ರಾಷ್ಟ್ರದಲ್ಲಿ ಜಾರಿಗೆ ತರುವ ಆಶಯವನ್ನು ಹೊಂದಿದ್ದರು. ಅಲ್ಲದೆ ಈ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನರು ಭಾಗವಹಿಸುವಂತಾಗಬೇಕು ಹಾಗೂ ಮಹಿಳೆಯರಿಗೆ ಪ್ರಾತಿನಿಧ್ಯವಿರಬೇಕು ಮತ್ತು ಈ ವ್ಯವಸ್ಥೆಗೆ ಸಂವಿಧಾನದ ಮನ್ನಣೆ ಸಿಗುವಂತಾಗಬೇಕೆಂದು ಬಯಸಿ ಸಂವಿಧಾನಕ್ಕೆ ತಿದ್ದುಪಡಿಗಳನ್ನು ತರಲು ಕಾರಣವಾದರು.



- ಆದರೆ 1992ರಲ್ಲಿ ಪ್ರಧಾನ ಮಂತ್ರಿಗಳಾದ ಶ್ರೀ ಪಿ. ವಿ. ನರಸಿಂಹರಾವ್ ನೇತೃತ್ವದ ಕೇಂದ್ರ ಸರ್ಕಾರವು ಸಂವಿಧಾನದ 73 ಹಾಗೂ 74 ನೇ ತಿದ್ದುಪಡಿ ಮಸೂದೆಯನ್ನು ಸಂಸತ್ತಿನ ಉಭಯ ಸದನಗಳಲ್ಲಿ ಮಂಡಿಸಿ ಅನುಮೋದನೆ ಪಡೆಯಿತು. ಏಪ್ರಿಲ್ 24 1993ರಲ್ಲಿ ಕಾನೂನಾಗಿ ರಾಷ್ಟ್ರಾದ್ಯಂತ ಏಕರೂಪಿಯಾಗಿ ಅನ್ವಯವಾಗುವಂತೆ ಜಾರಿಗೆ ಬಂದಿತು.

- ಕರ್ನಾಟಕದ 93ರ ಪಂಚಾಯತಿ ಕಾಯಿದೆ ಪ್ರಕಾರ ಪಂಚಾಯತ್ ರಾಜ್ ಸಂಸ್ಥೆಗಳ ಸದಸ್ಯ ಸ್ಥಾನಕ್ಕೆ ನೇರ ಹಾಗೂ ಗ್ರಾಮ ಪಂಚಾಯತಿಗಳಿಗೆ ಪಕ್ಷಾತೀತವಾಗಿ ಚುನಾವಣೆ, ಮಹಿಳೆಯರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಮೀಸಲು ಹಾಗೂ ಪ.ಜಾ/ಪ.ಪಂಗಡದವರಿಗೆ ಜನಸಂಖ್ಯೆ ಆಧಾರಿತ ಮೀಸಲು ವ್ಯವಸ್ಥೆಯನ್ನು ಕಲ್ಪಿಸಿ, ಪದಾಧಿಕಾರಿ ಹುದ್ದೆಗಳಿಗೂ ಮೀಸಲು ವ್ಯವಸ್ಥೆಯನ್ನು ವಿಸ್ತರಿಸಿದ್ದು ವಿಶೇಷವಾಗಿದೆ.

ಹೊಸ 1993ರ ಕಾಯ್ದೆಯಲ್ಲಿ ಮಹಿಳೆಯರಿಗೆ ಮೀಸಲಾತಿಯನ್ನು ಕಲ್ಪಿಸಿದ್ದರ ನಂತರದಿಂದ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಸದಸ್ಯತ್ವ ಸ್ಥಾನ ಹಾಗೂ ಪದಾಧಿಕಾರಿಗಳ ಹುದ್ದೆಗಳಾದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಗಳಲ್ಲೂ ಮೀಸಲಾತಿಗಳನ್ನು ಕಲ್ಪಿಸಿದ್ದರಿಂದ ಎಲ್ಲಾ ವರ್ಗದ ಮಹಿಳೆಯರು ಪಂಚಾಯತ್ ಆಡಳಿತದಲ್ಲಿ ಭಾಗವಹಿಸುವಂತೆ ಅವಕಾಶ ಕಲ್ಪಿಸಲಾಗಿದೆ.

ಮಹಿಳಾ ಮೀಸಲಾತಿಯನ್ನು ಸಾಮಾನ್ಯ ವರ್ಗಕ್ಕಲ್ಲದೇ ಹಿಂದುಳಿದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಹಿಳೆಯರಿಗೂ ಸಹ ಮೀಸಲಾತಿಯನ್ನು ಕಲ್ಪಿಸಿದ್ದರಿಂದ ಸಮಾಜದ ಎಲ್ಲಾ ಜನಾಂಗಗಳ ಮಹಿಳೆಯರೂ ಮೂರು ಹಂತಗಳ ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ, ಅಭಿವೃದ್ಧಿಯಲ್ಲಿ ಪಾಲ್ಗೊಂಡು ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಹಾಗೂ ಶ್ರಮಿಸುತ್ತಾ ಬರುತ್ತಿದ್ದಾರೆ.

## 21 ರ ದಶಕದ ನಂತರದಲ್ಲಿ :

ರಾಜ್ಯದ ಜನಸಂಖ್ಯೆಗೆ ಸರಿಸುಮಾರು ಅರ್ಧದಷ್ಟು ಇರುವ ಜನಸಂಖ್ಯೆಯನ್ನಾಧರಿಸಿ ಮಹಿಳೆಯರಿಗೆ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಶೇ.50 ರಷ್ಟು ಮೀಸಲಾತಿಯನ್ನು ನೀಡಬೇಕೆಂಬ ಸಮಾಜದ ಎಲ್ಲಾ ವರ್ಗದ, ಎಲ್ಲಾ ಜನರ ಆಶಯದಂತೆ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿಯನ್ನು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಕಲ್ಪಿಸಲಾಗಿರುತ್ತದೆ.

ನಾನಳಿವೆ–ನೀನಳಿವೆ
ನಮ್ಮೆಲುಬುಗಳ ಮೇಲೆ
ಮೂಡುವುದು ಮೂಡುವುದು
ನವ ಭಾರತದ ಲೀಲೆ

**– ರಾಷ್ಟ್ರ ಕವಿ ಕುವೆಂಪು**

ಸಮಾಜದ ಬದಲಾವಣೆ ಯಾವಾಗಲೂ ಸಕಾರಾತ್ಮಕ ಬದಲಾವಣೆಯತ್ತ ಸಾಗಬೇಕೆನ್ನುವ ರಾಷ್ಟ್ರಕವಿಗಳ ಆಶಯದಂತೆ

ಶೇ.50 ರಷ್ಟು ಮಹಿಳೆಯರಿಗೆ ಮೀಸಲಾತಿಯನ್ನು ನೀಡಿದ ಅವಕಾಶವು ಸಮ–ಸಮಾಜದ ನಿರ್ಮಾಣದ ಹೆಜ್ಜೆಯಲ್ಲಿ ಕ್ರಾಂತಿಕಾರಕ ಮಹತ್ವದ ಬದಲಾವಣೆ ಎಂದೇ ಹೇಳಬಹುದು.

ಈ ಮಹಿಳೆಯರಿಗೆ ಶೇ.50 ರಷ್ಟು ಮೀಸಲಾತಿ ಅವಕಾಶ ಕಲ್ಪಿಸಿದ್ದರಿಂದ ಇತ್ತೀಚೆಗೆ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಮಹಿಳೆಯರು ಶೇ.50 ರಷ್ಟಕ್ಕೂ ಹೆಚ್ಚು ಆಯ್ಕೆಯಾಗಿ ಬಂದಿರುತ್ತಾರೆ.

ಲೇಖನ

# "ರೈತ ಬಂಧುಗಳಿಗೊಂದು ಕಿವಿ ಮಾತು"
# ಕೃಷಿ ಉತ್ಪನ್ನಗಳ ಆನ್‌ಲೈನ್ ಮಾರುಕಟ್ಟೆ ಕರ್ನಾಟಕ ಒಂದು ಮಾದರಿ



ಮಂಜುನಾಥ. ಡಿ. ಜಿ.

ಕೃಷಿಕರು ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು "ಕೃಷಿ ಹುಟ್ಟುವಳಿ ಮಾರಾಟ ಸಮಿತಿ" (APMC) ಗಳನ್ನು ರೈತರು, ವ್ಯವಹಾರಗಾರರು ಹಾಗೂ ಸರ್ಕಾರಿ ಪ್ರತಿನಿಧಿಗಳನ್ನು ಒಳಗೊಂಡ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ರೈತರು ಹಾಗೂ ರೈತ ಉತ್ಪನ್ನಗಳ ವ್ಯಾಪಾರಸ್ಥರಿಗೆ ಅನುಕೂಲ ಕಲ್ಪಿಸುವುಕ್ಕಾಗಿ ಕೃಷಿ ಉತ್ಪನ್ನಗಳ ಮಾರಾಟ ಪದ್ದತಿಯಲ್ಲಿ ಪಾರದರ್ಶಕ ಹಾಗೂ ಪರಿಣಾಮಕಾರಿಯಾದ ಮಾರಾಟ ಪದ್ದತಿಯ ಜಾರಿಗಾಗಿ ಆನ್‌ಲೈನ್ (ಗಣಕಯಂತ್ರ / ಅಂರ್ತಜಾಲ) ಆಧಾರಿತ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯ ಕುರಿತು ಒಂದಿಷ್ಟು ವಿಶ್ಲೇಷಣೆ.



ಕೃಷಿಕರು ತಾವು ಬೆಳೆದ ಬೆಳೆಗಳನ್ನು ಮಾರಾಟ ಮಾಡಲು "ಕೃಷಿ ಹುಟ್ಟುವಳಿ ಮಾರಾಟ ಸಮಿತಿ"(APMC)ಗಳನ್ನು ರೈತರು, ವ್ಯವಹಾರಗಾರರು ಹಾಗೂ ಸರ್ಕಾರಿ ಪ್ರತಿನಿಧಿಗಳನ್ನು ಒಳಗೊಂಡ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ಆದರೆ ಇವುಗಳ ಕಾರ್ಯನಿರ್ವಹಣೆಯಲ್ಲಿ ಅನೇಕ ಲೋಪದೋಷಗಳಿರುವುದರಿಂದ, ಇಲ್ಲಿಗೆ ತಾವು ಬೆಳೆದ ಉತ್ಪನ್ನಗಳನ್ನು ಮಾರಾಟ ಮಾಡಲು ತರದೆ, ಮಾರುಕಟ್ಟೆಯಿಂದ ದೂರ ಸರಿಯುತ್ತಿರುವ ಈ ಸಂದರ್ಭಲ್ಲಿ ರೈತರ ಶ್ರಮಕ್ಕೆ ಒಳ್ಳೆಯ ಪ್ರತಿಫಲ ನೀಡುವುದು ಸದ್ಯದ ಆದ್ಯತೆಯ ಕೆಲಸವಾಗಿದೆ.

ಅನೇಕ ಮಾರುಕಟ್ಟೆ ಆಧಾರಿತ ಸಮಸ್ಯೆಗಳಾದ ದಳ್ಳಾಳಿಗಳ ಮೋಸ,ಅಳತೆ ಮತ್ತು ತೂಕದಲ್ಲಿ ಮೋಸ, ನ್ಯಾಯಯುತ ಬೆಲೆ ಸಿಗದಿರುವುದು, ಮಾರುಕಟ್ಟೆಗಳ ಮಾಹಿತಿಯ ಕೊರತೆ, ಸಾರಿಗೆ-ಸಂಪರ್ಕದ ಸೌಲಭ್ಯಗಳ ಕೊರತೆ, ಉಗ್ರಾಣಗಳು

ಉಪನ್ಯಾಸಕರು.ಸರಕಾರಿ ಪದವಿ ಪೂರ್ವ ಕಾಲೇಜು ಅರಳೇಶ್ವರ ಹಾನಗಲ್ಲ ತಾ.ಹಾವೇರಿ ಜಿ.
ಮೊಬೈಲ್ ನಂ:9844492945



ಇಲ್ಲದಿರುವುದು ಇಂತಹ ಅನೇಕ ಸಮಸ್ಯೆಗಳಿಂದ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆ ಬಳಲುತ್ತಿದೆ.

ಈ ಸಮಸ್ಯೆಗಳ ನಿರ್ಮೂಲನೆಗಾಗಿ ಸರ್ಕಾರವು APMC ಗಳನ್ನು ಸ್ಥಾಪಿಸಲಾಗಿದೆ.ಆದಾಗ್ಯೂ ಇವು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲವಾಗಿವೆ. ರೈತರು ತಮ್ಮ ಉತ್ಪನ್ನಗಳನ್ನು ಸುಗ್ಗಿಯ ಕಾಲದಲ್ಲಿಯೇ ಒತ್ತಡದಲ್ಲಿ ಮಾರಾಟ ಮಾಡುತ್ತಾರೆ. ಸಾಮಾನ್ಯವಾಗಿ ಸುಗ್ಗಿಯ ಸಮಯದಲ್ಲಿ ಉತ್ಪನ್ನಗಳ ಬೆಲೆ ಕಡಿಮೆ ಇರುತ್ತವೆ. ಸರಕುಗಳಿಗೆ ಸೂಕ್ತ ಮಾರುಕಟ್ಟೆ ದೊರೆಯದೆ ರೈತರು ನಷ್ಟವನ್ನು ಹೊಂದುತ್ತಾರೆ. ಈ ಎಲ್ಲಾ ಕಾರಣಗಳು ಜ್ವಲಂತ ಸಮಸ್ಯೆಯಾಗಿರುವ ಕಾರಣ ರೈತ ಆತ್ಮಹತ್ಯೆಗೆ ಶರಣಾಗುತ್ತಿರುವುದು ಸುಳ್ಳಲ್ಲ.

2011ರ ಜನಗಣತಿಯ ಪ್ರಕಾರ ದೇಶದಲ್ಲಿ ಇಂದಿಗೂ ಶೇ.65 ರಷ್ಟು ರೈತ ಕುಟುಂಬಗಳ ಅಸ್ತಿತ್ವವನ್ನು ಕಾಣುತ್ತೇವೆ. ಇಂದಿಗೂ ಶೇ.70 ರಷ್ಟು ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅರ್ಥವ್ಯವಸ್ಥೆಯ ಪ್ರಾಥಮಿಕ ವಲಯವನ್ನು ಲಾಭದಾಯಕವಾಗಿಸಿ, ಅನಾವಶ್ಯಕವಾಗಿ ಕೃಷಿಯಿಂದ ವಿಮುಖವಾಗುತ್ತಿರುವ ಜನತೆಯನ್ನು ಕೃಷಿಯಲ್ಲಿಯೆ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಇಂತಹ ಒಂದು ಸಮಯದಲ್ಲಿ ದೇಶದಲ್ಲಿಯೇ ಮಾದರಿಯಾದಂತಹ ಹೊಸತನದ ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲಾಗುತ್ತಿದೆ.

## ನನ್ನ ಬೆಳೆ–ನನ್ನ ಬೆಲೆ

ದೇಶದ ರೈತರು ಇಂದು ಆತ್ಮಹತ್ಯೆಯಂತಹ ದಾರಿ ಹಿಡಿದಿರುವುದರ ಹಿನ್ನಲೆಯಲ್ಲಿ ಈ ಕೃಷಿ ಉತ್ಪನ್ನಗಳ ಆನ್ ಲೈನ್ ಮಾರಾಟ ವ್ಯವಸ್ಥೆಯು ಸ್ವಾತಂತ್ರ್ಯ ನಂತರದಲ್ಲಿ ರಾಷ್ಟ್ರದಲ್ಲಿ ಹಾಗೂ ರಾಜ್ಯದಲ್ಲಿ ಕೃಷಿ ಮಾರುಕಟ್ಟೆ ಕ್ಷೇತ್ರದಲ್ಲಿ ಅಗಾಧ ಬದಲಾವಣೆಗೆ ಕಾರಣವಾಗುತ್ತಿದೆ. ಬದಲಾಗುತ್ತಿರುವ ತಂತ್ರಜ್ಞಾನ ದಿಂದ ಅದರಲ್ಲೂ ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನಗಳ ಬದಲಾವಣೆಗಳಿಂದಾಗಿ ಕೆಲವು ವರ್ಷಗಳ ಹಿಂದೆ ಸಾಧ್ಯತೆ ಇಲ್ಲದಂತಹ ಸಂಗತಿಗಳು ಈಗ ಸಾಧ್ಯವಾಗುತ್ತಿವೆ. ಕೃಷಿಕ್ಷೇತ್ರದ ಬೆಳವಣಿಗೆಗೆ



ಉತ್ತೇಜನ ನೀಡುವ ಉದ್ದೇಶದಿಂದ ಪುನರಾವಲೋಕನ ಮಾಡಿದ ಕೃಷಿ ಮಾರಾಟ ವ್ಯವಸ್ಥೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತರಲಾಗುತ್ತಿದೆ.

ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಇ–ಕೃಷಿ ಉತ್ಪನ್ನಗಳ ಮಾರಾಟ ವ್ಯವಸ್ಥೆಯನ್ನು 2013 ರ ಕೃಷಿ ಮಾರಾಟ ನೀತಿಯಲ್ಲಿ ಪ್ರಸ್ತಾಪಿಸಿ 2014 ರಲ್ಲಿ ಏಕೀಕೃತ ಮಾರುಕಟ್ಟೆ ವೇದಿಕೆಯಡಿಯಲ್ಲಿ ರೈತರು ಮತ್ತು ಮಾರುಕಟ್ಟೆ ವಹಿವಾಟುದಾರರ ಅನುಕೂಲಕ್ಕಾಗಿ ಕೃಷಿ ಮಾರುಕಟ್ಟೆ ವ್ಯವಸ್ಥೆಯಲ್ಲಿ ದಕ್ಷತೆ ಮತ್ತು ಪಾರದರ್ಶಕತೆಯೊಂದಿಗೆ ಕೃಷಿ ಉತ್ಪನ್ನಗಳಿಗೆ ಅರ್ಹ ಬೆಲೆ ಕಂಡುಕೊಳ್ಳಲು ಸೂಕ್ತ ವೇದಿಕೆಯನ್ನು ರಚಿಸಲಾಗಿದೆ.

### ಕರ್ನಾಟಕ ಮಾದರಿಯ ಮುಖ್ಯಾಂಶಗಳು

- ರೈತರು ಉತ್ತಮ ಬೆಲೆ ಹೊಂದಲು ಹೆಚ್ಚಿನ ಪೈಪೋಟಿಗೆ ಅವಕಾಶ.
- ಎಲ್ಲಾ ಮಾರುಕಟ್ಟೆ ವಹಿವಾಟುಗಳಲ್ಲಿ ಉನ್ನತ ಪಾರದರ್ಶಕ ವ್ಯವಸ್ಥೆ.
- ಎ.ಪಿ.ಎಮ್.ಸಿ ಮಾರುಕಟ್ಟೆಗಳಲ್ಲಿ ಆನ್ ಲೈನ್ ಮೂಲಕ ವ್ಯಾಪಾರ.
- ವ್ಯಾಪಾರಸ್ಥರಿಗೆ ಒಂದೆ ಮಾದರಿಯ ಪರವಾನಿಗೆ ವ್ಯವಸ್ಥೆ.
- ಉತ್ಪನ್ನಗಳ ವರ್ಗೀಕರಣ ಮತ್ತು ದೃಢೀಕರಣ ಮೂಲಕ "ದೂರ ವ್ಯಾಪಾರ ಸೌಲಭ್ಯ"
- SMS/ಕಾಲ್ ಸೆಂಟರ್/ಮೊಬೈಲ್ ಅಪ್ಲಿಕೇಷನ್ ಗಳ ಮೂಲಕ ರೈತರಿಗೆ ಸುಲಭವಾಗಿ ಕೃಷಿ ಸರುಕುಗಳ ಮಾಹಿತಿ ಪೂರೈಕೆ.
- ರೈತರು ಹಣಕಾಸು ಸಂಸ್ಥೆಗಳನ್ನು ಸುಲಭವಾಗಿ ಸಂಪರ್ಕಿಸಲು ಅವಕಾಶ.
- ರೈತರ ಕೃಷಿ ಉತ್ಪನ್ನಗಳಿಗೆ ಮತ್ತು ಮಾರುಕಟ್ಟೆ ಶುಲ್ಕ, ಕಮೀಷನ್ ಮೊತ್ತ ಮುಂತಾದವುಗಳನ್ನು ಪ್ರಾಮಾಣಿಕವಾಗಿ ಆನ್‌ಲೈನ್ ಮೂಲಕ ಬ್ಯಾಂಕ್ ಖಾತೆಗಳಿಗೆ ನೇರಪಾವತಿ.
- ಕೃಷಿಕರ ಕೃಷಿ ಸರಕುಗಳ ಶುದ್ಧತೆ, ವರ್ಗೀಕರಿಸುವಿಕೆ ಮತ್ತು ಪ್ಯಾಕಿಂಗ್ ಕಾರ್ಯನಿರ್ವಹಿಸುವಿಕೆಯ ಮೂಲಕ ಅವುಗಳ ಪ್ರಾಥಮಿಕ ಬೆಲೆ ಹೆಚ್ಚಿಸುವುದಕ್ಕಾಗಿ ದುಡಿಯುವ ಕಾರ್ಯಕರ್ತರಿಗೆ ಪ್ರೋತ್ಸಾಹಧನ.
- ಉಗ್ರಾಣ ಆಧಾರಿತ ಮಾರಾಟದ ಮೂಲಕ ಮಾರುಕಟ್ಟೆಗಳು ಮತ್ತಷ್ಟು ಹತ್ತಿರ.

ಹೀಗೆ ಅನೇಕ ಪ್ರಮುಖ ಲಕ್ಷಣಗಳನ್ನು ಇ–ಮಾರಾಟ ವ್ಯವಸ್ಥೆ ಹೊಂದಿರುವುದು ರೈತರಿಗೆ ಅನುಕೂಲಕರವಾಗಿದ್ದು ಇದರ ಪ್ರಯೋಜನವನ್ನು ರೈತರಿಗೆ ಪ್ರಾಮಾಣಿಕವಾಗಿ ತಲುಪಿಸಿದ್ದಾದರೆ ಇಂದಿನ ರೈತರ ಹಲವು ಸಮಸ್ಯೆಗಳಿಗೆ ಪರಿಹಾರ ದೊರೆತು ರೈತರು ತಕ್ಕಮಟ್ಟಿಗೆ ನೆಮ್ಮದಿ ಪಡೆಯಬಹುದು.

ಈ ವಿಧದ ಮಾರಾಟ ವ್ಯವಸ್ಥೆಯನ್ನು ಅನುಸರಿಸುತ್ತಿರುವ ಕರ್ನಾಟಕದಲ್ಲಿ ಕೃಷಿ ಮಾರುಕಟ್ಟೆ ಅನೇಕ ಸಾಧನೆಗಳಿಗೆ ಕಾರಣವಾಗಿದೆ. ಅವುಗಳೆಂದರೆ,

- ಕರ್ನಾಟಕದಲ್ಲಿ 55 ಮಾರುಕಟ್ಟೆಗಳಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದೆ.
- ಒಂದು ವರ್ಷದ ಪ್ರಾಯೋಗಿಕ ಮಾರಾಟದಲ್ಲಿ ರೂ. 8500 ಕೋಟಿ ಮೌಲ್ಯದ 343 ಲಕ್ಷ ಕ್ವಿಂಟಾಲ್ ಸರಕುಗಳ ಮಾರಾಟ ಮಾಡಲಾಗಿದೆ.
- ಯೋಜನೆಯ ಪ್ರಮುಖ ಲಕ್ಷಣಗಳಾದ ಉತ್ಪನ್ನಗಳ ಗಣಕಿಕೃತ ವಿಜೇತರ ಪಟ್ಟಿ ಘೋಷಣೆ MIS ನ ವರದಿಗಳಲ್ಲಿ ಸಂಶೋಧನಾ ಅನುಸರಣೆ ಮತ್ತು ನಿರ್ವಹಣೆ, ಇ–ಪರ್ಮಿಟ್ ಸೌಲಭ್ಯಗಳ ಬಗ್ಗೆ ಮೆಚ್ಚುಗೆ.
- ಕೇಂದ್ರ ಸರ್ಕಾರವು ಈ ಯೋಜನೆಯ ಬಗ್ಗೆ ಮಾಹಿತಿಯನ್ನು ಪಡೆದಿದ್ದು ಮುಂದಿನ ಹಂತದಲ್ಲಿ ರಾಷ್ಟ್ರವ್ಯಾಪಿ ವಿಸ್ತರಣೆಗೆ ಚಿಂತನೆ ನಡೆಸಿರುವುದು ಇದರ ಮಹತ್ವವನ್ನು ತಿಳಿಸುತ್ತದೆ.

ಹೀಗೆ ಇ–ಮಾರಾಟ ವ್ಯವಸ್ಥೆಯು ಅನೇಕ ಅನುಕೂಲಗಳನ್ನು ಹೊಂದಿದ್ದು ಇದರ ಯಶಸ್ವಿಗೆ ಸಂಬಂಧಿಸಿದ ಆಡಳಿತ ವರ್ಗ, APMC ಯಲ್ಲಿನ ಪ್ರತಿನಿಧಿಗಳು, ವಹಿವಾಟುದಾರರು ಸಹಕಾರ ಮನೋಭಾವನೆಯಿಂದ ವರ್ತಿಸುವುದರ ಜೊತೆಗೆ ಭ್ರಷ್ಟಾಚಾರ, ಅದಕ್ಷತೆ, ದಳ್ಳಾಳಿಗಳ ಮೋಸ, ವಂಚನೆ, ವಿಳಂಬ ನೀತಿ ಅನುಸರಿಸದೆ ರೈತರ ಅಭಿವೃದ್ಧಿಗೆ ಪೂರಕವಾಗಿ ಕಾರ್ಯನಿರ್ವಹಿಸಿದರೆ ಖಂಡಿತ ವಾಗಿಯೂ ರೈತರ ಸಮಸ್ಯೆಗಳಿಗೆ ಪರಿಹಾರ ದೊರೆತೀತು. ಹಾಗೂ ರೈತರು ಸರ್ಕಾರದ ಇಂತಹ ಯೋಜನೆಗಳ ಲಾಭ ಪಡೆಯುವುದರ ಮೂಲಕ ಆತ್ಮಹತ್ಯೆಯಂತಹ ಸಾಮಾಜಿಕ ಸಮಸ್ಯೆಯನ್ನು ಹೊಗಲಾಡಿಸಿ ಪ್ರಜ್ಞಾವಂತರ ರಾಷ್ಟ್ರವಾಗಿ ಅಭಿವೃದ್ಧಿಯಾದೀತು.

ಲೇಖನ

# ಮಳೆ ನೀರು ಕೊಯ್ಲು ಪದ್ಧತಿ ಮತ್ತು ಅಂತರ್ಜಲ ಮರುಪೂರಣ



ಶ್ರೀಮತಿ ಕವಿತಾ ಎಂ,

ನಮ್ಮ ಭೂಮಂಡಲದ ಮೂರು ಭಾಗದಷ್ಟು ನೀರು ಹಾಗೂ ಒಂದು ಭಾಗದಷ್ಟು ಭೂಮಿಯನ್ನು ಹೊಂದಿದ್ದೇವೆ. ಅದರಲ್ಲಿ ಕುಡಿಯಲು, ಬಳಕೆಗೆ ಬೇಕಾಗುವ ನೀರಿನ ಪ್ರಮಾಣ ಬಹಳ ಕಡಿಮೆ. ಈ ನೀರನ್ನು ಬಹಳ ಜಾಗರೂಕತೆಯಿಂದ ಕಾಪಾಡುವುದು ಮತ್ತು ಮಿತವಾಗಿ ಬಳಸುವ ಹೊಣೆ ನಮ್ಮ ಮೇಲಿದೆ. ಹಲವಾರು ಜಾಗಗಳಲ್ಲಿ ಬೋರ್‌ವೆಲ್ ಕೊರೆತದಿಂದಾಗಿ ಭೂಮಿಯೊಳಗಿನ ನೀರು ಹಿಂಗಿಹೋಗುತ್ತಿದೆ. ಪ್ರತಿ ದಿನ ಪತ್ರಿಕೆಯಲ್ಲಿ ಓದುತ್ತಿರುವಂತೆ ಮುಂದಿನ ದಿನಗಳಲ್ಲಿ ನೀರಿಗೆ ಬರ ಉಂಟಾಗುತ್ತದೆ ಹಾಗೂ ನಮ್ಮ ಮುಂದಿನ ಪೀಳಿಗೆಯವರಿಗೆ ಯೋಗ್ಯವಾದ ನೀರು ಸಿಗದೆ ಹೋಗಬಹುದು.



ಈ ದೃಷ್ಟಿಯಿಂದ ನಾವುಗಳು ನೀರನ್ನು ಕಾಪಾಡುವುದು ಮತ್ತು ನೀರಿನ ಮಹತ್ವವನ್ನು ಅರಿತು ಜಾಣ್ಮೆಯಿಂದ ನೀರನ್ನು ಉಳಿತಾಯ ಮಾಡುವ ಕಾರ್ಯವನ್ನು ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಈಗಾಗಲೇ ಮಳೆಗಾಲ ಆರಂಭವಾಗಿದ್ದು ನೀರಿನ ಸಂರಕ್ಷಣೆ ಕಾರ್ಯವನ್ನು ನಾವೆಲ್ಲರೂ ಮಾಡಬೇಕಾಗಿದೆ. ಅದರಲ್ಲಿ ಮಳೆ ನೀರು ಕೊಯ್ಲು ಪದ್ಧತಿ ಮತ್ತು ಅಂತರ್ಜಲ ಮರುಪೂರಣವು ಬಹಳ ಮುಖ್ಯವಾದುದು.

ಮಳೆ ನೀರು ಕೊಯ್ಲು ಎಂಬುದು ಮಳೆ ನೀರನ್ನು ಒಟ್ಟು ಗೂಡಿಸುವ ಅಥವಾ ಸಂಚಯನ ಮಾಡುವ ಮತ್ತು ಶೇಖರಿಸಿಟ್ಟುಕೊಳ್ಳುವ ವಿಧಾನಕ್ಕಿರುವ ಹೆಸರು. ಕುಡಿಯಲು, ಜಾನುವಾರುಗಳಿಗೆ ನೀರುಣಿಸಲು, ನೀರಾವರಿಗಾಗಿ ನೀರಿನ ವ್ಯವಸ್ಥೆ ಮಾಡಲು ನೀರನ್ನು ಶೇಖರಿಸಿಡುವ ವಿಧಾನಕ್ಕೆ ಅಂತರ್ಜಲ ಪುನರ್ಭರ್ತಿ ಕಾರ್ಯ ಪ್ರಕ್ರಿಯೆಯಲ್ಲಿ ನೀರುಪೊಟರೆಯನ್ನು ಪುನಃ ತುಂಬಿಸಲು ಮಳೆ ನೀರು ಕೊಯ್ಲು ಪದ್ಧತಿಯನ್ನು ಬಳಸಲಾಗುತ್ತಿದೆ.

ಮಳೆ ಕೊಯ್ಲು ವ್ಯವಸ್ಥೆಗಳನ್ನು ನಿರ್ಮಲವಾಗಿ ಹಾಗೂ ಉತ್ತಮ ಕಾರ್ಯನಿರ್ವಹಣಾ ಸ್ಥಿತಿಯಲ್ಲಿ ಇಟ್ಟುಕೊಳ್ಳಲು ಅವುಗಳ ಕ್ರಮಬದ್ಧವಾದ ನಿರ್ವಹಣೆ ಹಾಗೂ ಶುದ್ಧೀಕರಣ ಕಾರ್ಯವು ಅಗತ್ಯವಾಗಿರುತ್ತದೆ.

ಶಿಕ್ಷಕಿ, ಸೆಂಟ್ ಮರಿಯಾ ಸದನ ಪಬ್ಲಿಕ್ ಶಾಲೆ, ನೀಲಗಿರಿ ತೋಪು ರಸ್ತೆ, ಮುನೇಶ್ವರ ನಗರ, ಸುಂಕದಕಟ್ಟೆ, ಬೆಂಗಳೂರು - 560091.



ಮನೆಗಳು, ಗುಡಾರಗಳು ಮತ್ತು ಸ್ಥಳೀಯ ಸಾರ್ವಜನಿಕ ಕಟ್ಟಡಗಳ ಛಾವಣಿಗಳಿಂದ ಅಥವಾ ವಿಶೇಷವಾಗಿ ಸಿದ್ದಗೊಳಿಸಲಾದ ನೆಲದ ಪ್ರದೇಶಗಳಿಂದ ಸಂಗ್ರಹಿಸಲಾದ ಮಳೆ ನೀರು, ಕುಡಿಯುವ ನೀರಿಗೆ ತನ್ನದೇ ಆದ ಪ್ರಮುಖ ಕೊಡುಗೆಯನ್ನು ನೀಡಬಲ್ಲದು, ಕೆಲವೊಂದು ಸಂದರ್ಭಗಳಲ್ಲಿ ಮಳೆ ನೀರು ಮಾತ್ರವೇ ಲಭ್ಯವಿರುವ ಏಕೈಕ ಅಥವಾ ಮಿತವ್ಯಯದ ನೀರಿನ ಮೂಲವಾಗಿರಲೂ ಸಾಧ್ಯವಿದೆ. ಸ್ಥಳೀಯವಾಗಿ ಹೆಚ್ಚು ದುಬಾರಿಯಲ್ಲದ ಸಾಮಗ್ರಿಗಳಿಂದ ಮಳೆ ನೀರು ಕೊಯ್ಲಿನ ವ್ಯವಸ್ಥೆಗಳನ್ನು ಸರಳವಾಗಿ ನಿರ್ಮಿಸಬಹುದು ಮತ್ತು ಬಹುತೇಕ ವಾಸಯೋಗ್ಯ ತಾಣಗಳಲ್ಲಿ ಇವು ಸಾಮರ್ಥ್ಯದಿಂದೊಡಗೂಡಿ ಯಶಸ್ವಿಯಾಗಿವೆ.

## ಗೃಹಬಳಕೆಯ ಒಂದು ಛಾವಣಿ ಮೇಲಣ ಮಳೆನೀರು ಕೊಯ್ಲು ವ್ಯವಸ್ಥೆ

ಛಾವಣಿಯೊಂದರ ಮೇಲೆ ಬೀಳುವ ಮಳೆ ನೀರನ್ನು ಸೂರುದೋಣಿಗಳು ಮತ್ತು ಕೊಳಾಯಿಗಳ ಒಂದು ವ್ಯವಸ್ಥೆಯ ಮೂಲಕ ಶೇಖರಣಾ ವ್ಯವಸ್ಥೆಯೊಳಗೆ ಬೀಳುವಂತೆ ಛಾವಣಿಯ ಸಂಗ್ರಹಣಾ ವ್ಯವಸ್ಥೆಗಳು ನಿರ್ದೇಶಿಸುತ್ತವೆ. ಬೇಸಿಗೆ ಕಾಲವೊಂದರ ನಂತರದ ಮಳೆ ನೀರಿನ ಮೊದಲ ರಭಸವನ್ನು ಹಾಗೆಯೇ ಹರಿದುಹೋಗಲು ಬಿಡಬೇಕು. ಏಕೆಂದರೆ ದೂಳು, ಪಕ್ಷಿಗಳ ಹಿಕ್ಕೆಗಳು ಇತ್ಯಾದಿಗಳಿಂದ ಅದು ಮಲಿನಗೊಂಡಿರುತ್ತದೆ. ನೀರು ನಿಲ್ಲುವುದನ್ನು ತಡೆಗಟ್ಟುವುದಕ್ಕಾಗಿ ಛಾವಣಿ ಸೂರುದೋಣಿಗಳು ಸಾಕಷ್ಟು ವಾಲಿಕೊಂಡಿರುವುದು ಅತ್ಯಗತ್ಯವಾಗಿರುತ್ತದೆ. ಗರಿಷ್ಟ ಪ್ರಮಾಣದ ನೀರಿನ ಹರಿವನ್ನು ಹೊತ್ತೊಯ್ಯುವಷ್ಟು ಅವು ಬಲವಾಗಿ ಮತ್ತು ದೊಡ್ಡದಾಗಿ ಇರಬೇಕಾಗುತ್ತದೆ. ಸೊಳ್ಳೆಗಳ ಸಂತಾನೋತ್ಪತ್ತಿಯನ್ನು ತಡೆಗಟ್ಟಲು ಹಾಗೂ ಆವಿಯಾಗುವಿಕೆಯ ನಷ್ಟಗಳು, ಅಶುದ್ಧವಾಗುವಿಕೆ ಮತ್ತು ಪಾಚಿಯ ಬೆಳವಣಿಗೆಯನ್ನು ತಗ್ಗಿಸಲು ಶೇಖರಣಾ ತೊಟ್ಟಿಗಳನ್ನು ಮುಚ್ಚಿರುವುದು ಅತ್ಯಗತ್ಯವಾಗಿರುತ್ತದೆ. ಮಳೆ ಕೊಯ್ಲು ವ್ಯವಸ್ಥೆಗಳನ್ನು ನಿರ್ಮಲವಾಗಿ ಹಾಗೂ ಉತ್ತಮ ಕಾರ್ಯನಿರ್ವಹಣಾ ಸ್ಥಿತಿಯಲ್ಲಿ ಇಟ್ಟುಕೊಳ್ಳಲು ಅವುಗಳ ಕ್ರಮಬದ್ಧವಾದ ನಿರ್ವಹಣೆ ಹಾಗೂ ಶುದ್ಧೀಕರಣ ಕಾರ್ಯವು ಅಗತ್ಯವಾಗಿರುತ್ತದೆ.

## ಕೃಷಿಯಲ್ಲಿ ಮಳೆ ಕೊಯ್ಲು ಪದ್ದತಿ

ಕೃಷಿಯಲ್ಲಿ ಬೆಳೆಗಳು ಚೆನ್ನಾಗಿ ಬೆಳೆದು, ಹೆಚ್ಚು ಬೆಳೆ ಕೊಡಬೇಕಾದರೆ, ಉತ್ತಮ ಮಣ್ಣು, ಬೆಳೆಗಳಿಗೆ ಬೇಕಾಗುವಷ್ಟು ಪೌಷ್ಠಿಕಾಂಶದ ಪ್ರಮಾಣ ಹೆಚ್ಚು ಇರಬೇಕು. ಬೆಳೆಗಳಿಗೆ ನೀರು, ಹವೆ, ಸೂರ್ಯನ ಕಿರಣಗಳ ಪ್ರಖರತೆ ಅತ್ಯಗತ್ಯ.

ಕೆಲವೊಮ್ಮೆ ಮಣ್ಣಿನಲ್ಲಿ ಬೆಳೆಗೆ ಬೇಕಾಗುವಷ್ಟು ಪೌಷ್ಠಿಕಾಂಶಗಳು ಇದ್ದರೂ, ಬೆಳೆಯೂ ನಿರೀಕ್ಷೆಯ ಮಟ್ಟದಲ್ಲಿ ಆಗಲಾರದು. ಇದರ ಜೊತೆಗೆ ಮಣ್ಣಿನಲ್ಲಿ ತೇವಾಂಶದ ಅಗತ್ಯವಿರುತ್ತದೆ. ಇದಕ್ಕೆ ನಾವು



ಮಾಡಬೇಕಾದದ್ದು, ಮಳೆ ನೀರನ್ನು ಕೊಯ್ಲು ಮಾಡುವುದು (ಭೂಮಿಯಲ್ಲಿ ನೀರನ್ನು ಹೀರಿ ಕೊಳ್ಳುವಂತೆ ಮಾಡುವುದು)

ಸರ್ಕಾರವು ನಗರ ಪ್ರದೇಶಗಳಲ್ಲಿ ಮಳೆನೀರು ಕೊಯ್ಲು ಪದ್ಧತಿಯನ್ನು ಅಳವಡಿಸುವಂತೆ ಯೋಜನೆ ಮಾಡುತ್ತಿದೆ. ಹಾಗೆಯೇ ಹೊಲಗಳಲ್ಲಿ ಮಳೆ ನೀರು ಕೊಯ್ಲು ಪದ್ಧತಿಯನ್ನು ಮಾಡುವುದು ಸುಲಭ ಮತ್ತು ಪ್ರಯೋಜನಕಾರಿಯಾಗಿದೆ.

### ಮಳೆ ನೀರು ಕೊಯ್ಲು ಪದ್ಧತಿಯಿಂದಾಗುವ ಪ್ರಯೋಜನಗಳು

1. ನಗರದ ಅಗತ್ಯತೆಗಳಿಗಾಗಿ ಪೂರಕವಾದ ನೀರನ್ನು ಒದಗಿಸಬಹುದು.
2. ನಗರ ಪ್ರದೇಶದ ಗಿಡ-ಮರಗಳಿಗಾಗಿ ಮಣ್ಣಿನ ತೇವಾಂಶದ ಮಟ್ಟವನ್ನು ಹೆಚ್ಚಿಸುವುದು.
3. ಕೃತಕ ಮರುಭರ್ತಿ ವಿಧಾನದ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು.
4. ಗೃಹಬಳಕೆಯ ಮಟ್ಟವೊಂದರಲ್ಲಿ, ಕೊಯ್ಲು ಮಾಡಲಾದ ಮಳೆ ನೀರನ್ನು ಶೌಚಾಲಯಗಳನ್ನು ಚೊಕ್ಕಟಗೊಳಿಸಲು ಹಾಗೂ ಬಟ್ಟೆ ಒಗೆಯಲು ಬಳಸಬಹುದು.

### ವ್ಯವಸ್ಥೆಯ ಗಾತ್ರವನ್ನು ನಿರ್ಧರಿಸುವಿಕೆ

ಬೇಸಿಗೆ ಕಾಲದಾದ್ಯಂತ ಕಂಡುಬರುವ ನೀರಿನ ಬೇಡಿಕೆಯನ್ನು ಪೂರೈಸಲು ಅನುವಾಗುವಂತೆ ವ್ಯವಸ್ಥೆಯ ಗಾತ್ರವನ್ನು ನಿರ್ಧರಿಸುವುದು ಬಹಳ ಮುಖ್ಯವಾಗಿದೆ. ಸಾಮಾನ್ಯವಾಗಿ ಹೇಳುವುದಾದರೆ, ಬೇಸಿಗೆ ಕಾಲದಲ್ಲಿ ಕಂಡುಬರುವ ನೀರಿನ ದೈನಂದಿನ ಅವಶ್ಯಕತೆಯನ್ನು ಪೂರೈಸಲು ಸಾಕಾಗುವಷ್ಟು ಸಂಗ್ರಹಣಾ ತೊಟ್ಟಿಯ ಗಾತ್ರವಿರಬೇಕು. ಇದರ ಜೊತೆಗೆ ಸಂಗ್ರಹಣಾ ಪ್ರದೇಶ ಅಥವಾ ಛಾವಣಿಯ ಗಾತ್ರವು ತೊಟ್ಟಿಯನ್ನು ತುಂಬಿಸಬಲ್ಲಷ್ಟು ದೊಡ್ಡದಾಗಿರಬೇಕು.

### ಮಾಡಿದ ನೀರಿನ ಕೊಯ್ಲು ಬಳಕೆ

ಮಳೆ ನೀರು ಮಲೀನಗೊಳ್ಳುವ ಸಾಧ್ಯತೆಗಳಿರುವುದರಿಂದ, ಸಂಸ್ಕರಣೆ ಪ್ರಕ್ರಿಯೆಗೆ ಒಳಪಡಿಸದೆ ನೀರನ್ನು ಬಳಸುವುದು ಅಷ್ಟು ಸೂಕ್ತವಲ್ಲ. ಅದಾಗ್ಯೂ ಸಂಸ್ಕರಣೆಗೆ ಒಳಪಡಿಸಿದ ನಂತರ ಕುಡಿಯುವುದೂ ಸೇರಿದಂತೆ, ಮಳೆ ನೀರನ್ನು ದೈನಂದಿನ ಬಳಕೆಯ ಎಲ್ಲಾ ಉದ್ದೇಶಗಳಿಗೂ ಬಳಸಲಾಗುತ್ತಿದೆ. ಕೊಯ್ಲು ಮಾಡಲಾದ ನೀರನ್ನು ಕುಡಿಯಲು ಬಳಕೆ ಮಾಡುವುದಕ್ಕೆ ಮುಂಚಿತವಾಗಿ, ಪರವಲಯಾಕೃತಿಯ ಸೌರ ಅಡುಗೆಯ ಪಾತ್ರೆಗಳಲ್ಲಿ (ಪ್ಯಾರಬಾಲಿಕ್ ಸೋಲಾರ್ ಕುಕ್ಕರ್) ಕುದಿಸಬೇಕು.

ಮಳೆ ನೀರು ಕೊಯ್ಲು ಪದ್ಧತಿಯು ಅತಿ ವಿಶೇಷವಾಗಿದ್ದು, ನಮ್ಮ ಜಲ ಸಂಪನ್ಮೂಲವನ್ನು ರಕ್ಷಿಸುವಲ್ಲಿ ಇದು ಅತ್ಯಂತ ಸಹಕಾರಿಯಾದ ವಿಧಾನವಾಗಿದೆ. ಸಿಮೆಂಟು/ ಟಾರು ರಸ್ತೆಗಳಲ್ಲಿ ನೀರು ವ್ಯರ್ಥವಾಗಿ ಹರಿದು ಹೋಗುತ್ತದೆ. ನೀರು ಅತ್ಯಮೂಲ್ಯವಾದದು. ನೀರು ಇಲ್ಲವಾದಲ್ಲಿ ಜೀವಸಂಕುಲವೇ ಇಲ್ಲದಂತಾಗುತ್ತದೆ. ನೀರಿನ ಮಹತ್ವದ ಅರಿವು ಮಾಡಿಸುವಲ್ಲಿ ಸರ್ಕಾರವು ಹಲವಾರು ಪ್ರಯತ್ನ ಮಾಡುತ್ತಲೇ ಬರುತ್ತಿದೆ. ಸದರಿ ಪದ್ಧತಿಯನ್ನು ಅಳವಡಿಸಿಕೊಂಡು ನೀರನ್ನು ಸಂರಕ್ಷಿಸುವುದು ಎಲ್ಲರ ಕರ್ತವ್ಯವಾಗಿದೆ.


ಲೇಖನ

# ಗ್ರಾಮೀಣಾಭಿವೃದ್ಧಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪಾತ್ರ



ಎಲ್.ಎಸ್. ದಿನೇಶ

ಮೂಲಭೂತ ಸೌಲಭ್ಯಗಳನ್ನು ಒದಗಿಸಲು ರೂಪಿತಗೊಂಡಿರುವ ಕೇಂದ್ರ ಸರ್ಕಾರದಿಂದ ಜಾರಿಯಾಗಿ ಮತ್ತು ರಾಜ್ಯ ಸರ್ಕಾರಗಳಿಂದ ಅನುಷ್ಠಾನಗೊಂಡಿರುವ ಏಕೈಕ ಗ್ರಾಮೀಣಾಭಿವೃದ್ಧಿ ಯೋಜನೆಯೆಂದರೆ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.




ಭಾರತವು ಗ್ರಾಮೀಣ ಪ್ರದೇಶಗಳಿಂದ ಕೂಡಿದ ಅಭಿವೃದ್ಧಿಶೀಲ ದೇಶ. ಇಂತಹ ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳ ಸಮಸ್ಯೆಯು ಸಾಮಾನ್ಯವಾದ ವಿಚಾರವಾಗಿದೆ. ಭಾರತ ದೇಶವು ಸ್ವಾತಂತ್ರ್ಯ ಪಡೆದು ಆಗಸ್ಟ್ 15–2015 ನೇ ವರ್ಷಕ್ಕೆ 69 ವರ್ಷಗಳು ಕಳೆದಿವೆ. ಆದರೂ ಸಹ ನೂರಾರು ಗ್ರಾಮಗಳು ಭಾರತದಲ್ಲಿ ಇಂದಿಗೂ ಸಹ ಕುಗ್ರಾಮಗಳಾಗಿ ಉಳಿದಿರುವುದನ್ನು ನಾವು–ನೀವುಗಳು ಪತ್ರಿಕಾ ಮಾಧ್ಯಮ ಮತ್ತು ವಿದ್ಯುನ್ಮಾನ ಮಾಧ್ಯಮಗಳಲ್ಲಿ ಇಂದಿಗೂ ಸಹ ಕಾಣಲಾಗುತ್ತಿದೆ. ದಕ್ಷಿಣ ಭಾರತದಲ್ಲಿ ಅತಿ ದೊಡ್ಡ ರಾಜ್ಯವಾಗಿರುವ ಈ ನಮ್ಮ ಕರ್ನಾಟಕ ರಾಜ್ಯವೂ ಸಹ ಕುಗ್ರಾಮಗಳಿಂದ ಮುಕ್ತವಾಗಿಲ್ಲ. ಕುಗ್ರಾಮ ಎಂದರೆ ಮೂಲಭೂತ ಸೌಲಭ್ಯಗಳಿಂದ ವಂಚಿತವಾಗಿ ಒಂದು ನಿರ್ದಿಷ್ಟ ಪ್ರದೇಶದಲ್ಲಿ ವಾಸಿಸುತ್ತಿರುವ ಜನವಸತಿ ಪ್ರದೇಶವನ್ನು ಕುಗ್ರಾಮ ಎನ್ನುವರು. ಇಂತಹ ಕುಗ್ರಾಮಗಳನ್ನು ಸುಗ್ರಾಮಗಳನ್ನಾಗಿ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಯ ಪಥದತ್ತ ಸಾಗಿಸಲು ಸಹಕಾರಿಯಾಗಿರುವ ಹಲವಾರು ಯೋಜನೆಗಳು ಕಾರ್ಯರೂಪದಲ್ಲಿವೆ. ಅವುಗಳು ಕೇಂದ್ರ ಸರ್ಕಾರದ ಮಟ್ಟದಲ್ಲಿ ಮತ್ತು ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿವೆ. ಮೂಲಭೂತ ಸೌಲಭ್ಯಗಳನ್ನು ಒದಗಿಸುವುದರ ಉದ್ದೇಶದಿಂದ ರೂಪಿತಗೊಂಡಿರುವ ಕೇಂದ್ರ ಸರ್ಕಾರದಿಂದ ಜಾರಿಯಾಗಿ ಮತ್ತು ರಾಜ್ಯ ಸರ್ಕಾರಗಳಿಂದ ಅನುಷ್ಠಾನಗೊಂಡಿರುವ ಏಕೈಕ ಗ್ರಾಮೀಣಾಭಿವೃದ್ಧಿ ಯೋಜನೆ ಎಂದರೇ, ಅದುವೇ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ.

ಮೊದಲ ಹಂತವಾಗಿ ಭಾರತದ ಆಯ್ದ 200 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲಾಯಿತು. ಅದೇ ರೀತಿಯಾಗಿ ಈ ಒಂದು ಯೋಜನೆಯನ್ನು ನಮ್ಮ ರಾಜ್ಯ ಕರ್ನಾಟಕದಲ್ಲಿ ಏಪ್ರಿಲ್ 1–2006 ರಂದು ಕರ್ನಾಟಕದ ಆಯ್ದ ಐದು ಜಿಲ್ಲೆಗಳಲ್ಲಿ ಮೊದಲ ಹಂತವಾಗಿ ಬೀದರ್, ಗುಲ್ಬರ್ಗಾ, ರಾಯಚೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಯಿತು.

ಈ ಒಂದು ಯೋಜನೆ ಏಪ್ರಿಲ್ 1, 2008ರಿಂದ ಕರ್ನಾಟಕದ ಇಡಿ ರಾಜ್ಯಾದಾದ್ಯಂತ ಉಳಿದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಈ ಒಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಅಕ್ಟೋಬರ್ 2, 2009ರಲ್ಲಿ ಕೇಂದ್ರ ಸರ್ಕಾರ ಗಾಂಧೀಜಿಯವರ ಹುಟ್ಟುಹಬ್ಬದ ಸವಿನೆನಪಿಗಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಎಂಬ ಹೆಸರಿನೊಂದಿಗೆ ಪುನರ್ ನಾಮಕರಣ ಮಾಡಲಾಯಿತು.

ಕೆ.ಎ.ಎಸ್.ಅಭ್ಯರ್ಥಿ, ಕೆ. ಲಕ್ಕಿಹಳ್ಳಿ, ಕೊನೇಹಳ್ಳಿ (ಅಂಚೆ), ತಿಪಟೂರು (ತಾ), ತುಮಕೂರು (ಜಿಲ್ಲೆ)
ಮೊಬೈಲ್ : 9591938499



**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಉದ್ದೇಶಗಳು :**

1) ಗ್ರಾಮೀಣ ಪ್ರದೇಶಗಳ ಕುಟುಂಬಗಳ ಜೀವನಾಧಾರ ಭದ್ರತೆಯನ್ನು ಹೆಚ್ಚಿಸುವುದು.

2) ಕೌಶಲ್ಯ ರಹಿತ ದೈಹಿಕ ಕೆಲಸವನ್ನು ಸ್ವಯಂ ಪ್ರೇರಿತರಾಗಿ ಮಾಡಲು ಇಚ್ಛಿಸುವ ಪ್ರತಿಯೊಂದು ಕುಟುಂಬದ 18 ವರ್ಷ ತುಂಬಿದ ವಯಸ್ಕ ಸದಸ್ಯರಿಗೆ ಪ್ರತಿಯೊಂದು ಹಣಕಾಸು ವರ್ಷದಲ್ಲಿ ಕನಿಷ್ಠ ನೂರು ದಿನಗಳ ಉದ್ಯೋಗ ಕಲ್ಪಿಸಿಕೊಡುವುದು.

3) 2012 ರಿಂದ ಈ 100 ದಿನಗಳ ಉದ್ಯೋಗವನ್ನು 150 ದಿನಗಳಿಗೆ ಹೆಚ್ಚಿಸಲಾಗಿದೆ.

4) ಪ್ರಾರಂಭದಲ್ಲಿ 74 ರೂಪಾಯಿಗಳಿಗೆ ನಿಗದಿಯಾದ ದಿನ ಒಂದರ ಕೂಲಿಯನ್ನು ಪ್ರಸ್ತುತ 204 ರೂಪಾಯಿಗಳಿಗೆ ಹೆಚ್ಚಿಸಲಾಗಿರುತ್ತದೆ.

**ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರ್ರಿ ಯೋಜನೆ ಅಡಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳು.**

**1) ಶೌಚಾಲಯ ನಿರ್ಮಾಣ :** 73 ನೇ ಸಂವಿಧಾನ ತಿದ್ದುಪಡಿ ಕಾಯಿದೆ 1992 ರ ಪ್ರಕಾರ ಗ್ರಾಮೀಣ ಸ್ವಚ್ಛತೆಯ ಸಂಪೂರ್ಣ ಜವಾಬ್ದಾರಿಯು ಗ್ರಾಮ ಪಂಚಾಯತಿಗಳದ್ದಾಗಿರುತ್ತದೆ.

**2. ರಸ್ತೆ ನಿರ್ಮಾಣ :**

ಈ ಯೋಜನೆಯ ಕಾಮಗಾರಿಗಳನ್ನು ಅನುಷ್ಠಾನ ಗೊಳಿಸಬೇಕಾದಲ್ಲಿ ಸದರಿ ಕಾಮಗಾರಿಗಳನ್ನು ಆಯಾ ಗ್ರಾಮ ಪಂಚಾಯತಿಗಳ ಗ್ರಾಮ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು, ತದನಂತರ ಮಾರ್ಗಸೂಚಿ ಗಳನ್ವಯ ಎಲ್ಲಾ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗಳ ಅನುಮೋದನೆ ಪಡೆದು, ಅನುಮೋದಿಸಿದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದು ರೂಢಿಯಲ್ಲಿರುವ ಪದ್ಧತಿ.

**ಕೆರೆ ಹೂಳೆತ್ತುವ ಕಾರ್ಯಕ್ರಮ :**

ಗ್ರಾಮೀಣ ಪ್ರದೇಶದಲ್ಲಿರುವ ಕೆರೆ ಕಟ್ಟೆಗಳು, ಗೋಕಟ್ಟೆಗಳು, ಕೃಷಿ ಹೊಂಡಗಳು ಮತ್ತು ಕಲ್ಯಾಣಿಗಳು ಇವುಗಳನ್ನು ಈ ಯೋಜನೆಯಡಿಯಲ್ಲಿ ಕೆರೆ ಹೂಳೆತ್ತುವ ಕಾರ್ಯಕ್ರಮದ ಮೂಲಕ ಜಲಮೂಲಗಳನ್ನು ಪುನಶ್ಚೇತನಗೊಳಿಸಿ, ಜಲಸಂಪನ್ಮೂಲ ಹೆಚ್ಚಿಸಲು ಮತ್ತು ಅಂತರ್ಜಲದ ಮಟ್ಟ ಕಾಪಾಡಲು ಜನರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಅನುಕೂಲ ಮಾಡುವುದು ಮತ್ತು ಪರಿಸರ ಸಂರಕ್ಷಣೆ ಮಾಡುವುದು.


**ಅಂತರ್ಜಲ ಮರುಪೂರಣ ಘಟಕಗಳ ನಿರ್ಮಾಣ :**

ಭೂಮಿಯೊಳಗಿರುವ ನೀರು ಎಲ್ಲರಿಗೂ ಬೇಕು. ಜೀವ ಜಗತ್ತು ಬದುಕಿ ಬಾಳುತ್ತಿರುವುದು ಅಂತರ್ಜಲದ ನೀರಿನಿಂದ. ಗ್ರಾಮೀಣ ಪ್ರದೇಶದ ಜನರು ಭೂಮಿಯಲ್ಲಿರುವ ನೀರನ್ನು ನಂಬಿ ಬದುಕನ್ನು ಸಾಗಿಸುತ್ತಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರದ ಮಹತ್ವಕಾಂಕ್ಷಿ ಯೋಜನೆ ಮತ್ತು ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳಲ್ಲಿ ಪ್ರಮುಖವಾಗಿರುವ ಅಂತರ್ಜಲ ಹೆಚ್ಚಳಕ್ಕಾಗಿ ಅಂತರ್ಜಲ ಮರುಪೂರಣ ಘಟಕಗಳ ನಿರ್ಮಾಣ ಮಾಡುವುದು. ಈ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿನ ಪ್ರತಿಯೊಂದು ಗ್ರಾಮ ಪಂಚಾಯತಿಗೆ ತಲಾ 10 ಅಂತರ್ಜಲ ಮರುಪೂರಣ ಘಟಕಗಳನ್ನು ನಿರ್ಮಿಸಲು ಗುರಿ ಹಾಕಿ ಕೊಂಡಿರುವುದು.

ಈ ಒಂದು ಮಹತ್ವಪೂರ್ಣ ಯೋಜನೆಯನ್ನು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು, ತನ್ನ ಎಲ್ಲಾ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತಿಗಳಲ್ಲಿ ಈ ಒಂದು ಯೋಜನೆಯನ್ನು ಸದೃಢವಾಗಿ ಮತ್ತು ಬಲಿಷ್ಠವಾಗಿ ಜಾರಿಗೆ ತಂದು ಅನುಷ್ಠಾನಗೊಳಿಸಿರುವುದು ನಿಜಕ್ಕೂ ಶ್ಲಾಘನೀಯ. ಗ್ರಾಮೀಣ ಪ್ರದೇಶಗಳಲ್ಲಿ ಈ ಮೇಲಿನ ಎಲ್ಲಾ ಕಾರ್ಯ ಯೋಜನೆಗಳು ಅನುಷ್ಠಾನಗೊಂಡಿದ್ದು, ಆ ಮೂಲಕ ಈ ಒಂದು ಮಹತ್ವಪೂರ್ಣ ಯೋಜನೆಯು ನಿಜಕ್ಕೂ ಗ್ರಾಮೀಣಾಭಿವೃದ್ಧಿಯಲ್ಲಿ ತನ್ನದೇ ಆದ ಪ್ರಮುಖ ಪಾತ್ರ ವಹಿಸಿರುವುದು ಸಹ ಶ್ಲಾಘನೀಯ ಮತ್ತು ಗೌರವದ ವಿಚಾರವಾಗಿದೆ.

ಲೇಖನ

# ಗ್ರಾಮ ಗೀತೆ: ಗ್ರಾಮದ ಅಭಿವೃದ್ಧಿಗೆ ನಾಂದಿಗೀತೆ



ಡಾ. ರೇವಯ್ಯ ಒಡೆಯರ್

**ಬೆಳಗಾಗಿ ನಾನೆದ್ದು ಯಾರ್ಯಾರ ನೆನೆಯಾಲಿ**
**ಎಳ್ಳು ಜೀರಿಗೆ ಬೇಳೆವಂತ ಭೂಮಿತಾಯ**
**ಎದ್ದೊಂದು ಗಳಿಗೆ ನೆನೆದೇನು.**


ಎಂದು ಜನಪದರು ದಿನವೂ ಭೂಮಿ ತಾಯಿಯನ್ನು ಸ್ಮರಿಸಿ ಕೆಲಸ ಆರಂಭಿಸುತ್ತಿದ್ದರು. ಈಗಲೂ ಶಿಷ್ಟರು "ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತೀ ಕರಮೂಲೇ ಸ್ಥಿತಾ ಗೌರೀ ಪ್ರಭಾತೇ ಕರದರ್ಶನಮ್" ಎಂದು ಸ್ತುತಿಸಿ ನಿತ್ಯದ ಕಾರ್ಯಗಳನ್ನು ಆರಂಭಿಸುತ್ತಿದ್ದಾರೆ. ಆಕಾಶವಾಣಿಯಲ್ಲಿ ದಿನವೂ "ವಂದೇ ಮಾತರಂ" ಗೀತೆಯನ್ನು ಕೇಳಿಸಿ ಮುಂದಿನ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ದಿನವೂ ಗೀತೆ



ಅಥವಾ ಶ್ಲೋಕದೊಂದಿಗೆ ಜನತೆ ಜೀವನ ಆರಂಭಿಸುದು ವಾಡಿಕೆ. ಆ ಕಾರ್ಯಕ್ರಮ ಅಥವಾ ದಿನಕ್ಕೆ ಒಂದು ಶೋಭೆ ಮತ್ತು ಶುಭಕರ. ಇದೇ ರೀತಿ ರಾಷ್ಟ್ರಗಳು ರಾಷ್ಟ್ರಗೀತೆಯನ್ನು, ರಾಜ್ಯಗಳು ನಾಡಗೀತೆಯನ್ನು ಪ್ರಸ್ತುತ ಪಡಿಸಿ ಕಾರ್ಯಕ್ರಮವನ್ನು ಆರಂಭಿಸುವುದು ಗೌರವ, ಅಭಿಮಾನ ಮತ್ತು ಭಕ್ತಿಯ ಸಂಕೇತ. ಭಾರತ ಸರ್ಕಾರ ರವೀಂದ್ರನಾಥ ಟ್ಯಾಗೋರ್ ರಚಿಸಿದ "ಜನಗಣ ಮನ" ಗೀತೆಯನ್ನು ರಾಷ್ಟ್ರಗೀತೆಯನ್ನಾಗಿ ಮತ್ತು ಕರ್ನಾಟಕ ಸರ್ಕಾರ ಕುವೆಂಪು ರಚಿಸಿದ "ಜಯಹೇ ಕರ್ನಾಟಕ ಮಾತೇ" ನಾಡಗೀತೆಯನ್ನಾಗಿ ಜಾರಿಗೊಳಿಸಿವೆ. ನಾಡಗೀತೆಯನ್ನು 50–60 ಸೆಕೆಂಡುಗಳಿಗೆ ಕಡಿತಗೊಳಿಸಬೇಕೆನ್ನುವ ಚರ್ಚೆ ನಡೆಯುತ್ತಲೇ ಇದೆ.

ರಾಷ್ಟ್ರಗಳು ರಾಷ್ಟ್ರಗೀತೆಯನ್ನು, ರಾಜ್ಯಗಳು ನಾಡಗೀತೆಯನ್ನು ಪ್ರಸ್ತುತ ಪಡಿಸಿ ಕಾರ್ಯಕ್ರಮವನ್ನು ಆರಂಭಿಸುವುದು ಗೌರವ, ಅಭಿಮಾನ ಮತ್ತು ಭಕ್ತಿಯ ಸಂಕೇತ.

ಮುಖ್ಯಸ್ಥರು, ಸಂಶೋಧನಾ ವಿಭಾಗ, ಕರ್ನಾಟಕ ಕಾನೂನು ಮತ್ತು ಸಂಸದೀಯ ಸುಧಾರಣಾ ಸಂಸ್ಥೆ,
11ನೇ ಮಹಡಿ, ವಿಶ್ವೇಶ್ವರಯ್ಯ ಮುಖ್ಯಗೋಪುರ, ಬೆಂಗಳೂರು -01



ಕರ್ನಾಟಕ ಸರ್ಕಾರ 2010ರಲ್ಲಿ ಕುವೆಂಪು ಅವರು ರಚಿಸಿದ "ಉಳುವಾ ಯೋಗಿಯ ನೋಡಲ್ಲಿ. . ." ರೈತ ಗೀತೆಯನ್ನು ಆರಂಭಿಸಿದ್ದನ್ನು ಇಲ್ಲಿ ಸ್ಮರಿಸಲೇಬೇಕು. ಇಂತಹ ಗೀತೆಗಳಿಂದ ಕಾರ್ಯಕ್ರಮಗಳ ಅಂದ ಹೆಚ್ಚುತ್ತದೆ. ಗೀತೆಗಳು ಕಾರ್ಯಕ್ರಮಕ್ಕೊಂದು ಗಂಭೀರತೆಯನ್ನು ತಂದುಕೊಡುತ್ತವೆ.

ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಾನ್ಯ ಶ್ರೀ ಎಚ್. ಕೆ. ಪಾಟೀಲರು ಗ್ರಾಮ ಗೀತೆಯ ಅಗತ್ಯವನ್ನು ಚಿಂತಿಸಿ ಕಾರ್ಯರೂಪಕ್ಕಿಳಿಸಿದ್ದಾರೆ. ಗ್ರಾಮಸಭೆ, ಗ್ರಾಮ ವಿಕಾಸದ ಯಾವುದೇ ಸಮಾರಂಭಗಳ ಆರಂಭದಲ್ಲಿ ಗ್ರಾಮಗೀತೆಯನ್ನು ಹಾಡಿ ಮುಂದುವರಿಯ ಬೇಕೆನ್ನುವ ಚಿಂತನೆ ಹೊಂದಿದ್ದಾರೆ. ಈ ನಿಟ್ಟಿನಲ್ಲಿ 26.10.2013ರಂದು 15 ಗ್ರಾಮೀಣ ಯೋಜನೆ ಮತ್ತು ಕಾರ್ಯಕ್ರಮಗಳು ಲೋಕಾರ್ಪಣೆಗೊಂಡ ಸಂದರ್ಭದಲ್ಲಿ ಗ್ರಾಮಗೀತೆ ಯನ್ನು ಹಾಡಿಸಿದರು. ತುಂಬಾ ಕಡಿಮೆ ಅವಧಿಯಲ್ಲಿ ರಚಿತಗೊಂಡ ಗ್ರಾಮ ಗೀತೆ 13 ನಿಮಿಷಗಳ ಕಾಲ ಪ್ರಸ್ತುತ ಪಡಿಸಲಾಯಿತು. ಇದರಲ್ಲಿ ಮಾದರಿ ಗ್ರಾಮದ ಅಭಿವೃದ್ಧಿಗಾಗಿ ಇರಬೇಕಾದ ಕಾರ್ಯಕ್ರಮಗಳನ್ನು ಜೋಡಿಸಿ ರಚಿಸಲಾಗಿತ್ತು. ಗ್ರಾಮಗೀತೆಗಾಗಿ ಪ್ರಸಿದ್ಧ ಕವಿಗಳ ಗೀತೆಗಳಲ್ಲಿ ಗ್ರಾಮ ಅಭಿವೃದ್ಧಿ ಕುರಿತಾದ ಗೀತೆಗಳನ್ನು ಶೋಧಿಸಲಾಯಿತು. ಆದರೆ ಇಂದಿನ ಸಂದರ್ಭಕ್ಕೆ ಅಗತ್ಯವಾದ ಯಾವುದೇ ಗೀತೆಗಳು ದೊರೆಯಲಿಲ್ಲ.

ಈ ನಿಟ್ಟಿನಲ್ಲಿ ಸರೋಜಿನಿ ನಾಯ್ಡು ಅವರು ಬರೆದ "Village song" - "Honey, child, Honey, child, whither are going?" ಗಮನಿಸಲಾಗಿ ಅದು ತಾಯಿ ಮತ್ತು ಮಗು ನಡುವಿನ ಸಂಭಾಷಣೆ ರೂಪದಲ್ಲಿ ಜಗದ ಸೌಂದರ್ಯ ಮತ್ತು ಜಗದ ವಿಕಾರತೆಗಳನ್ನು ಹೇಳುವ ಕವಿತೆಯಾಗಿದೆ. ಇವರದೇ ಇನ್ನೊಂದು "Village song" - "Full are my pitchers and far to carry" ಕವಿತೆಯಲ್ಲಿ ಹೆಣ್ಣು ಮಗಳೊಬ್ಬಳು ನೀರು ತರಲು ನದಿಗೆ ಹೋಗುತ್ತಿರುವಾಗ ನಾವಿಕನ ಸ್ವರ ಮಾಧುರ್ಯಕ್ಕೆ ಮಾರುಹೋಗಿ ಕಾಡಿನಲ್ಲಿ ಮಾರ್ಗ ತಪ್ಪಿ ಬಹುದೂರ ಸಾಗುತ್ತಾಳೆ. ಅಲ್ಲಿ ಆವರಿಸಿದ ಕತ್ತಲೆಗೆ ಭಯ ಬಿದ್ದು ತನ್ನನ್ನು ತಾನು ರಕ್ಷಿಸಿಕೊಳ್ಳುವ ಬಗ್ಗೆ ಹಪಾಹಪಿಸುತ್ತಾ ರಾಮನನ್ನು ಸ್ಮರಿಸಿಕೊಳ್ಳುತ್ತಾಳೆ. ಈ ಎರಡು ಕವಿತೆಗಳೂ ಅಭಿವೃದ್ಧಿಗೆ ಪೂರಕವಾದ ಗೀತೆಗಳಾಗಲಿಲ್ಲ. ಹೀಗಾಗಿ ಈ ಗೀತೆಗಳನ್ನು ಕೈಬಿಡಲಾಯಿತು. ಅಲ್ಲದೆ ಬೇಂದ್ರೆ, ಕುವೆಂಪು, ಕಣವಿ ಅವರ ಕವಿತೆಗಳಲ್ಲಿ ಅಭಿವೃದ್ಧಿಗೆ ಪೂರಕವಾದ ಗೀತೆಗಳನ್ನು ಶೋಧಿಸಲಾಗಿ ಯಾವುದೆ ಕವನಗಳು ದೊರೆಯಲಿಲ್ಲ. ಕುವೆಂಪು ಅವರ "ಹಾಳೂರು" ಕವನವು ಅತಿ ದೀರ್ಘವೂ ಮತ್ತು ನಗರ–ಹಳ್ಳಿಯ ಚಿತ್ರಣವನ್ನು ಬಿಂಬಿಸುವ ಕವನವಾಗಿತ್ತು. ಆದರೆ ಅವರ ಹೇಳಿಕೆ "ಕೋಟಿ ಧನವಿದ್ದರೂ ಪಟ್ಟಣದ ಬಾಳು ಗೋಳು, ಹಣವಿಲ್ಲದಿದ್ದರೂ ಸುಖವು ಹಳ್ಳಿ ಬಾಳು" ಸಾಲು ಮಾತ್ರ ಅರ್ಥಪೂರ್ಣವಾಗಿತ್ತು. ಇವುಗಳು ಗ್ರಾಮಗೀತೆಗೆ ಯೋಗ್ಯವೆನಿಸುವ ಗೀತೆಗಳಾಗಿ ಕಾಣಲಿಲ್ಲ. ಈ ಚಿಂತನೆಯಲ್ಲಿ ಒಂದು ಗೀತೆಯ



ಆಗತ್ಯವಿತ್ತು. ಸಂಗೀತ ನಿರ್ದೇಶಕ ಮತ್ತು ಚಿತ್ರಸಾಹಿತಿ ಹಂಸಲೇಖ ಅವರಲ್ಲಿ ಮಾನ್ಯ ಸಚಿವರು ಪ್ರಸ್ತಾಪ ಮಾಡಿ ಒಂದು ಗೀತೆ ಬರೆದು ಸಂಗೀತ ಹಾಕಿ ಕೊಡಿ ಎಂದು ಕೇಳಿದರು. ಅವರು ಗೀತೆ ರಚನೆ ಮಾಡಿ ನೀವೂ ಕೊಡಿ ನಾನೂ ಪ್ರಯತ್ನಿಸುತ್ತೇನೆ ಯಾವುದು ಉತ್ತಮವೋ ಅದನ್ನು ಊರ್ಜಿತ ಮಾಡೋಣ ಎಂದರು. ಈ ಸಂದರ್ಭದಲ್ಲಿ ಬರೆಯಿಸಿಕೊಂಡ ಗ್ರಾಮ ಗೀತೆಗಳ ಸಾಲುಗಳನ್ನು ತಮ್ಮೆಲ್ಲರ ಮುಂದೆ ಪ್ರಸ್ತುತ ಪಡಿಸಲಾಗಿದೆ. ಈ ಗೀತೆಯನ್ನು ಮಾನ್ಯ ಮುಖ್ಯಮಂತ್ರಿಗಳು ಭಾಗವಹಿಸಿದ್ದ ಕಾರ್ಯಕ್ರಮದಲ್ಲಿ ಮತ್ತು ಗಾಂಧಿ ಜಯಂತಿ ದಿನ ಪ್ರಸ್ತುತ ಪಡಿಸಲಾಯಿತು. ಅದ್ಭುತವಾಗಿ ಮೂಡಿ ಬಂದ ಗೀತೆ ಎಲ್ಲರಿಂದಲೂ ಪ್ರಶಂಸೆಗೆ ಪಾತ್ರವಾಯಿತು. ಆದರೆ ಸಮಯ ತುಂಬಾ ಹೆಚ್ಚಾಯಿತು ಮಿತಗೊಳಿಸಿ ಎನ್ನುವ ಅಭಿಪ್ರಾಯ ಎಲ್ಲ ಕಡೆಯಿಂದಲೂ ಬಂದಿತು. ಅಂತಹ ಪ್ರಯತ್ನ ಮಾಡಲಾಗಿದೆ. ಒಂದು ಸಣ್ಣ ಪರಿಕಲ್ಪನೆಯಾಗಿ ಆರಂಭಗೊಂಡ ಗೀತೆ ಈಗಾಗಲೇ ಆರೆಂಟು ಬಾರಿ ವೇದಿಕೆ ಮೂಲ ಹಾಡಿಸಿಕೊಂಡಿದೆ.

ಮಾನ್ಯ ಶ್ರೀ ಎಚ್.ಕೆ. ಪಾಟೀಲರ ಪರಿಕಲ್ಪನೆಯಲ್ಲಿ ಗ್ರಾಮ ವಿಕಾಸ ಯೋಜನೆಯ ನಿರ್ದೇಶಕರಾದ ಶ್ರೀ ಬೂವನಹಳ್ಳಿ ನಾಗರಾಜ್ ಅವರ ಮಾರ್ಗ ದರ್ಶನದಲ್ಲಿ ನನ್ನ ಮತ್ತು ಉಮೇಶ್ ಹುಲಿಕುಂಟೆ ಅವರಿಂದ ಬರೆಯಿಸಿಕೊಂಡ ಗೀತೆ ರಾಜ್ಯದ ಅಭಿವೃದ್ಧಿಗೆ ರಚನೆಯಾಗಿದೆ. ಈ ಗೀತೆಗೆ ಹಳ್ಳಿ ಸೊಗಡಿನ ಶ್ರೀ ಗುಜ್ಜಾರ್ ಗೌಡ ಅವರ ಸಂಗೀತ ಸಂಯೋಜನೆಯಿದೆ. ಗ್ರಾಮ ಗೀತೆಯನ್ನು ಈಗಾಗಲೇ ಇರುವ ರಾಷ್ಟ್ರಗೀತೆ, ನಾಡಗೀತೆ, ಸೇವಾದಳ, ಸೇವಾಯೋಜನೆ ಈ ಎಲ್ಲಾ ಗೀತೆಗಳಿಗಿಂತಲೂ ಉತ್ತಮವಾಗಿ ಮೂಡಿಬರಬೇಕೆನ್ನುವ ಸದಾಶಯ ದಿಂದ ರಚಿಸಲಾಗಿದೆ. ನಮ್ಮ ಗ್ರಾಮಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಾಯಕರು, ಸೇವಕರು, ಸಮಾಜ ಸುಧಾರಕರು, ರೈತರು ಮತ್ತು ಯುವಕ–ಯುವತಿಯರು ಭಾಗವಹಿಸಬೇಕೆನ್ನುವ ಕರೆಯನ್ನು ಕೊಡುವ ಮೂಲಕ ಅವರೆಲ್ಲರೂ ಅಭಿವೃದ್ಧಿ ಕಾರ್ಯದಲ್ಲಿ ಕೈಜೋಡಿಸ ಬೇಕೆನ್ನುವ ಅಭಿಮತದೊಂದಿಗೆ ಗೀತೆ ರಚನೆಯಾಗಿದೆ. ಈ ಗೀತೆಯನ್ನು ಪ್ರತಿ ಗ್ರಾಮ ಸಭೆಯಲ್ಲೂ ಹಾಡಿಸುವ ಪ್ರಯತ್ನ ಮಾಡಬೇಕು. ಗ್ರಾಮದ ಅಭಿವೃದ್ಧಿಗೆ ಜನತೆಯನ್ನು ವಿನಂತಿಯೊಂದಿಗೆ ಆಹ್ವಾನಿಸುವ ಕಾಂತ ಸಮ್ಮಿತ ಗೀತೆ ನಿಜಕ್ಕೂ ಉತ್ಸಾಹವನ್ನು ಮೂಡಿಸುತ್ತದೆ. ಬಹುದಿನಗಳ ಗಾಂಧಿ ಕನಸನ್ನು ನನಸು ಮಾಡುವ ಕಾಲ ಸಮೀಪಿಸಿದೆ. ಗ್ರಾಮ ಸ್ವರಾಜ್ಯ ಸಾಧನೆಯಾಗುತ್ತಿದೆ. ಗ್ರಾಮ ಪಂಚಾಯಿತಿ ಕಾರ್ಯಾಲಯದ ಮುಂದೆ ರಾಷ್ಟ್ರಧ್ವಜ ದಿನವೂ ಹಾರಾಡುತ್ತದೆ. ದಿನವೂ ಗ್ರಾಮಗೀತೆ ಹಾಡುವುದರ ಮೂಲಕ ದಿನ ನಿತ್ಯದಲ್ಲಿ ಅಭಿವೃದ್ಧಿಗೆ ಸಂಗೀತದ ಮೂಲಕ ಉದ್ದೀಪನಗೊಳ್ಳುತ್ತದೆ. ಅಭಿವೃದ್ಧಿಗೆ ತೊಡಗಿರುವ ರಾಜಕೀಯ ನಾಯಕರು, ಸಮಾಜ ಸುಧಾರಕರು, ಅಧಿಕಾರಿಗಳು ಮತ್ತು ಜನತೆ ಶ್ರದ್ಧೆಯಿಂದ ಕೆಲಸ ನಿರ್ವಹಿಸಲು ಸ್ಫೂರ್ತಿ ನೀಡಬಲ್ಲದು.

ಭಾರತದ ಪ್ರಥಮ ಹಣಕಾಸು ಸಚಿವರಾದ ಶ್ರೀ ಸಿ.ಡಿ. ದೇಶಮುಖ್ ಅವರು ರಾಷ್ಟ್ರಸಂತ ತುಕಡೋಜಿ ಅವರು ರಚಿಸಿದ "ಗ್ರಾಮಗೀತ್" ಕೃತಿಯನ್ನು ಮಾದರಿಯನ್ನಾಗಿಟ್ಟುಕೊಂಡು ಅದರಲ್ಲಿನ ಚಿಂತನೆಗಳನ್ನು ಮಹಾರಾಷ್ಟ್ರದ ಚಂದಾಪುರ ಮತ್ತು 16 ಗ್ರಾಮಗಳನ್ನು ದತ್ತು ತೆಗೆದುಕೊಂಡು ಅವುಗಳಲ್ಲಿ ಅನುಷ್ಠಾನಗೊಳಿಸಿದರು. ಕನ್ನಡದಲ್ಲಿ ರಾವ್ ಬಹದ್ದೂರ್ ಬರೆದ "ಗ್ರಾಮಾಯಣ" ಕೃತಿಯಲ್ಲಿ ಗ್ರಾಮದ ಏಳುಬೀಳುಗಳ ಸ್ಪಷ್ಟ ಚಿತ್ರಣವಿದೆ. ಆ ಕೃತಿಯಲ್ಲಿ ನಡೆಯುವ ಅವಘಡಗಳು ನಮ್ಮ ಗ್ರಾಮಗಳಲ್ಲಿ ಆಗಬಾರದು ಎನ್ನುವ ಸಂದೇಶವನ್ನು ಸ್ಪಷ್ಟವಾಗಿ ಕಾಣಬಹುದು. ಅಂತೆಯೇ ಶಿವರಾಮ ಕಾರಂತರು "ಔದಾರ್ಯದ ಉರುಳಲ್ಲಿ" ಕೃತಿಯ ಮೂಲಕ ಗಾಂಧೀಜಿಯವರ ಗ್ರಾಮ ಸ್ವರಾಜ್ಯವನ್ನು ಕಟ್ಟುವ ಪ್ರಯತ್ನ ಮಾಡುತ್ತಾರೆ. ಇತ್ತಿಚಿಗೆ "ಗಾಂಧೀಜಿ ಕನಸು" ಎನ್ನುವ ಚಿತ್ರವೂ ಸಹ ಅಭಿವೃದ್ಧಿ ಕಾರ್ಯದಲ್ಲಿ ಅಧಿಕಾರಿಗಳ ಪಾತ್ರ ಎಂತಹದು ಎನ್ನುವ ಸಂದೇಶವನ್ನು ಬಿತ್ತರಿಸಿದೆ. ಇಂತಹದೇ ಇನ್ನೊಂದು ಚಿತ್ರ "ಗಾಂಧೀ ಜಯಂತಿ" ಕನ್ನಡದಲ್ಲಿ ಬಂದಿದೆ. ಇದರಲ್ಲಿ ಶಾಲಾ ಶಿಕ್ಷಕನೊಬ್ಬ ಗ್ರಾಮದ ಅಭಿವೃದ್ಧಿ ಮತ್ತು ಶಿಕ್ಷಣದ ಅಭಿವೃದ್ಧಿ ಬಗ್ಗೆ ಸಾಕಷ್ಟು ಶ್ರಮಿಸುತ್ತಾನೆ. ಈ ಚಿತ್ರಗಳಲ್ಲಿನ ಹತ್ತರ ಒಂದಂಶದಷ್ಟಾದರೂ ನಮ್ಮ ಅಧಿಕಾರಿ ವರ್ಗ ಶ್ರಮಿಸಿದ್ದಾದರೆ ಗ್ರಾಮ ಸ್ವರಾಜ್ಯ ಸಾಧ್ಯವಾಗಿಯೇಬಿಡುತ್ತದೆ. ಉತ್ತಮ ಪ್ರಯತ್ನಗಳು ಕೃತಿ ಮತ್ತು ಚಲನ ಚಿತ್ರಗಳಲ್ಲಿ ಮಾತ್ರ ಇದ್ದರೆ ಸಾಲದು ಅವುಗಳನ್ನು ನಿತ್ಯದ ಬದುಕಿನಲ್ಲಿ ಅನುಷ್ಠಾನಕ್ಕೆ ತರಬೇಕು. ಆಗಲೇ ಅಭಿವೃದ್ಧಿ ಕಾರ್ಯ ನಡೆಯುವುದು. ಗಾಂಧೀಜಿ ಅವರು ನೆಹರೂ ಅವರಿಗೆ ಬರೆದ ಒಂದು ಪತ್ರದಲ್ಲಿ "ನಮ್ಮ ಸ್ವಾತಂತ್ರ್ಯ ಗ್ರಾಮ ಭಾರತವನ್ನು ಅವಲಂಬಿಸಿದೆ. ಹಳ್ಳಿಗರು ಇರುವುದು ಗುಡಿಸಲುಗಳಲ್ಲಿ; ಅರಮನೆಗಳಲಲ್ಲ. ಅವರು ಸ್ವಾವಲಂಬಿಗಳಾಗಬೇಕು. ಆಧುನಿಕ ವಿಜ್ಞಾನವನ್ನು ನಾನು ಮೆಚ್ಚಿಕೊಳ್ಳುತ್ತೇನೆ. ಆದರೆ ಅದು ನಮ್ಮ ಗ್ರಾಮೀಣರ ಬದುಕಿಗೆ ಪೂರಕವಾಗಿರಬೇಕು. ನನ್ನ



ಆದರ್ಶದ ಹಳ್ಳಿಗಳಲ್ಲಿ ಬುದ್ಧಿವಂತರಿರುತ್ತಾರೆ. ಸಾತ್ವಿಕರಿರುತ್ತಾರೆ, ಪ್ರಾಮಾಣಿಕರಿರುತ್ತಾರೆ; ಸಭ್ಯರಿರುತ್ತಾರೆ. ಅವರು ಜಗತ್ತಿನ ಯಾರ ಮುಂದಾದರೂ ನಿಲ್ಲಬಲ್ಲರು. ನಮ್ಮ ಹಳ್ಳಿಗಳಲ್ಲಿ ಸೋಮಾರಿಗಳಿರುವುದಿಲ್ಲ. ಅವರಿಗೆ ಐಶಾರಾಮ ಜೀವನ ಬೇಡ. ನಮ್ಮ ದೇಶದಲ್ಲಿರುವ ಸಂಪನ್ಮೂಲಗಳು ಹಳ್ಳಿಗರಿಗೆ, ವಂಚಿತರಿಗೆ ನ್ಯಾಯುವಾಗಿ ಹಂಚಿಕೆಯಾಗಬೇಕು" ಎಂದು ತಿಳಿಸಿದ್ದರು. ಆದರೆ ಇಂದಿಗೂ ಅದೇ ಸ್ಥಿತಿಯಲ್ಲಿರುವುದು ನಮ್ಮ ಗ್ರಾಮೀಣ ಜನತೆಯ ದುರ್ದೆಸೆ. ತತ್ವಜ್ಞಾನಿಯ ಮಾತು ಹೀಗಿದೆ "ನೀನು ಜಗತ್ತಿನ ಮೂಲಕ ಹಾದು ಹೋಗುವುದು ಒಂದೇ ಸಲ. ಆದ್ದರಿಂದ ನೀನು ಮಾಡಬೇಕೆಂದಿರುವ ಒಳ್ಳೆಯ ಕೆಲಸವೇನಾದರೂ ಇದ್ದರೆ ಅದನ್ನು ಈಗಲೇ ಮಾಡು. ಏಕೆಂದರೆ, ಒಮ್ಮೆ ನೀನು ಅತ್ತ ಹೋದೆಯೆಂದರೆ ಮತ್ತೆ ಇತ್ತ ಬರುವುದಿಲ್ಲ." ಹೀಗಾಗಿ ನಮ್ಮ ಹಳ್ಳಿಗರು ಅಂದುಕೊಂಡ ಕೆಲಸವನ್ನು ಗ್ರಾಮಗೀತೆ ಹಾಡುತ್ತಾ ಗ್ರಾಮದ ಕೆಲಸವನ್ನು ಮಾಡಿ ತೋರಿಸೋಣ ಎನ್ನುವ ದಾಷ್ಟ್ಯತನ ಮೆರೆಯಲಿ ಎಂದು ಹೇಳಬಯಸುತ್ತೇನೆ.

# ಗ್ರಾಮ ಗೀತೆ

ಬನ್ನಿ ಬನ್ನಿ ಗ್ರಾಮದ ಜನರೇ ಒಂದಾಗಿ ಬನ್ನಿ
ಜಾತಿ-ಗೀತಿ ಮೇಲು ಕೀಳು ಪಕ್ಷ-ಭೇದ ತೊಡೆದು ಹಾಕಿ ಬನ್ನಿ ॥ಪ॥

ಬಹುದಿನಗಳ ಗಾಂಧಿ ಕನಸು ನನಸು ಮಾಡ ಬನ್ನಿ
ಗ್ರಾಮಗಳ ಅಭ್ಯುದಯವೇ ರಾಮ ರಾಜ್ಯ
ಅದುವೇ ನಮ್ಮಯ ಗ್ರಾಮ ಸ್ವರಾಜ್ಯ . . .
ಗ್ರಾಮ ಸ್ವರಾಜ್ಯ ಗ್ರಾಮ ಸ್ವರಾಜ್ಯ

ಋಣಮುಕ್ತ ಜೀವನ ಸ್ವಾಭಿಮಾನದ ಅಭಿಜಾತ
ವ್ಯಸನ ಮುಕ್ತ ಜೀವನ ಸ್ವಾಸ್ಥ ಸಮಾಜದ ಪ್ರತೀಕ
ವ್ಯಾಜ್ಯ ಮುಕ್ತ ತ್ಯಾಜ್ಯ ಮುಕ್ತ ನಿರ್ಮಲ ನೆಮ್ಮದಿ ಬಹುತೇಕ
ಬಯಲು ಬಹಿರ್ದೆಸೆ ಮುಕ್ತ ಆರೋಗ್ಯ ಘನತೆಯ ಸಂಕೇತ ॥ಬನ್ನಿ॥

ನಮ್ಮ ಊರು ಕೇರಿ ನಮ್ಮ ನೆಲ ನಮ್ಮ ಜಲ
ನಮ್ಮ ಗಾಳಿ ನಿರ್ಮಲ ಸುಂದರ ನಮ್ಮ ಪರಿಸರ
ನೆಮ್ಮದಿಯ ನಾಳೆಗಾಗಿ ಸ್ವಾವಲಂಬನೆ ಸಚ್ಚರಿತ
ಸುಸ್ಥಿರತೆಯ ಕಾಪಾಡಲು ಬನ್ನಿ ಎಲ್ಲ ಸರ ಸರ ॥ಬನ್ನಿ॥

ನಮ್ಮಯ ಊರಿನ ನೀರು ಗ್ರಾಮದ ಆಸ್ತಿ ಎಂದು ಸಾರು
ಶುದ್ಧವಾದ ಕುಡಿಯುವ ನೀರು ಆರೋಗ್ಯದ ತವರೂರು
ನಮ್ಮಯ ದಾರಿಯಲ್ಲಿ ನಮ್ಮ ಹೊಲಕ್ಕೆ ಹೋಗೋಣ
ನಮ್ಮಯ ಕಣದಲಿ ದವಸ ಧಾನ್ಯವ ಒಕ್ಕೋಣ ॥ಬನ್ನಿ॥

ಆಟವ ಆಡಿ ದೃಡತೆಯ ಬೆಳಸಿ ಮೈದಾನದಲಿ ನಲಿಯೋಣ
ಕಸೂತಿ-ನೇಯ್ಗೆ ಹೈನು-ಜೇನು ಎಲ್ಲಾ ಕೌಶಲ್ಯ ಪಡೆಯೋಣ
ಗಣಕ ಜ್ಞಾನ ಪಡೆದು ಸೇವೆಗಾಗಿ ಬಾಳೋಣ
ಕಾಯಕ ಮಿತ್ರ ನಾಯಕರಾಗಿ ನಾಡನು ನಾವು ಕಟ್ಟೋಣ ॥ಬನ್ನಿ॥

ಕೆರೆ-ಕಟ್ಟೆ ಕಟ್ಟಿ ನಾವು ಜಲಸಮೃದ್ಧಿ ಹೊಂದೋಣ
ಶ್ರಮ ಸಂಸ್ಕೃತಿಯ ಸಮಾಜಕ್ಕೆ ಭದ್ರ ಬುನಾದಿ ಹಾಕೋಣ
ದ್ವೇಷ ಮುಕ್ತ ಸತ್ಯಯುಕ್ತ ಸಾಧನೆಯಲ್ಲಿ ಸಾಗೋಣ
ಅನುಭವ ಹೊತ್ತ ಹಿರಿಯರ ನಾವು ಸದಾ ಸ್ಮರಿಸೋಣ ॥ಬನ್ನಿ॥

ಗ್ರಾಮ ಪರಂಪರೆ ಗ್ರಾಮ ಸಂಸ್ಕೃತಿ ಭವ್ಯ ಭಾರತದ ಜೀವಾಳ
ಹಿರಿಯ ಚೇತನಗಳ ಆದರ್ಶಗಳಲಿ ಹಬ್ಬಲಿ ಅಭ್ಯುದಯದ ಬಳ್ಳಿ
ಗ್ರಾಮಗ್ರಾಮಗಳಲಿ ಜನತಾಣಗಳಲಿ ಬೀಸಲಿ ದೇಸಿಯ ಗಾಳಿ
ಓಣಿ ಓಣಿಗಳಲಿ ಊರುಕೇರಿಯಲಿ ಝೇಂಕರಿಸಲಿ ಅಭಿವೃದ್ಧಿಯ ಮಂತ್ರ

ಗ್ರಾಮದ ವಾರಸುದಾರರೇ
ನವ ಚೈತನ್ಯದ ಯುವಜನರೇ
ಚಿಮ್ಮಲಿ ನಿಮ್ಮಲಿ ಉತ್ಸಾಹ
ಹೊಮ್ಮಲಿ ಸ್ಫೂರ್ತಿಯ ಪ್ರೋತ್ಸಾಹ ॥ಬನ್ನಿ॥

ಈ ಗೀತೆಯಲ್ಲಿ ನಮ್ಮ ಹಳ್ಳಿಗಳ ಉದ್ಧಾರದ ಬಗ್ಗೆ ಒಂದು ವಿನಂತಿಯಿದೆ. ನೀವು ಬಂದರೆ ನಾವೆಲ್ಲರೂ ಸೇರಿ ಸಾಧಿಸಿ ತೋರಿಸುತ್ತೇನೆ ಎನ್ನುವ ಛಲವಿದೆ. ಏನು ಸಾಧನೆಯಾಗಬೇಕು ಎನ್ನುವ ಸ್ಪಷ್ಟ ಗುರಿಯಿದೆ. ಯಾರ ಮಾರ್ಗದರ್ಶನದಲ್ಲಿ ಸಾಗಬೇಕು ಎನ್ನುವ ಧ್ಯೇಯವಿದೆ. ಅಭಿವೃದ್ಧಿಯ ಮಂತ್ರದೀಕ್ಷೆ ತೊಟ್ಟು ನಿಂತರೆ ಅಂದುಕೊಂಡದ್ದನ್ನು ಸಾಧಿಸಬಹುದೆನ್ನುವ ಭರವಸೆಯಿದೆ. ಈ ಎಲ್ಲವುಗಳೊಂದಿಗೆ ಗ್ರಾಮದ ಪರಂಪರೆ, ಸಂಸ್ಕೃತಿ ಭವ್ಯ ಭಾರತದ ಜೀವಾಳವೆಂದು ಸಾರುತ್ತಾ ಹಳೆಯದನ್ನು ಉಳಿಸಿಕೊಂಡು ಹೊಸ ಚಿಗುರನ್ನು ಕಾಣುವ ಶಕ್ತಿಯನ್ನು ತಂದುಕೊಳ್ಳುತ್ತದೆ. ಈ ಶಕ್ತಿಯಿಂದ ಗ್ರಾಮ ಗ್ರಾಮಗಳ ಜನತಾಣಗಳಲ್ಲಿ ದೇಸಿಯ ಗಾಳಿ ಬೀಸಲಿ. ಆ ಗಾಳಿಯ ಮೂಲಕ ಓಣಿ ಓಣಿಗಳಲ್ಲಿ ಮತ್ತು ಊರುಕೇರಿಗಳಲ್ಲಿ ಅಭಿವೃದ್ಧಿಯ ಮಂತ್ರ ಝೇಂಕರಿಸಲಿ ಎನ್ನುವ ಉತ್ಸಾಹ ಭರಿತವಾದ ನುಡಿಗಳಿವೆ. ಗ್ರಾಮದ ವಾರಸುದಾರರಾದ ನವ ಚೈತನ್ಯದ ಯುವಜನರನ್ನು ಪ್ರೋತ್ಸಾಹಿಸಿ ಕೆಲಸ ಮಾಡಿ ತೋರಿಸೋಣವೆನ್ನುವ ದಿಗ್ದರ್ಶನವಿದೆ. ಎಲ್ಲರೂ ಕೈ ಜೋಡಿಸಿದರೆ ಬಹುದಿನಗಳ ಗಾಂಧಿ ಕನಸು ನನಸಾದೀತು. ಗ್ರಾಮ ಗೀತೆ ಆ ನನಸಿಗೆ ನಾಂದಿಯಾಗಲಿ.

ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ

# ಬಯಲು ಶೌಚಮುಕ್ತ ಗ್ರಾಮ - ಖಾನಾಪೂರ



ಬಿ.ಎನ್.ಇಟಗಿಮಠ

ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ರಡ್ಡೇರನಾಗನೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಖಾನಾಪೂರ ಇದೀಗ ಬಯಲು ಶೌಚಮುಕ್ತ ಗ್ರಾಮ ಎಂಬ ಖ್ಯಾತಿಗೆ ಪಾತ್ರವಾಗಿದೆ.




ಗ್ರಾಮ ಪಂಚಾಯತಿ ಅಧ್ಯಕ್ಷೆ

ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ರಡ್ಡೇರನಾಗನೂರ ಗ್ರಾಮ ಪಂಚಾಯತಿ ವ್ಯಾಪ್ತಿಯ ಖಾನಾಪೂರ ಇದೀಗ ಬಯಲು ಶೌಚಮುಕ್ತ ಗ್ರಾಮ ಎಂಬ ಖ್ಯಾತಿಗೆ ಪಾತ್ರವಾಗಿದೆ. ಈ ಸಾಧನೆಯ ಹಿಂದಿರುವ ಶಕ್ತಿ ಗ್ರಾಮ ಪಂಚಾಯತಿ ಅಧ್ಯಕ್ಷೆ ಪ್ರೇಮಾ ತಿಮ್ಮನಗೌಡ್ರ.

ಗ್ರಾಮದಲ್ಲಿ 206 ಮನೆಗಳಿದ್ದರೂ ಶೌಚಾಲಯಗಳು ಇದ್ದದ್ದು 35 ಮನೆಗಳಲ್ಲಿ ಮಾತ್ರ. ಈಗ 176 ಮಾಡರ್ನ್ ಶೌಚಾಲಯಗಳನ್ನು ಕೊಪ್ಪಳದಲ್ಲಿ ನಿರ್ಮಾಣ ಮಾಡಿಸಿಕೊಂಡು ಬಂದು ಪ್ರತಿ ಮನೆಗೂ ಅಳವಡಿಸಲಾಗಿದೆ. ಸ್ಥಳದ ಅಭಾವ ಇರುವ ಹರಿಜನ ಕೇರಿಯ 13 ಕುಟುಂಬಗಳಿಗಾಗಿ ಪಂಚಾಯಿತಿಯಿಂದಲೇ ಜಾಗ ಒದಗಿಸಿ ಅಲ್ಲಿಯೇ ಅವರಿಗೆ ಶೌಚಾಲಯ ನಿರ್ಮಿಸಿಕೊಡಲಾಗಿದೆ.



ಪ್ರತಿ ರೆಡಿಮೇಡ್ ಶೌಚಾಲಯಕ್ಕೆ 15 ಸಾವಿರ ರೂ.ವೆಚ್ಚವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ಮಲ ಭಾರತ ಯೋಜನೆಯಡಿ ಇದಕ್ಕೆ ಸಹಾಯಧನ ನೀಡುತ್ತವೆ. ಪರಿಶಿಷ್ಟ ಜಾತಿ-ಪಂಗಡದವರಿಗೆ 15 ಸಾವಿರ ರೂ. ಮತ್ತು ಇತರ ಸಮುದಾಯದವರಿಗೆ 10 ಸಾವಿರ ರೂ. ಸಹಾಯಧನ ಸಿಗುತ್ತದೆ. ಯೋಜನೆಯ ಸಾಕಾರಕ್ಕೆ ಒಟ್ಟು ಸುಮಾರು ಇಪ್ಪತ್ತೈದು ಲಕ್ಷ ರೂ.ಗಿಂತ ಹೆಚ್ಚು ಹಣ ವೆಚ್ಚವಾಗುವ ಅಂದಾಜಿತ್ತು.

ಪಂಚಾಯತ ಅಭಿವೃದ್ಧಿ ಅಧಿಕಾರಿ,, ರಡ್ಡೇರನಾಗನೂರ ಗ್ರಾಮ ಪಂಚಾಯತಿ
ನರಗುಂದ ತಾಲ್ಲೂಕು, ಗದಗ ಜಿಲ್ಲೆ



ರೆಡಿಮೇಡ್ ಶೌಚಾಲಯಗಳ ನಿರ್ಮಾಣದ ಗುತ್ತಿಗೆಯನ್ನು ಕೊಪ್ಪಳದ ಕಂಪನಿಗೆ ವಹಿಸಲಾಯಿತು. ಅಲ್ಲಿಂದ ಅವುಗಳನ್ನು ಗ್ರಾಮಕ್ಕೆ ತಂದು ಇಂಗು ಗುಂಡಿ ನಿರ್ಮಿಸಿ, ಶೌಚಾಲಯ ಒಳಗೆ ಸೀಟು ಇಟ್ಟು ಸುತ್ತಲೂ ಟೈಲ್ಸ್ ಹೊಂದಿಸುವುದು ಯೋಜನೆಯ ಭಾಗ.

"ಜುಲೈ 3 ರಂದು ಅಧಿಕಾರ ವಹಿಸಿಕೊಂಡ ಗ್ರಾ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಪ್ರೇಮ ತಿಮ್ಮಣ್ಣ ಗೌಡ್ರ ರವರು ಬಯಲು ಶೌಚ ಮುಕ್ತ ಗ್ರಾಮದ ಕನಸನ್ನು ಆಗಸ್ಟ್ 15ರೊಳಗೆ ನನಸು ಮಾಡಬೇಕೆಂದು ತೀರ್ಮಾನಿಸಿ, ಅದಕ್ಕಾಗಿ ಪ್ರತಿ 3–4 ದಿನಗಳಿಗೊಮ್ಮೆ ಗ್ರಾಮ ಸಭೆ ನಡೆಸಿದರು. ಸಾಮಾನ್ಯ ವರ್ಗದ ಫಲಾನುಭವಿಗಳು ಮಾತ್ರ ಸರ್ಕಾರದ ಸಹಾಯಧನ ವಲ್ಲದೆ, ತಮ್ಮ ಕೈಯಿಂದ 5 ಸಾವಿರ ರೂ. ಹಾಕುವುದು ಅನಿವಾರ್ಯವಾಗಿತ್ತು. ಹಾಗಾಗಿ ಯೋಜನೆ ಬಗ್ಗೆ ಇಡೀ ಗ್ರಾಮದಲ್ಲಿ ಅರಿವು ಮೂಡಿಸಲು ಮುಂದಾದ ಅಧ್ಯಕ್ಷರು ಹಳೆಯ ಕಾಲದ 170 ಮನೆಗಳ ಮಲೀಕರು ಸೇರಿದಂತೆ ಎಲ್ಲರ ಮನವೊಲಿಸಿ, ಬಯಲು ಶೌಚದ ಸಮಸ್ಯೆಯನ್ನು ಅರಿತಿದ್ದ ಮಹಿಳೆಯರು ತಾವೇ ಸ್ವಯಂಸ್ಫೂರ್ತಿಯಿಂದ ತಲಾ 5 ಸಾವಿರ, 10 ಸಾವಿರ ರೂ.ಗಳನ್ನು ವಂತಿಗೆಯಾಗಿ ನೀಡಲು ಮುಂದಾದರು. ಅದರಿಂದ ಸುಮಾರು 5 ಲಕ್ಷ ರೂ. ನಷ್ಟು ಮೊತ್ತ ಸಂಗ್ರಹವಾಯಿತು.

ಹಾಗೆ ಹಣ ಹಾಕಿದವರು ಈ ಯೋಜನೆಯ ಫಲಾನುಭವಿಗಳೇ ಆಗಿದ್ದರಿಂದ ಅದನ್ನು ಅವರವರ ಮನೆಯ ಶೌಚಾಲಯ ನಿರ್ಮಾಣಕ್ಕೆ ಬಳಸಲಾಯಿತು. ಅವಧಿಗಿಂತ ಮೊದಲೇ ಕನಸು ನನಸಾಯಿತು ಎಂದು ಅಧ್ಯಕ್ಷೆ ಪ್ರೇಮಾ ತಿಮಣ್ಣ ಗೌಡ್ರರವರು ಹೆಮ್ಮೆಯಿಂದ ಹೇಳುತ್ತಾರೆ.

ಗ್ರಾಮಾಭಿವೃದ್ಧಿ ಬಗ್ಗೆ ಮಹಿಳೆಯರಲ್ಲಿ ಅರಿವು ಮೂಡಿಸುವುದು ಹಾಗೂ ಮಹಿಳಾ ಸ್ವಸಹಾಯ ಗುಂಪುಗಳನ್ನು ರಚಿಸಿ ಆರ್ಥಿಕ ಸೌಲಭ್ಯಕ್ಕೆ ಸಹಾಯ ಮಾಡುವ ಸೇವಾಕಾರ್ಯವನ್ನು ಅಧ್ಯಕ್ಷರು ಮೊದಲಿನಿಂದಲೂ ಮಾಡುತ್ತ ಬಂದಿದ್ದಾರೆ. ಅವರು ಬರಿ ಉಸ್ತುವಾರಿ ಮಾಡುತ್ತ ಕುಳಿತುಕೊಳ್ಳುವವರಲ್ಲ, ಕೂಲಿಕಾರರೊಂದಿಗೆ ನಾವೂ ಕೆಲಸ ಮಾಡಿ ಎಲ್ಲರೊಂದಿಗೆ ಬೆರೆಯುವ ಗುಣವನ್ನು ಬೆಳೆಸಿ ಕೊಂಡಿದ್ದಾರೆ. ಅವರ ಪ್ರಯತ್ನದ ಫಲವಾಗಿ ಈಗ ಖಾನಾಪೂರದ ಎಲ್ಲ 1,500 ಜನರೂ ಶೌಚಕ್ರಿಯೆಗಾಗಿ ಬಯಲಿಗೆ, ರಸ್ತೆ ಬದಿಗೆ ಹೋಗಬೇಕಾದ ಅನಿವಾರ್ಯತೆಯಿಂದ ಮುಕ್ತರಾಗಿದ್ದಾರೆ.

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಖಾನಾಪೂರ ಸೇರಿ ಮೂರು ಗ್ರಾಮಗಳಿಗೆ, ರಡ್ಡೇರನಾಗನೂರ, ಗಂಗಾಪುರ ಗ್ರಾಮಗಳಲ್ಲಿಯೂ ನಿರ್ಮಲ ಭಾರತ ಅಭಿಯಾನ ಕಾರ್ಯಕ್ರಮವನ್ನು ಶೇ.100 ರಷ್ಟು ಸಾಧಿಸಬೇಕು ಎಂಬ ಬಯಕೆ ಅವರಿಗೆ ಇದೆ. ಅದಕ್ಕೆ ಅಕ್ಟೋಬರ್ 2ರ ಗಾಂಧಿ ಜಯಂತಿಯ ಡೆಡ್‌ಲೈನ್ ಹಾಕಿಕೊಂಡು ಸಾಧಿಸಲು ಕ್ರಮವಹಿಸಲಾಗಿದೆ.

ಯಶೋಗಾಥೆ

# ಬಯಲು ಸೀಮೆಯಲ್ಲಿ ಬನದೇವಿ



ಮೋಹಿಸಿನ್ ಖಾನ್

ಜನರ ಸಹಯೋಗದೊಂದಿಗೆ ವಾರ್ಡ್ ಸಭೆ ಗ್ರಾಮಸಭೆ ಜರುಗಿಸಿ, ಕಾಯಕ ಬಂಧುಗಳಿಗೆ ಹೆಚ್ಚಿನ ಅವಶ್ಯಕ ಮಾಹಿತಿ ಒದಗಿಸಿ, ಕೆಲಸ ನಿರ್ವಹಿಸಿದಲ್ಲಿ ಎಲ್ಲಾ ಅನಾವಶ್ಯಕ ವಿವಾದಗಳಿಂದ ಹೊರಬಂದು ಸಾಧನೆ ಮಾಡಬಹುದಾಗಿದೆ.

ರಾಜ್ಯದ ಬಿಸಿಲನಾಡೆಂದು ಪ್ರಖ್ಯಾತಿ ಪಡೆದ ಕಲಬುರ್ಗಿ ಜಿಲ್ಲೆಯ ಕಲಬುರ್ಗಿ ತಾಲ್ಲೂಕು ಕೇಂದ್ರದಿಂದ ದಕ್ಷಿಣ ದಿಕ್ಕಿನಲ್ಲಿ 24 ಕಿ.ಮೀ ಅಂತರದಲ್ಲಿ ತಾಲ್ಲೂಕಿನ ಗಡಿಯಲ್ಲಿರುವ ಕಿರಣಗಿ ಗ್ರಾಮವು ಗ್ರಾಮ ಪಂಚಾಯತಿ ಕೇಂದ್ರಸ್ಥಾನವಾಗಿದ್ದು ಕಿರಣಗಿ, ತಿಳಗೂಳ, ಬಳವಾಡ ಗ್ರಾಮಗಳಿಂದ ಕೂಡಿರುತ್ತದೆ. ಈ ಗ್ರಾಮದ ಜನಸಂಖ್ಯೆ ಆರು ಸಾವಿರ ಮೀರಿದ್ದು 12 ಸಾವಿರ ಎಕರೆಯಷ್ಟು ಖುಷ್ಕಿ ಭೂಮಿ ಇರುತ್ತದೆ. ಗ್ರಾಮದ ಬಹುಭಾಗ ಜಮೀನು ಮೇಲ್ಪದರಲ್ಲಿ ಮಣ್ಣಿನ ಕೆಳಗಡೆ ಒಂದುವರಿ ಅಡಿ ಕೆಳಗಡೆ ಶಾಹಾಬಾದ ಕಲ್ಲುಬಂಡೆ ಮಾದರಿಯಲ್ಲಿ ಕಾಣಸಿಗುತ್ತವೆ. ಗ್ರಾಮಕ್ಕೆ ಪ್ರತಿದಿನ ಕುಡಿಯುವ ನೀರಿನ ಬವಣೆಯಿದ್ದು ಜಲಕ್ಷಾಮ ಗ್ರಾಮಗಳಲ್ಲೊಂದಾಗಿದೆ. ಈ ಗ್ರಾಮದ ಜಮೀನಿನಲ್ಲಿ ನೀರಾವರಿ ಸೌಲಭ್ಯ ಸಿಗುವುದಿಲ್ಲ. ಗ್ರಾಮದ ದಕ್ಷಿಣ ದಿಕ್ಕಿಗೆ ಇರುವ ಫಲವತ್ತಾದ ಭೂ ಪ್ರದೇಶ ಥರ್ಮಲ್ ಘಟಕಕ್ಕೆ 1 ಸಾವಿರ ಎಕರೆ, ಸಿಮೆಂಟ್ ಕಂಪನಿಗಳಿಗಾಗಿ 3500 ಎಕರೆ, ಒಟ್ಟು 4500 ಎಕರೆ ಸಣ್ಣ ಹಾಗೂ ಅತಿಸಣ್ಣ ರೈತರ ಜಮೀನು ಅಧಿಗ್ರಹಿಸಲಾಗಿದೆ.



ಈ ಪ್ರದೇಶದಲ್ಲಿ ಯೋಜನೆಯ ಮಾರ್ಗಸೂಚಿಗಳ ಪ್ರಕಾರ ಸಣ್ಣ ಹಾಗೂ ಅತಿ ಸಣ್ಣ ರೈತರ ಜಮೀನಿನಲ್ಲಿ ಕಾಮಗಾರಿ ಕೈಗೊಳ್ಳುವ ಸಂಭವನೀಯತೆ ವಿರಳವಾಗಿದೆ ಹಾಗೂ ಪ್ರಯೋಜನಕಾರಿಯಾಗಿರುವುದಿಲ್ಲ. ಇನ್ನು ಸದರಿ ಗ್ರಾಮ ಪಂಚಾಯತಿ ಇದುವರೆಗೂ 801 ಉದ್ಯೋಗ ಚೀಟಿಯನ್ನು ಕೂಲಿಕಾರರಿಗೆ ವಿತರಿಸಿದ್ದು 1502 ನೊಂದಾಯಿತ ಕಾರ್ಮಿಕರು ಇರುತ್ತಾರೆ. ಇವರಿಗೆ ಉದ್ಯೋಗ ಒದಗಿಸುವುದು ಜೊತೆಗೆ ಥರ್ಮಲ್ ಘಟಕ ಸ್ಥಾಪನೆಗಾಗಿ 2010 ರಲ್ಲಿ ತಾವು ಜಮೀನು ಕೊಟ್ಟಿದ್ದರೂ ಸರಕಾರ ಇದುವರೆಗೂ ಏನೊಂದು ಅಭಿವೃದ್ಧಿ ಕಾರ್ಯ ಕೈಗೊಳ್ಳದೆ ಸುಮ್ಮನೆ ಜಮೀನು ಕಳೆದುಕೊಂಡೆವು ಎಂಬ ಭಾವನೆ ಬೇಸರ ಜನರಲ್ಲಿ ಮೂಡಿತ್ತು.

ಐ.ಇ.ಸಿ. ಸಂಯೋಜಕರು, ತಾಲೂಕ ಪಂಚಾಯತ, ಕಲಬುರಗಿ, ಮೊ: 9591616588





ಥರ್ಮಲ್ ಘಟಕದ (ಕೆ.ಪಿ.ಸಿ.ಎಲ್) ಸಹಾಯಕ ನಿರ್ದೇಶಕರು ಜಮೀನಿನಲ್ಲಿ ಸಸಿ ಬೆಳೆಸುವುದು ಮತ್ತು ಮಣ್ಣು ಮತ್ತು ಜಲಸಂರಕ್ಷಣೆ ಕೆಲಸಕ್ಕೆ ಮನವಿ ಸಲ್ಲಿಸಿದ್ದರು. ಈ ಹಿನ್ನಲೆಯಲ್ಲಿ "ಮನಸಿದ್ದರೆ ಮಾರ್ಗ" ಎಂಬ ವಾಣಿಯಂತೆ ಗ್ರಾಮ ಪಂಚಾಯತಿ 2015–16ನೇ ಸಾಲಿನ ಮಹಾತ್ಮಾಗಾಂಧಿ ನರೇಗಾ ಯೋಜನೆಯಡಿಯಲ್ಲಿ ಸಾಮಾಜಿಕ ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಬೌಂಡರಿ ಲೈನ್ ಬಳಿ ಗುಂಡಿ ಹಾಗೂ ಸಸಿ ನೆಡುವ ಕಾರ್ಯಕ್ರಮಕ್ಕೆ ಮುಂದಾಯಿತು.

ಅಧಿಗ್ರಹಿಸಿದ ಜಮೀನು ನಿಖರವಾಗಿ ಗುರುತಿಸಲಾಗುತ್ತಿರಲಿಲ್ಲ. ಉಳಿದ ರೈತರು ಒತ್ತುವರಿ ಮಾಡುವ ಅಪಾಯವಿತ್ತು. ಉದ್ದೇಶಿತ ಯೋಜನೆಗಾಗಿ ಸರ್ಕಾರ ಅಧಿಗ್ರಹಿಸಿದ ಜಮೀನು ಸಂರಕ್ಷಿಸಿ ಸ್ಥಳದ ನಿಖರತೆ ಗುರುತಿಸಿದಂತೆ ಹಾಗೂ ಕಾರ್ಮಿಕರಿಗೆ ಉದ್ಯೋಗ ಒದಗಿಸಿದಂತಾಗಿದೆ.

ಕಾಮಗಾರಿ ಅನುಷ್ಠಾನಗೊಳಿಸಲು ಎಲ್ಲಾ ವಾರ್ಡ್‌ಗಳಲ್ಲಿ ವಾರ್ಡ್ ಸಭೆ ಬಳಿಕ ಗ್ರಾಮ ಸಭೆ ನಂತರ ಗ್ರಾಮ ಪಂಚಾಯತಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಮಂಜೂರಾತಿ ಪಡೆದುಕೊಂಡು ಸಾಮಾಜಿಕ ಅರಣ್ಯ ಇಲಾಖೆಯಿಂದ ಕಾಮಗಾರಿ ಅನುಷ್ಠನಗೊಳಿಸಲಾಗಿದೆ. ಕಾಮಗಾರಿಗಳನ್ನು 8 ಘಟಕಗಳಾಗಿ ವಿಂಗಡಿಸಿ ಪ್ರತಿ ಘಟಕಕ್ಕೆ ರೂ. 5.00 ಲಕ್ಷದಂತೆ ಒಟ್ಟು 19.00 ಲಕ್ಷ ಮೊತ್ತ ಪಡೆದು 570 ಕೂಲಿ ಕುಟುಂಬಗಳು ಈ ಕೆಲಸದಲ್ಲಿ ಕೂಲಿ ಕೆಲಸಮಾಡಿದ್ದು ಮೂರು ಘಟಕಗಳ ಕಾಮಗಾರಿ ಪೂರ್ತಿ ಮುಗಿದಿದ್ದು, ಪ್ರತಿ ಘಟಕದಲ್ಲಿ 1050 ಸಸಿಗಳಂತೆ 6300 ಸಸಿ ನೆಡಲಾಗಿದೆ. ಎಲ್ಲಾ ಸಸಿಗಳು ಉತ್ತಮವಾಗಿ ಬೆಳೆದಿವೆ. 7936 ಮಾನವದಿನಗಳ ಕೂಲಿ ಸೃಜನೆಯಾಗಿದ್ದು, ರೂ. 18.00 ಲಕ್ಷ ಕೂಲಿಗಾಗಿ ವೆಚ್ಚ ಮಾಡಲಾಗಿದೆ. ಉಳಿದ ಕಾಮಗಾರಿಯು ಪೂರ್ತಿಗೊಳಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ದಿಟ್ಟ ಹೆಜ್ಜೆ ಇಟ್ಟಿದ್ದು ಸಸಿಗಳ ಸರಂಕ್ಷಣೆಗಾಗಿ ಹೆಚ್ಚುವರಿ ಕ್ರಿಯಾ ಯೋಜನೆ ಮಂಜೂರು ಮಾಡಿಕೊಂಡು ಗ್ರಾಮ ಪಂಚಾಯತಿ ಮರ ಬೆಳೆಸಲು ಬದ್ಧತೆಯಿಂದ ಕೂಡಿದೆ.

ಈ ಕಾರ್ಯಕ್ರಮದ ಅನುಷ್ಠಾನದಲ್ಲಿ ಶ್ರೀ ಸದಾಶಿವ ಹರಳಯ್ಯರವರು ಸರ್ಕಾರದ ಭೂಮಿ ಸಂರಕ್ಷಿಸುವ ಉದ್ದೇಶದಿಂದ ಗ್ರಾಮಸ್ಥರಿಗೆ ತಿಳುವಳಿಕೆ ನೀಡಿ ಯೋಜನೆಯ ಎಲ್ಲಾ ಹಂತಗಳಲ್ಲಿ ಸಹಕರಿಸಿರುತ್ತಾರೆ. ಗ್ರಾಮ ಪಂಚಾಯತ್ ಆಡಳಿತ ಮಂಡಳಿ ಅವಶ್ಯಕತೆ ಅರಿತು ಕಾಮಗಾರಿಗೆ ಮಂಜೂರಾತಿ ಪಡೆದುಕೊಂಡಿರುತ್ತಾರೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕಾರ್ಯದರ್ಶಿ ಹಾಗೂ ಎಲ್ಲಾ ಸಿಬ್ಬಂದಿ ಎಲ್ಲಾ ಹಂತಗಳಲ್ಲಿ ಜವಾಬ್ದಾರಿಯಿಂದ ಕೆಲಸ ನಿರ್ವಹಿಸಿರುತ್ತಾರೆ. ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಸಹಾಯಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾಲಕಾಲಕ್ಕೆ ಸ್ಥಳ ಪರಿವೀಕ್ಷಣೆ ನಡೆಸಿ ಅಗತ್ಯ ಮಾರ್ಗದರ್ಶನ ನೀಡಿ ಸಹಕರಿಸಿರುತ್ತಾರೆ. ಎಲ್ಲಕ್ಕೂ ಮುಖ್ಯವಾಗಿ ಶ್ರೀ ಚಂದ್ರಶೇಖರ ಅರಿಕೇರಿ, ಸಹಾಯಕ ಅರಣ್ಯ ಅಧಿಕಾರಿ, ಹಾಗೂ ಸಿಬ್ಬಂದಿ ಮತ್ತು ಕಾರ್ಮಿಕರ ಶ್ರಮ ಶ್ಲಾಘನೀಯವಾಗಿದ್ದು, ಮರಗಳನ್ನು ಬೆಳೆಸಲು ಪೂರ್ಣ ಮನಸಿನಿಂದ ಕರ್ತವ್ಯ ನಿರ್ವಹಿಸಿರುತ್ತಾರೆ.



ಸರ್ಕಾರದ ಉದ್ದೇಶಿತ ಯೋಜನೆಯ ಭೂ ಸಂರಕ್ಷಣೆ, ಅಕ್ರಮ ಒತ್ತುವರಿ ತಡೆಗಟ್ಟುವುದು, ಬಯಲು ಸೀಮೆಯಲ್ಲಿ ವನಶ್ರೀಯ ಜನನ ವಾದಂತೆಯೇ ಸರಿ. ಮರ ಬೆಳೆದಂತೆ ನೀರು ಹಿಂಗುವ ಕೆಲಸದಿಂದ ಅಂತರ್ಜಲ ಮಟ್ಟ ಸಂರಕ್ಷಣೆ ಮಾಡುವ ಉದ್ದೇಶ ಸಫಲವಾಗಿದೆ.

ಕಿರಣಗಿ, ನದಿಸಿನೂರ ಹಾಗೂ ಫಿರೋಜಾಬಾದ ಗ್ರಾಮಗಳ ಥರ್ಮಲ್ ಘಟಕ ಸ್ಥಾಪನೆಗೆ 1600 ಎಕರೆ ಜಮೀನು ಸರ್ಕಾರ ಸ್ವಾಧಿನಪಡಿಸಿಕೊಂಡಿದ್ದು, ಸದರಿ ಜಮೀನಿನ ಸುತ್ತಲ ಪ್ರದೇಶದ ಜನರು ಆರಂಭದಲ್ಲಿ ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದರು. ಅಲ್ಲದೇ ಖುದ್ದಾಗಿ ಅವರೇ ಕೆಲಸ ನಿರ್ವಹಿಸುವುದಾಗಿ ತಿಳಿಸಿದರು. ಇದರಿಂದ ಸಮಸ್ಯೆ ಪರಿಹಾರವಾಯಿತು.

ಕೆಲಸ ಎಲ್ಲಿಂದ ಪ್ರಾರಂಭಿಸಿ ಎಲ್ಲಿಗೆ ಮುಕ್ತಾಯ ಮಾಡಬೇಕು ಎಂಬ ವಿಷಯವಾಗಿ ಗ್ರಾಮ ಪಂಚಾಯತಿ, ಅನುಷ್ಠಾನ ಇಲಾಖೆ ಹಾಗೂ ಕೆ.ಪಿ.ಸಿ.ಎಲ್ ಅಧಿಕಾರಿಗಳ ಮಧ್ಯೆ ಆರಂಭದಲ್ಲಿ ಗೊಂದಲ ಉಂಟಾಯಿತು. ನಂತರ ಎಲ್ಲರೂ ಒಂದುಗೂಡಿ ಸಮಸ್ಯೆ ಬಗೆಹರಿಸಿಕೊಂಡು ಕಾಮಗಾರಿ ಪ್ರಾರಂಭಿಸಲಾಯಿತು.

ಮಹಾತ್ಮಾಗಾಂಧಿ ನರೇಗಾ ಯೋಜನೆಯಾಗಲಿ, ಬೇರೆ ಯಾವುದೇ ಯೋಜನೆಯಾಗಲಿ, ಯೋಜನೆ ರೂಪಿಸಿ ಮೇಲುಸ್ತುವಾರಿ ಹಾಗೂ ಅನುಷ್ಠಾನ ಪ್ರಕ್ರಿಯೆ ಕುರಿತು ಮಾಡುವ ಎಲ್ಲಾ ಜವಾಬ್ದಾರಿಯ ಜೊತೆಗೆ ಅವಕಾಶ ಬಳಸಿಕೊಂಡು ಜನರ ಬೇಡಿಕೆ ಆಧಾರದಲ್ಲಿ ಗ್ರಾಮ ಪಂಚಾಯತಿಗಳು ಕೆಲಸ ಮಾಡಲು ಮುಂದಾದರೆ ಸುಸ್ಥಿರ ಅಭಿವೃದ್ಧಿಯಾಗಿ ಜನ ಹಾಗೂ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳ ಅನುಭವ ಪರಸ್ಪರರಿಗೆ ಹತ್ತಿರ ತಂದು ಉತ್ತಮ ಕೆಲಸ ಮಾಡಬಹುದಾಗಿದೆ.

ಜನರ ಸಹಯೊಗದೊಂದಿಗೆ ವಾರ್ಡ್ ಸಭೆ, ಗ್ರಾಮಸಭೆ ಜರುಗಿಸಿ, ಕಾಯಕ ಬಂಧುಗಳಿಗೆ ಹೆಚ್ಚಿನ ಅವಶ್ಯಕ ಮಾಹಿತಿ ಒದಗಿಸಿ, ಕಾರ್ಮಿಕರ ಪೂರ್ಣ ಪ್ರಮಾಣದ ಬಳಕೆ ಮಾಡಿ ಕೆಲಸ ನಿರ್ವಹಿಸಿದಲ್ಲಿ ಎಲ್ಲಾ ಅನಾವಶ್ಯಕ ವಿವಾದಗಳಿಂದ ಹೊರಬಂದು ಸಾಧನೆ ಮಾಡಬಹುದಾಗಿದೆ.

ಯೋಜನೆಯನ್ನು ಜನರ ಅಪೇಕ್ಷೆಗಳಿಗೆ ಅಗನುಗುಣವಾಗಿ ಪೂರೈಸಿದ್ದು, ಪೂರ್ಣ ಪ್ರಮಾಣದಲ್ಲಿ ಕಾರ್ಮಿಕರನ್ನು ಬಳಸಿಕೊಂಡು, ಕಾರ್ಮಿಕರ ಸಂಘಗಳ ರಚನೆ, ಕಾಯಕ ಬಂಧುಗಳ ರಚನೆ ಹಾಗೂ ಉಸ್ತುವಾರಿ ಮಾಡಿಸಿ ಅಧಿಕಾರಿಗಳ ಮತ್ತು ಸಾಮಾಜಿಕ ಅರಣ್ಯ ಇಲಾಖೆಯ ಅಧಿಕಾರಿಗಳ ನಿರಂತರ ಸಂಪರ್ಕದಿಂದ ಕಾಮಗಾರಿ ಪೂರ್ಣ ಗೊಳಿಸಲು ಸಹಕಾರಿಯಾಯಿತು.

ಯಶೋಗಾಥೆ

# ಶೌಚಾಲಯ ಬಳಸಿ-ಪರಿಸರ ಉಳಿಸಿ : ಪುರಸಭೆ ಸದಸ್ಯ ಶ್ರೀಮಂತ ಹಳ್ಳಿಯವರ ಮಾದರಿ ಪ್ರಯತ್ನ



**ಚಂದ್ರಶೇಖರ ಮೋರೆ**


ಮಹಾಲಿಂಗಪುರ ಪಟ್ಟಣವನ್ನು ಮಹಿಳೆಯರ ಬಯಲು ಶೌಚಮುಕ್ತ ಮತ್ತು ಸಂಪೂರ್ಣ ನೈರ್ಮಲ್ಯ ಹೊಂದಿದ ಪಟ್ಟಣವಾಗಿಸಲು ಸಂಕಲ್ಪ ಮಾಡಿಕೊಂಡು ಸ್ವಚ್ಛತಾ ಕಾರ್ಯ ಮುಂದುವರೆಸಲಾಗುತ್ತಿದೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬಯಲು ಶೌಚಮುಕ್ತ ಪಟ್ಟಣ ಮತ್ತು ಗ್ರಾಮಗಳನ್ನಾಗಿಸಲು ಹಲವು ಯೋಜನೆಗಳ ಮೂಲಕ ಪ್ರಯತ್ನಿಸುತ್ತಿವೆ. ಆದರೆ ಸಾರ್ವಜನಿಕ ಸಹಕಾರದ ಕೊರತೆಯಿಂದಾಗಿ ಸರ್ಕಾರದ ಯಾವ ಯೋಜನೆಗಳು ಯಶಸ್ವಿಯಾಗುತ್ತಿಲ್ಲ. ಇಂದಿಗೂ ನಮ್ಮ ರಾಜ್ಯದ ಬಹುತೇಕ ಗ್ರಾಮ ಮತ್ತು ಪಟ್ಟಣಗಳಲ್ಲಿ ಮಹಿಳೆಯರ ಬಯಲು ಶೌಚದ ಸಮಸ್ಯೆ ಹೇಳತೀರದಾಗಿದೆ. ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಬೆಳೆಯುತ್ತಿರುವ ವಾಣಿಜ್ಯ ಪಟ್ಟಣ ಮಹಾಲಿಂಗಪುರವು ಇದಕ್ಕೆ ಹೊರತಾಗಿಲ್ಲ.



**ಗಲೀಜು ರಸ್ತೆಗಳು :** ಪಟ್ಟಣದಲ್ಲಿ ಹಲವೆಡೆ ಕೋಟ್ಯಾಂತರ ಖರ್ಚುಮಾಡಿ ಪುರಸಭೆಯವರು ಹತ್ತಾರು ಸಾಮೂಹಿಕ ಮಹಿಳಾ ಶೌಚಾಲಯಗಳನ್ನು ನಿರ್ಮಿಸಿದ್ದಾರೆ. ಆದರೆ ಅವುಗಳನ್ನು ಬಳಕೆಮಾಡಿಕೊಳ್ಳದ ಮಹಿಳೆಯರು ಮುಂಜಾನೆ ಮತ್ತು ರಾತ್ರಿಯ ವೇಳೆ ಪಟ್ಟಣದ ಬಹುತೇಕ ರಸ್ತೆಗಳ ಇಕ್ಕೆಲಗಳೇ ತಮ್ಮ ಬಯಲು ಶೌಚದ ಪ್ರದೇಶ ಮಾಡಿಕೊಂಡ ಪರಿಣಾಮ ಮುಖ್ಯರಸ್ತೆಯಿಂದ ಪಟ್ಟಣ

ಪತ್ರಕರ್ತರು, ಲಕ್ಷ್ಮೀನಗರ. ಮಹಾಲಿಂಗಪುರ-587312, ತಾ: ಮುಧೋಳ ಜಿ: ಬಾಗಲಕೋಟ.
ಮೊ: 9060582021. e-mail:morechandru@gmail.com



ಶೌಚಾಲಯ ಬಳಸಿ ಪರಿಸರ ಉಳಿಸಿ...!

**ಮಹಿಳಾ ಶೌಚಾಲಯ ಪಾಸ್**

ಜನವರಿ – 2015

ಪ್ರತಿ ಕುಟುಂಬದ ಮಹಿಳಾ ಸದಸ್ಯರಿಗೆ ತಿಂಗಳಿಗೆ ರೂ. 30 ಮಾತ್ರ

ಬಿಪಿಎಲ್ & ಇತರೆ ಕಾರ್ಡ್ ಸಂಖ್ಯೆ MDL 26137302

ಹೆಸರು [illegible]

ಸೂಚನೆಗಳು

- ಶೌಚ ಮುಗಿದ ನಂತರ ಕನಿಷ್ಠ 4 ರಿಂದ 5 ಲೀಟರ ನೀರು ಶೌಚದ ಗುಂಡಿಯಲ್ಲಿ ಸುರಿಯಿರಿ.
- ಶೌಚ ಮುಗಿದ ನಂತರ ಹಾಗೆ ಹೋಗುವವರು ಕಂಡು ಬಂದಲ್ಲಿ ಅವರಿಗೆ ಶೌಚ ಗುಂಡಿಯಲ್ಲಿ ಕನಿಷ್ಠ 4 ರಿಂದ 5 ಲೀಟರ ನೀರನ್ನು ಸುರಿಯಲು ಒತ್ತಾಯಿಸಿರಿ.
- ಕುಟುಂಬದ ಮಹಿಳಾ ಸದಸ್ಯರು ಪಾಸನ್ನು ದಿನಕ್ಕೆ ಎಷ್ಟು ಸಲ ಬೇಕಾದರೂ ಬಳಸಬಹುದು. ಆದರೆ ಮೇಲ್ಕಾಣಿಸಿದ ಸಂಖ್ಯೆಯ ಕಾರ್ಡಿನಲ್ಲಿನ ಸದಸ್ಯರು ಮಾತ್ರ ಬಳಸಬೇಕು.
- ತಮಗೆ ಸಮೀಪ ಎನಿಸುವ ಶೌಚಾಲಯಕ್ಕೆ ಹೋಗಬಹುದು.
- ಪ್ರತಿ ದಿನ ಶೌಚಾಲಯ ನಿರ್ವಾಹಕ ಶೌಚಾಲಯವನ್ನು ಸ್ವಚ್ಛಗೊಳಿಸುವ ಸಮಯದಲ್ಲಿ ಶೌಚಾಲಯ ಪ್ರವೇಶ ಮಾಡಬಾರದು.

ಪ್ರತಿ ತಿಂಗಳ 26ನೇ ತಾರೀಖಿನಿಂದ ತಿಂಗಳ ಕೊನೆಯ ದಿನಾಂಕದವರೆಗೆ ಮಾತ್ರ ತಿಂಗಳ ಮುಂಗಡ ರಿಯಾಯತಿ ಪಾಸ್ ದೊರೆಯುತ್ತದೆ.

ಶೌಚಾಲಯ ನಿರ್ವಾಹಕ

ಪ್ರವೇಶಿಸುವ ಎಲ್ಲಾ ರಸ್ತೆಗಳು ಗಲೀಜಾಗಿ ಅಲ್ಲಿ ಸಂಚರಿಸುವ ಪಾದಚಾರಿಗಳು ಮತ್ತು ಪುರುಷರಿಗೆ ಕಿರಿಕಿರಿ ಉಂಟಾಗುತ್ತಿದೆ. ಬಯಲು ಶೌಚ ಮುಕ್ತ ಪಟ್ಟಣವನ್ನಾಗಿಸಲು ಪುರಸಭೆ ಮಾಜಿ ಉಪಾಧ್ಯಕ್ಷ, ಹಾಲಿ ಸದಸ್ಯ ಶ್ರೀಮಂತ ಹಳ್ಳಿಯವರ ಮಾದರಿ ಪ್ರಯತ್ನ ಮಾಡುವುದರೊಂದಿಗೆ ಮಹಿಳೆಯರಲ್ಲಿ ಶೌಚಾಲಯ ಬಳಕೆಯ ಜಾಗೃತಿ ಮೂಡಿಸುತ್ತಿದ್ದಾರೆ.

**ಶ್ರೀಮಂತ ಹಳ್ಳಿಯವರ ಮಾದರಿ ಪ್ರಯತ್ನ:** ಪ್ರಧಾನಿ ನರೇಂದ್ರ ಮೋದಿಯವರ ಸ್ವಚ್ಛ ಭಾರತ ಅಭಿಯಾನಕ್ಕೆ ಬೆಂಬಲವಾಗಿ ಮಹಾಲಿಂಗಪುರ ಪಟ್ಟಣವನ್ನು ಮಹಿಳೆಯರ ಬಯಲು ಶೌಚಮುಕ್ತ ಮತ್ತು ಸಂಪೂರ್ಣ ನೈರ್ಮಲ್ಯಹೊಂದಿದ ಪಟ್ಟಣವಾಗಿಸಲು ಸಂಕಲ್ಪ ಮಾಡಿಕೊಂಡ ಪುರಸಭೆಯ ಮಾಜಿ ಉಪಾಧ್ಯಕ್ಷ, ಹಾಲಿ ಸದಸ್ಯ ಶ್ರೀಮಂತ ಹಳ್ಳಿ ಅವರು ಪ್ರತಿವಾರಕ್ಕೊಮ್ಮೆ ಸ್ವಚ್ಛತಾ ಅಭಿಯಾನ ಹಮ್ಮಿಕೊಂಡು ಸ್ವಚ್ಛತಾ ಕಾರ್ಯ ಮುಂದುವರೆಸಿದ್ದಾರೆ. ಅಲ್ಲದೇ ಮಹಿಳೆಯರು ಬಳಸದೇ ಹಾಳಾಗುತ್ತಿರುವ ಶೌಚಾಲಯಗಳ ಬಳಕೆಗಾಗಿ "ಶೌಚಾಲಯ ಬಳಸಿ–ಪರಿಸರ ಉಳಿಸಿ" ಎಂಬ ಯೋಜನೆಯ ಮೂಲಕ ಆರಂಭದಲ್ಲಿ ತಾವು ಚುನಾಯಿತರಾದ 8ನೇ ವಾರ್ಡಿನಲ್ಲಿ ಹತ್ತಾರು ಬಾರಿ ಸಭೆ ನಡೆಸಿ, ಮಹಿಳೆಯರಲ್ಲಿ ಶೌಚಾಲಯ ಬಳಕೆ ಮತ್ತು ಆರೋಗ್ಯದ ಅರಿವು ಮೂಡಿಸಿದ್ದಾರೆ. ಒಂದು ಕುಟುಂಬಕ್ಕೆ ತಿಂಗಳಿಗೆ 30 ರೂ.ಗಳ ಮಹಿಳಾ ಶೌಚಾಲಯ ಪಾಸ್‌ಗಳನ್ನು ವಿತರಿಸಿದ್ದಾರೆ. ಪ್ರತಿ ತಿಂಗಳು ಮಹಿಳಾ ಪಾಸ್‌ಗಳಿಂದ ಬರುವ ಹಣದಲ್ಲೇ ಶೌಚಾಲಯ ಸ್ವಚ್ಛತೆಗಾಗಿ ಓರ್ವ ನಿರ್ವಾಹಕನನ್ನು ನೇಮಕ ಮಾಡಿದ್ದಾರೆ. ಇದರಿಂದಾಗಿ ಬಯಲು ಶೌಚವು ಕಡಿಮೆಯಾಗಿ ಶೌಚಾಲಯಗಳು ಬಳಕೆಯಾಗಿ ಪರಿಸರ ಸ್ವಚ್ಛತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿದೆ.

**ಕೆಲವರ ವಿರೋಧ:** ತಿಂಗಳಿಗೆ 30 ರೂ ಕೊಟ್ಟು ಶೌಚಾಲಯ ಪಾಸ್ ಪಡೆದು ಶೌಚಾಲಯ ಬಳಸಿಕೊಳ್ಳಲು ಆರಂಭದಲ್ಲಿ ಮಹಿಳೆಯರು ವಿರೋಧ ವ್ಯಕ್ತಪಡಿಸಿದ್ದರು. ಆದರೆ ಇಂದು 99% ರಷ್ಟು ಮಹಿಳೆಯರು 30ರೂ ಪಾವತಿಸಿ ಪಾಸ್ ಪಡೆದು ಶೌಚಾಲಯವನ್ನು ಬಳಸಿಕೊಳ್ಳುತ್ತಿದ್ದಾರೆ. ಆದರೆ ಬೆರಳೆಣಿಕೆಯಷ್ಟು ಮಹಿಳೆಯರು ಹಟಕ್ಕೆ ಬಿದ್ದಂತೆ ತಿಂಗಳಿಗೆ 30 ರೂ. ಪಾವತಿಸದೇ ಶೌಚಾಲಯ ಬಳಸದೇ ಮೊದಲಿನಂತೆ ಬಯಲು ಶೌಚಕ್ಕೆ ಪ್ರಯತ್ನಿಸುತ್ತಿರುವುದು ಮಾತ್ರ ಖೇದಕರ ಸಂಗತಿಯಾಗಿದೆ.

**ಪುರುಷರ ಶೌಚಾಲಯ :** ಪಟ್ಟಣದ 7 ಮತ್ತು 8ನೇ ವಾರ್ಡಿಗೆ ಸಂಬಂಧಿಸಿದ ಸಾಮೂಹಿಕ ಪುರುಷರ ಶೌಚಾಲಯಗಳು ಸಹ ಸರಿಯಾಗಿ ಬಳಕೆಯಾಗಿರಲಿಲ್ಲ. ಮಹಿಳೆಯ ಶೌಚಾಲಯ ಪಾಸ್ ಯಶಸ್ವಿಯಾದ ನಂತರ ಪುರಸಭೆಯ ಮಾಜಿ ಅಧ್ಯಕ್ಷ ಅರ್ಜುನಗೌಡ

ಪಾಟೀಲ ಹಾಗೂ ಸದಸ್ಯ ಶ್ರೀಮಂತ ಹಳ್ಳಿಯವರು ಪುರುಷರ ಶೌಚಾಲಯಗಳಿಗೆ ನೀರಿನ ಸೌಕರ್ಯ ಮತ್ತು ಓರ್ವ ನಿರ್ವಾಹಕನನ್ನು ನೇಮಕಗೊಳಿಸಿದ್ದರಿಂದ ಪುರುಷರು ಸಹ ಇಂದು ತಲಾ 2ರೂ ಪಾವತಿಸಿ, ಶೌಚಾಲಯವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದಾರೆ. ಅಲ್ಲದೇ ಈ ರೀತಿಯಾಗಿ ಪಟ್ಟಣದ 4 ಭಾಗದಲ್ಲಿ ಮಹಿಳಾ ಶೌಚಾಲಯಗಳು ಯಸಸ್ವಿಯಾಗಿರುವದರಿಂದ , ಪುರಸಭೆಯ ಇನ್ನುಳಿದ ಸದಸ್ಯರು ಸಹ ಹಳ್ಳಿಯವರಂತೆ ಶೌಚಾಲಯ ಬಳಕೆಯ ಜಾಗೃತಿ ಮೂಡಿಸಿದರೆ, ಮಹಾಲಿಂಗಪುರ ಪಟ್ಟಣವು ಬಯಲು ಶೌಚಮುಕ್ತ ಪಟ್ಟಣವಾಗುವದರಲ್ಲಿ ಸಂಶಯವಿಲ್ಲ.

**ಬದಲಾವಣೆಗೆ ಸಹಕಾರ ಅಗತ್ಯ:** ಸರ್ಕಾರವು ಮನೆಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಗ್ರಾಮ ಪಂಚಾಯತ್ ಮಟ್ಟದಲ್ಲಿ 12 ಸಾವಿರ, ಪುರಸಭೆ ಮತ್ತು ಪಟ್ಟಣ ಪ್ರದೇಶಗಳಲ್ಲಿ 20ಸಾವಿರ ರೂಗಳ ಸಹಾಯಧನ ನೀಡುತ್ತಿದ್ದರೂ ಸಹ ಅದನ್ನು ಸದ್ಬಳಕೆ ಮಾಡಿಕೊಳ್ಳದ ಜನ ಇಂದಿಗೂ ಬಯಲು ಶೌಚದ ಮೊರೆಹೋಗುತ್ತಿರುವುದು ಮಾತ್ರ ನಾಚಿಕೆಗೇಡು ಸಂಗತಿಯಾಗಿದೆ. ಸಮಾಜದ ಅಭಿವೃದ್ಧಿಗೆ ಸರ್ಕಾರ ಮತ್ತು ಜನಪ್ರತಿನಿಧಿಗಳು ತರುವ ಯೋಜನೆಗಳಿಂದ ಸಾಮಾಜಿಕ ಬದಲಾವಣೆಯಾಗಲು ಪ್ರತಿಯೊಬ್ಬ ನಾಗರಿಕರ ಸಹಕಾರ ಅಗತ್ಯವಾಗಿದೆ.



**ಶ್ರೀಮಂತ ಹಳ್ಳಿ**
**ಸದಸ್ಯರು, ಪುರಸಭೆ,**
**ಮಹಾಲಿಂಗಪುರ**

## ಸ್ವಚ್ಛತೆಗಾಗಿ ಪ್ರಯತ್ನ

ಈ ಮೊದಲು ಸಾಮೂಹಿಕ ಶೌಚಾಲಯಗಳು ಮುಕ್ತವಾಗಿದ್ದರೂ ಸಹ ಬಳಕೆಯಾಗದೆ ಹಾಳಾಗುವುದನ್ನು ತಪ್ಪಿಸಲು, ಸಾಮಾನ್ಯ ಜನತೆಗೆ ಅನುಕೂಲವಾಗುವ ನಿಟ್ಟಿನಲ್ಲಿ ತಿಂಗಳಿಗೆ ಕೇವಲ 30ರೂ, 20ರೂಗಳಿಗೆ ಶೌಚಾಲಯ ಪಾಸ್‌ಗಳನ್ನು ವಿತರಿಸಿ, ಬಯಲು ಶೌಚಮುಕ್ತ ಪಟ್ಟಣವನ್ನಾಗಿಸಲು ನಾವು ಮಾಡುತ್ತಿರುವುದು ಒಂದು ಪುಟ್ಟ ಪ್ರಯತ್ನ. ಇದಕ್ಕೆ ಈಗಾಗಲೇ 80% ಮಹಿಳೆಯರು ಸಹಕಾರ ನೀಡಿದ್ದು, ಮುಂಬರುವ ದಿನಗಳಲ್ಲಿ ಈ ಯೋಜನೆಯು ಎಲ್ಲಾ ವಾರ್ಡುಗಳಲ್ಲಿ ಜಾರಿಗೆ ಬಂದರೆ ಪಟ್ಟಣದ ನೈರ್ಮಲ್ಯದ ಜೊತೆಗೆ ನಮ್ಮ ಶ್ರಮವು ಸಾರ್ಥಕವಾಗುತ್ತದೆ.

**ಬಸನಗೌಡ ಪಾಟೀಲ**
**ಮಾಜಿ ಅಧ್ಯಕ್ಷರು**
**ಪುರಸಭೆ, ಮಹಾಲಿಂಗಪುರ.**

## ಇತರರಿಗೆ ಮಾದರಿ

ಮಹಿಳೆಯರ ಬಯಲು ಶೌಚ ಮುಕ್ತ ಪಟ್ಟಣವನ್ನಾಗಿಸಲು ಕಳೆದ ಆರು ತಿಂಗಳಿನಿಂದ ಪುರಸಭೆ ಉಪಾಧ್ಯಕ್ಷ ಶ್ರೀಮಂತ ಹಳ್ಳಿಯವರು ನಡೆಸುತ್ತಿರುವ ಭಗೀರಥ ಪ್ರಯತ್ನವು ಇತರರಿಗೆ ಮಾದರಿ. ಈಗಾಗಲೇ ಪಟ್ಟಣದ ಮೂರು ಭಾಗಗಳಲ್ಲಿ ಮಹಿಳೆಯರು ಹಣ ಪಾವತಿಸಿ ಶೌಚಾಲಯ ಬಳಸುತ್ತಿದ್ದಾರೆ. ಪುರಸಭೆಯ ಎಲ್ಲಾ ಸದಸ್ಯರು ಈ ಪ್ರಯತ್ನಕ್ಕೆ ಕೈ ಜೋಡಿಸಿದರೆ ಖಂಡಿತಾ ಮಹಾಲಿಂಗಪುರವು ಮಹಿಳಾ ಬಯಲು ಶೌಚಮುಕ್ತ ಪಟ್ಟಣವಾಗುತ್ತದೆ.ಪಟ್ಟಣದ ನೈರ್ಮಲ್ಯದ ಜೊತೆಗೆ ನಮ್ಮ ಶ್ರಮವು ಸಾರ್ಥಕವಾಗುತ್ತದೆ.

ಕವಿಯ(ಕ್ಷ) ಪ್ರಶ್ನೆ?

# ಸ್ವಾತಂತ್ರ ದಿನ ಬಂತು... ಹೋಯಿತು...!!!

ನಾವೆಲ್ಲ ಈಗ ಇತ್ತೀಚೆಗೆ 69ನೇ ವರ್ಷದ ಸ್ವಾತಂತ್ರ್ಯ ದಿನವನ್ನು ಆಚರಿಸಿದ ಸಂಭ್ರಮದಲ್ಲಿದ್ದೇವೆ. ಈ 6.9 ದಶಕಗಳಲ್ಲಿ ನಾವು ಹಲವಾರು ಪ್ರಗತಿಯನ್ನು ಸಾಧಿಸಿದ್ದೇವೆ. ದೇಶದಲ್ಲೇ ಸ್ವಯಂ ನಿರ್ಮಿತವಾದ ಚಂದ್ರಯಾನವನ್ನು ಕೂಡ ಉಡಾಯಿಸದ್ದೇವೆ. ಆದರೆ, ನಾವು ಇಷ್ಟು ಮೈಲಿಗಲ್ಲುಗಳನ್ನು ಸಾಧಿಸಲು ಸಾಧ್ಯ ಮಾಡಿ ಕೊಟ್ಟವರಾರು? ನಮ್ಮ ಸ್ವಾತಂತ್ರ್ಯ ಹೋರಾಟಗಾರರು. ಇಂದು ನಾವು ಯಾರ ದಬ್ಬಾಳಿಕೆಯ ಭಯವು ಇಲ್ಲದೇ ಸಂತೋಷ ಹಾಗೂ ನೆಮ್ಮದಿಯ ಜೀವನವನ್ನು ನಡೆಸಲು, ತಮ್ಮ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಈ ವೀರರ ಸಂಖ್ಯೆಯನ್ನು ಊಹಿಸಲು ಕೂಡ ಅಸಾಧ್ಯ!! ಸ್ವಾತಂತ್ರ್ಯವನ್ನು ಗಳಿಸಲು ಅನೇಕ ದೇಶಗಳು ಯುದ್ಧದ ಮಾರ್ಗವನ್ನೇ ಅನುಸರಿಸಬೇಕಾದರೆ, ಅಹಿಂಸೆಯ ಹಾದಿಯನ್ನು ಕೈಹಿಡಿದ ಹೆಗ್ಗಳಿಕೆ ಕೇವಲ ನಮ್ಮ ರಾಷ್ಟ್ರಕ್ಕಷ್ಟೆ ಇರುತ್ತದೆ.



### ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು?

1. ನಾವಿಂದು ನಿಜವಾದ, ಅರ್ಥಪೂರ್ಣವಾದ ಸ್ವಾತಂತ್ರ್ಯ ದಿನವನ್ನು ಆಚರಿಸುತ್ತಿದ್ದೇವೆಯೇ?
2. "ಸ್ವಾತಂತ್ರ್ಯ ದಿನದ ವಿಶೇಷ ಕಾರ್ಯಕ್ರಮಗಳು" ಎಂಬ ಹೆಸರಿನಲ್ಲಿ ದಿನವೆಲ್ಲಾ ನಾವು ಎಡಬಿಡದೇ ಟಿ.ವಿ.ಯ ಮುಂದೆ ಅಂಟಿಕೊಳ್ಳುವುದು ಸರಿಯೇ?
3. ಅಹಿಂಸೆಯಿಂದ ಗಳಿಸಿದ ಇತಿಹಾಸದ ವಿಶೇಷ ದಿನವನ್ನು ಈ ರೀತಿ ಹಿಂಸೆಯಿಂದ (ಅಂದರೆ, Action movies ಗಳನ್ನು ವೀಕ್ಷಿಸಿ) ಕಳೆಯುವುದು ಎಷ್ಟು ಸರಿ?
4. ವಿಶ್ರಾಂತಿಯನ್ನು ಪಡೆಯಲು ಸಿಕ್ಕಿರುವ ಮತ್ತೊಂದು ರಜೆಯ ದಿನವೇ?
5. ಇದುವೇ ನಿಜವಾದ ಸ್ವಾತಂತ್ರ್ಯ ದಿನಾಚರಣೆಯಾದರೆ, ನಾವು ನಮ್ಮ ಮುಂದಿನ ಪೀಳಿಗೆಗೆ ಅರಿವು ಮೂಡಿಸುವುದಾದರೂ ಹೇಗೆ?
6. ಸ್ವಾತಂತ್ರ್ಯ ದಿನ ಬಂತು... ಹಾಗೇಯೇ ಹೋಯಿತೇ...? ಇಲ್ಲವೇ 365 ದಿನಗಳ ನಂತರ ಇದೇ ರೀತಿಯ ಮತ್ತೊಂದು ದಿನವನ್ನು "ಆಚರಿಸಲು" ನಾವೆಲ್ಲ ಎದುರು ನೋಡುತ್ತಿದ್ದೇವೆಯೇ?

**ಎ. ಗಜಲಕ್ಷ್ಮಿ**
ಪ್ರಥಮ ದರ್ಜೆ ಸಹಾಯಕಿ,
ಆಂತರಿಕ ಆರ್ಥಿಕ ಸಲಹೆಗಾರರ ಶಾಖೆ,
ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ.

ಕಾವ್ಯ ವಿಕಾಸ

# ಸಹಕಾರ ನೀಡಿ ಯಶಸ್ವಿ ಮಾಡಿ

ಸಹಕಾರ ನೀಡಿ ಸಹಕಾರ ನೀಡಿ
ಬಯಲು ಮಲ ವಿಸರ್ಜನೆಯನ್ನು ಮಕ್ತಾಯ ಮಾಡಿ
ನಿಮ್ಮ ಮನೆಯಲ್ಲೊಂದು ಶೌಚಾಲಯ
ನಿರ್ಮಿಸಿ ಉಪಯೋಗ ಮಾಡಿ.

ಸರ್ಕಾರದ ಪ್ರೋತ್ಸಾಹಧನವನ್ನು ತೆಗೆದುಕೊಂಡು
ಶೌಚಾಲಯ ನಿರ್ಮಾಣ ಮಾಡಿ.

ಎಲ್ಲರೂ ಶೌಚಾಲಯವನ್ನು ಉಪಯೋಗ ಮಾಡಿ
ನಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛ ಮಾಡಿ
ಸಾಂಕ್ರಾಮಿಕ ಖಾಯಿಲೆಗಳನ್ನು ದೂರ ಮಾಡಿ

ಸಹಕಾರ ನೀಡಿ ಸಹಕಾರ ನೀಡಿ
ಸ್ವಚ್ಛ ಭಾರತ ಅಭಿಯಾನವನ್ನು ಯಶ್ವಸಿ ಮಾಡಿ.
ಬಯಲು ಮಲ ವಿಸರ್ಜನೆಯನ್ನು
ಎಲ್ಲರೂ ಮುಕ್ತಾಯ ಮಾಡಿ.




**ಕೊಮಾರಿಗೌಡ ಹೊಸಗೌಡ್ರು**
ಕ್ಲರ್ಕ್ ಕಂ ಡಾಟಾ ಎಂಟ್ರಿ ಅಪರೇಟರ್
ತಾಳೂರು ಗ್ರಾಮ ಪಂಚಾಯತ
ಸಿರುಗುಪ್ಪ (ತಾ) ಬಳ್ಳಾರಿ (ಜಿ)
ಮೊ:-8722774765

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 29–08–2015 ರಲ್ಲಿದ್ದಂತೆ.

| ಜಿಲ್ಲೆಯ ಹೆಸರು | ಪಂಚಾಯತಿಗಳ ಸಂಖ್ಯೆ | 2011–12 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2012–13 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2013–14 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರು ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಉತ್ತರ ಕನ್ನಡ | 207 | 100 | 100 | 83 | 34 | 97 | 74 | 97 | 83 | 1 |
| ಉಡುಪಿ | 146 | 100 | 100 | 59 | 52 | 78 | 95 | 92 | 82 | 2 |
| ಬಾಗಲಕೋಟೆ | 161 | 100 | 100 | 6 | 77 | 98 | 98 | 92 | 81 | 3 |
| ದಕ್ಷಿಣ ಕನ್ನಡ | 203 | 100 | 100 | 92 | 16 | 75 | 80 | 92 | 79 | 4 |
| ಬೆಂಗಳೂರು (ಗ್ರಾ) | 98 | 100 | 98 | 16 | 75 | 77 | 83 | 86 | 76 | 5 |
| ರಾಮನಗರ | 130 | 100 | 99 | 0 | 87 | 96 | 42 | 73 | 71 | 6 |
| ಮೈಸೂರ್ | 235 | 100 | 100 | 0 | 64 | 90 | 66 | 71 | 70 | 7 |
| ಶಿವಮೊಗ್ಗ | 260 | 100 | 100 | 22 | 40 | 89 | 63 | 61 | 67 | 8 |
| ಕೊಡಗು | 98 | 100 | 100 | 51 | 3 | 78 | 62 | 76 | 67 | 9 |
| ಕೋಲಾರ | 156 | 100 | 99 | 0 | 100 | 94 | 22 | 42 | 65 | 10 |
| ಧಾರವಾಡ | 175 | 100 | 99 | 0 | 61 | 77 | 43 | 76 | 65 | 11 |
| ಬೀದರ್ | 127 | 100 | 100 | 4 | 70 | 99 | 35 | 49 | 65 | 12 |
| ಗದಗ | 106 | 100 | 100 | 0 | 71 | 92 | 33 | 49 | 63 | 13 |
| ತುಮಕೂರು | 321 | 100 | 100 | 1 | 78 | 77 | 45 | 40 | 63 | 14 |
| ಮಂಡ್ಯ | 232 | 100 | 94 | 1 | 54 | 95 | 43 | 58 | 63 | 15 |
| ಚಾಮರಾಜನಗರ | 120 | 100 | 95 | 0 | 42 | 81 | 30 | 94 | 63 | 16 |
| ಚಿಕ್ಕಮಗಳೂರು | 226 | 100 | 100 | 23 | 17 | 61 | 63 | 73 | 62 | 17 |
| ಹಾವೇರಿ | 208 | 100 | 100 | 0 | 60 | 82 | 46 | 52 | 62 | 18 |
| ಹಾಸನ | 258 | 100 | 100 | 7 | 45 | 58 | 58 | 68 | 62 | 19 |
| ಚಿಕ್ಕಬಳ್ಳಾಪುರ | 151 | 100 | 100 | 3 | 78 | 88 | 13 | 47 | 61 | 20 |
| ದಾವಣಗೆರೆ | 230 | 100 | 99 | 1 | 56 | 96 | 35 | 37 | 60 | 21 |
| ಚಿತ್ರದುರ್ಗ | 185 | 100 | 100 | 0 | 69 | 81 | 44 | 27 | 60 | 22 |
| ಬೆಂಗಳೂರು (ನ) | 86 | 100 | 94 | 38 | 58 | 17 | 30 | 72 | 58 | 23 |
| ಕೊಪ್ಪಳ | 134 | 100 | 99 | 3 | 21 | 63 | 81 | 26 | 56 | 24 |
| ವಿಜಯಪುರ | 199 | 100 | 100 | 1 | 51 | 50 | 29 | 44 | 53 | 25 |
| ಬಳ್ಳಾರಿ | 189 | 100 | 100 | 2 | 10 | 55 | 40 | 35 | 48 | 26 |
| ಬೆಳಗಾವಿ | 486 | 100 | 86 | 0 | 25 | 59 | 8 | 42 | 45 | 27 |
| ರಾಯಚೂರು | 165 | 100 | 89 | 2 | 42 | 46 | 6 | 32 | 45 | 28 |
| ಕಲಬುರಗಿ | 220 | 100 | 85 | 0 | 32 | 51 | 11 | 13 | 41 | 29 |
| ಯಾದಗಿರಿ | 117 | 100 | 77 | 9 | 0 | 31 | 14 | 7 | 34 | 30 |

# ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಆಗಸ್ಟ್ 2015)

| ಜಿಲ್ಲೆ | ತಿಂಗಳಲ್ಲಿ ಜಿಎಸ್‌ಸಿ ಸ್ವೀಕೃತಿ (ಸಂಖ್ಯೆ) | ತಿಂಗಳಲ್ಲಿ ಜಿಎಸ್‌ಸಿ ವಿಲೇವಾರಿ | ವಿಳಂಬವಾಗಿ ವಿಲೇವಾರಿ ಆಗಿರುವುದು (ಶೇಕಡವಾರು) | ವಿಳಂಬವಾಗಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿಯಾದ ಜಿಎಸ್‌ಸಿಗಳು | ಒಂದು ಲಕ್ಷ ಜನಸಂಖ್ಯೆಗೆ ಜಿಎಸ್‌ಸಿ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ | ಅಂತಿಮವಾಗಿ ಪಡೆದ ಶ್ರೇಣಿ [ (ಅ) ಯ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 30 ರಷ್ಟು ಮತ್ತು (ಈ) ನ ಪ್ರಾಮುಖ್ಯತೆಯನ್ನಾಧರಿಸಿ ಶೇಕಡ 70 ರಷ್ಟು] |
|---|---|---|---|---|---|---|---|
| | A | B | C | D | E | F | G |
| ಕೋಲಾರ | 24097 | 23828 | 1.3 | 11 | 1606 | 1 | 1 |
| ಉಡುಪಿ | 14433 | 14725 | 1 | 7 | 1312 | 3 | 2 |
| ಬಾಗಲಕೋಟೆ | 10919 | 9829 | 0 | 1 | 606 | 6 | 3 |
| ಬೆಂಗಳೂರು (ಗ್ರಾ) | 12664 | 12621 | 1.3 | 11 | 1407 | 2 | 4 |
| ತುಮಕೂರು | 20880 | 20993 | 1.1 | 8 | 803 | 5 | 5 |
| ಶಿವಮೊಗ್ಗ | 7851 | 8360 | 0.5 | 4 | 461 | 7 | 6 |
| ಚಿಕ್ಕಬಳ್ಳಾಪುರ | 12563 | 12052 | 1.4 | 13 | 1046 | 4 | 7 |
| ಹಾವೇರಿ | 5361 | 5061 | 1.1 | 8 | 357 | 9 | 8 |
| ಉತ್ತರ ಕನ್ನಡ | 2309 | 2132 | 0 | 1 | 164 | 13 | 9 |
| ಚಿತ್ರದುರ್ಗ | 6500 | 6394 | 1.6 | 15 | 406 | 8 | 10 |
| ದಾವಣಗೆರೆ | 3327 | 2052 | 1.5 | 14 | 175 | 12 | 11 |
| ಗದಗ | 1365 | 1173 | 0.9 | 6 | 136 | 16 | 12 |
| ಚಿಕ್ಕಮಗಳೂರು | 3732 | 3586 | 5 | 22 | 339 | 10 | 13 |
| ರಾಮನಗರ | 3371 | 3641 | 3.1 | 20 | 337 | 11 | 14 |
| ಮೈಸೂರ್ | 3055 | 3172 | 0.3 | 3 | 105 | 21 | 15 |
| ಬೀದರ್ | 2598 | 2588 | 5.1 | 23 | 152 | 14 | 16 |
| ಮಂಡ್ಯ | 1625 | 1616 | 1.1 | 8 | 90 | 22 | 17 |
| ಹಾಸನ | 2527 | 2759 | 8.6 | 26 | 148 | 15 | 18 |
| ಚಾಮರಾಜನಗರ | 1096 | 1162 | 2.2 | 18 | 109 | 19 | 19 |
| ವಿಜಯಪುರ | 2848 | 2906 | 7.2 | 25 | 135 | 17 | 20 |
| ಧಾರವಾಡ | 505 | 487 | 0.8 | 5 | 28 | 26 | 21 |
| ಕೊಪ್ಪಳ | 1415 | 1559 | 3.9 | 21 | 108 | 20 | 22 |
| ಕೊಡಗು | 417 | 418 | 1.9 | 17 | 83 | 23 | 23 |
| ರಾಯಚೂರು | 2470 | 2464 | 14.3 | 29 | 130 | 18 | 24 |
| ದಕ್ಷಿಣ ಕನ್ನಡ | 1040 | 945 | 1.8 | 16 | 52 | 24 | 25 |
| ಬೆಳಗಾವಿ | 1762 | 1709 | 2.3 | 19 | 37 | 25 | 26 |
| ಬಳ್ಳಾರಿ | 697 | 718 | 8.8 | 27 | 27 | 27 | 27 |
| ಕಲಬುರಗಿ | 469 | 445 | 6.3 | 24 | 18 | 29 | 28 |
| ಬೆಂಗಳೂರು (ನ) | 2382 | 2578 | 12.7 | 28 | 25 | 28 | 29 |
| ಯಾದಗಿರಿ | 22 | 20 | 30 | 30 | 2 | 30 | 30 |

ಸುತ್ತೋಲೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 22.07.2015

ಸಂಖ್ಯೆ: ಗ್ರಾಅಪ 440 ಗ್ರಾಪಂಅ 2015.

# ಸುತ್ತೋಲೆ

**ವಿಷಯ: ಗ್ರಾಮ ಪಂಚಾಯತ್ ನಿಧಿಯಲ್ಲಿ ಶೇ.25 ಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಲು ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ**

**ಉಲ್ಲೇಖ: 1. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಅ.ಸ.ಪತ್ರ ಸಂಖ್ಯೆ: ಸಕನಿ/37ಎಸ್ಎಲ್ಪಿ 2014-15, ದಿನಾಂಕ 21.11.2014**

**2. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 130 ಗ್ರಾಪಂಅ 2003, ದಿನಾಂಕ 30.04.2003**

************

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 213ರಡಿ ಗ್ರಾಮ ಪಂಚಾಯತಿಗೆ ಎಲ್ಲಾ ಮೂಲಗಳಿಂದ ಲಭ್ಯವಾಗುವ ಅನುದಾನಗಳಲ್ಲಿ ಶೇಖಡ 25ಕ್ಕಿಂತ ಕಡಿಮೆ ಇಲ್ಲದಂತೆ ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲು ಗ್ರಾಮ ಪಂಚಾಯತಿಗಳಿಗೆ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ. ಗ್ರಾಮ ಪಂಚಾಯತಿ ಹಂತದಲ್ಲಿ ಅನುಷ್ಠಾನಗೊಳ್ಳುವ ಬೇರೆ ಬೇರೆ ಕಾರ್ಯಕ್ರಮಗಳ ಅನುದಾನದ ವಿನಿಯೋಗಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಈಗಾಗಲೇ ಹೊರಡಿಸಲಾಗಿದೆ.

ಗ್ರಾಮ ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯಲ್ಲಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಲು ಉಲ್ಲೇಖ-2 ರಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿತ್ತು. ಮುಂದುವರೆದು, ಸರ್ಕಾರವು ಗ್ರಾಮ ಪಂಚಾಯತಿಗಳ ಸ್ವಂತ ಆದಾಯ ಸಂಗ್ರಹಣೆಯಲ್ಲಿ ವೆಚ್ಚ ಭರಿಸಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಅನುದಾನವನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸುವಲ್ಲಿ ಗ್ರಾಮ ಪಂಚಾಯತಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳನ್ನು ಈ ಕೆಳಗಿನಂತೆ ನಿರ್ಧಿಷ್ಟಪಡಿಸಲಾಗಿದೆ.

## 1. ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು:

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿಧ್ಯಾಭ್ಯಾಸಕ್ಕನುಗುಣವಾಗಿ ವಿಧ್ಯಾಭ್ಯಾಸ ಪ್ರಮಾಣ ಪತ್ರ ಪಡೆದುಕೊಂಡು ಸಹಾಯಧನ ನೀಡಬಹುದು. ಸಹಾಯಧನವು ಫೀಜುಗಳಿಗೆ, ಮುಸ್ತಕಗಳನ್ನು ಖರೀದಿಸುವುದು ಒಳಗೊಳ್ಳುತ್ತದೆ. ಎಸ್.ಎಸ್.ಎಲ್.ಸಿ.ಯವರಿಗೆ 500/-, ಪಿಯುಸಿಯವರಿಗೆ 750/-, ಪದವಿಯವರಿಗೆ 1000/- ಹಾಗೂ ಉನ್ನತ ಪದವಿ ಅಥವಾ ವೃತ್ತಿಪರ ಶಿಕ್ಷಣದವರಿಗೆ 1500/- ರಂತೆ ವಾರ್ಷಿಕವಾಗಿ ಒಮ್ಮೆ ನೀಡಬಹುದು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡಲು ಪರಿಕ್ಷೆಗಳಲ್ಲಿ 80% ಗಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸಹಾಯಧನ (ಕ್ಯಾಶ್ ಅವಾರ್ಡ) ನೀಡಬಹುದು. ಎಸ್.ಎಸ್.ಎಲ್.ಸಿ.ಯಾದವರಿಗೆ 500/-, ಪಿಯುಸಿಯಾದವರಿಗೆ 750/-, ಪದವಿಯಾದವರಿಗೆ 1000/- ಹಾಗೂ ಉನ್ನತ ಪದವಿ ಅಥವಾ ವೃತ್ತಿಪರ ಶಿಕ್ಷಣದವರಿಗೆ 1500/- ರಂತೆ ವಾರ್ಷಿಕವಾಗಿ ಒಮ್ಮೆ ನೀಡಬಹುದು.

- ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕ್ರೀಡೆ, ಭಾಷಣ, ವಿಜ್ಞಾನ, ಸಾಂಸ್ಕೃತಿಕ ಹಾಗೂ ಇತರೆ ವ್ಯಾಸಂಗೇತರ ಸ್ಪರ್ಧೆಗಳಲ್ಲಿ ಭಾಗವಹಿಸಲು ತೆರಳುವ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ

ಕೆ.ಎಸ್.ಆರ್.ಟಿ.ಸಿ. ಬಸ್ ಅಥವಾ ಸಾಮಾನ್ಯ ದರ್ಜೆಯ ರೈಲು ಪ್ರಯಾಣದ ದರವನ್ನು ಸಹಾಯಧನವಾಗಿ ನೀಡಬಹುದು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊಸದಾಗಿ ಕಾನೂನು ಪದವಿ ಮುಕ್ತಾಯಗೊಳಿಸಿದ ವಕೀಲರಿಗೆ ಒಂದು ಬಾರಿಗೆ ಮಾತ್ರ ಪುಸ್ತಕಗಳು, ನೋಂದಣಿ ಶುಲ್ಕಗಳಿಗಾಗಿ ಗರಿಷ್ಟ ರೂ.5000 ವರೆಗೆ ಸಹಾಯಧನ ನೀಡಬಹುದು.
- ಕೇಂದ್ರ ಹಾಗೂ ರಾಜ್ಯ ಲೋಕಸೇವಾ ಆಯೋಗದ ಪೂರ್ವಭಾವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಹೆಸರಾಂತ ಹಾಗೂ ಪ್ರತಿಷ್ಠಿತ ಸಂಸ್ಥೆಗಳು ಹಮ್ಮಿಕೊಂಡ ತರಬೇತಿ ಪಡೆಯಲು ಪ್ರಯಾಣ ಭತ್ಯೆ ಗರಿಷ್ಟ ರೂ.5000 ವರೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದ ದೃಷ್ಟಿದೋಷದಿಂದ ಬಳಲುವವರಿಗೆ ಅಗತ್ಯ ದಾಖಲೆಗಳನ್ನು ಪಡೆದು ಚಿಕಿತ್ಸೆ ಹಾಗೂ ಕನ್ನಡಕದ ವೆಚ್ಚ ಗರಿಷ್ಟ ರೂ.5000 ವರೆಗೆ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಪಾರ್ಶ್ವವಾಯು ಹಾಗೂ ಇನ್ನಿತರ ಕಾಯಿಲೆಗಳಿಂದ ಬಳಲುತ್ತಿರುವ ಅಶಕ್ತರಿಗೆ ನಡೆದಾಡಲು ಅನುಕೂಲವಾಗುವಂತೆ ಕೃತಕ ವಯಸ್ಕರ ದ್ವಿಪಾದಿಯನ್ನು (Orthopedic Adult Walker) ಕೊಳ್ಳಲು ಸಹಾಯಧನ ಗರಿಷ್ಟ ರೂ.5000 ವರೆಗೆ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಂಗಗಳನ್ನು ಕಳೆದುಕೊಂಡ ರೋಗಿಗಳಿಗೆ ಅಗತ್ಯ ದಾಖಲೆಗಳನ್ನು ಪಡೆದು ಕೃತಕ ಅಂಗ ಜೋಡಣೆಗೆ ಸಹಾಯಧನ ಗರಿಷ್ಟ ರೂ.5000 ವರೆಗೆ ನೀಡಬಹುದು.
- ದೀರ್ಘಕಾಲ ಕಾಯಿಲೆಯಿಂದ ಬಳಲುತ್ತಿರುವವರಿಗೆ ಸರ್ಕಾರಿ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ವೈದ್ಯರಿಂದ ದೃಢೀಕರಿಸಿಕೊಂಡ ನಂತರ ಗರಿಷ್ಟ ರೂ.5000 ವರೆಗೆ ಚಿಕಿತ್ಸೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಲಕಸುಬು ಹಾಗೂ ಉಪಕಸುಬು ಮಾಡುವವರಿಗೆ ಉದಾಹರಣೆಗೆ ಚಮ್ಮಾರರಿಗೆ ಚರ್ಮಕುಟೀರಗಳನ್ನು ಅಥವಾ ಚಮ್ಮಾರಿಕೆಗಾಗಿ ಅವಶ್ಯಕವಾಗಿರುವ ಸಾಮಗ್ರಿಗಳು, ಕಮ್ಮಾರಿಕೆಗೆ ಅವಶ್ಯವಾಗಿರುವ ಸಾಮಗ್ರಿಗಳು, ಬುಟ್ಟಿ ಹೆಣೆಯುವವರಿಗೆ, ಚಾಪೆ ಹೆಣೆಯುವವರಿಗೆ, ತಮಟೆ ಬಾರಿಸುವವರಿಗೆ, ಇತ್ಯಾದಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂಡು ಬರುವ ಕಸುಬುದಾರರಿಗೆ ಉಪಯೋಗವಾಗುವಂತಹ ಸಾಮಗ್ರಿಗಳು ಇತ್ಯಾದಿಗಳಿಗಾಗಿ ಗರಿಷ್ಟ ರೂ. 5000 ವರೆಗೆ ಸಹಾಯಧನ ನೀಡಬಹುದು.
- ಬ್ಯಾಂಕ್ ಸಾಲಗಳ ನೆರವಿನಿಂದ ಹೊಸದಾಗಿ ಸಣ್ಣ ವ್ಯಾಪಾರ ಆರಂಭಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಣ್ಣ ವ್ಯಾಪಾರದಾರರಿಗೆ ಮಾತ್ರ ಗರಿಷ್ಟ ರೂ.5,000 ವರೆಗೆ ಸಹಾಯಧನವನ್ನು, ಫಲಾನುಭವಿಗೆ ಬ್ಯಾಂಕ್ ಸಾಲ ಮಂಜೂರು ಮಾಡಿದ ನಂತರ, ಹೊಂದಾಣಿಕೆ ಮೊತ್ತದ ರೂಪದಲ್ಲಿ ಬ್ಯಾಂಕುಗಳಿಗೆ ಸಹಾಯಧನ ಪಾವತಿಸಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಹೊಸದಾಗಿ ಸ್ವಂತ ಉದ್ದಿಮೆ ಪ್ರಾರಂಭಿಸುವವರಿಗೆ ಅಂಗಡಿ ಶೆಡ್ಡುಗಳನ್ನು ಖರೀದಿಸಲು ಗರಿಷ್ಟ ರೂ.5000 ವರೆಗೆ ಸಹಾಯಧನ ನೀಡಬಹುದು. ಉದಾಹರಣೆಗೆ, ಕ್ಷೌರಿಕರಿಗೆ, ಚಿಕ್ಕ ಅಂಗಡಿ, ಬೀಡಾ ಸ್ಟಾಲ್, ಮುಂತಾದವುಗಳು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ತಯಾರಿಸಿದ ಉತ್ಪನ್ನಗಳನ್ನು ಪ್ರಚಾರ ಮಾಡಲು ಮಾರಾಟ ಮೇಳ ಹಾಗೂ ಪ್ರದರ್ಶನಗಳನ್ನು ಸ್ಥಳೀಯ ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಏರ್ಪಡಿಸಿದಲ್ಲಿ, ಸದರಿ ಸಂಸ್ಥೆಗಳಿಗೆ ಗರಿಷ್ಟ ರೂ.5000 ವರೆಗೆ ನೀಡಬಹುದು.
- ಹೈನುಗಾರಿಗೆ ಮಾಡಲಿಚ್ಛಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಪಶು ಸಂಗೋಪನೆ ಇಲಾಖೆ ವತಿಯಿಂದ ಹಸು ಖರೀದಿಸಲು ಗರಿಷ್ಟ ರೂ.5000 ವರೆಗೆ ಸಹಾಯಧನವನ್ನು ಪಶು ಸಂಗೋಪನೆ ಇಲಾಖೆಗೆ ಹೊಂದಾಣಿಕೆ ಮೊತ್ತದ ರೂಪದಲ್ಲಿ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಹೊಸದಾಗಿ ಅಡುಗೆ ಅನಿಲ ಸಂಪರ್ಕ ಪಡೆಯಲು ತಗುಲುವ ವಾಸ್ತವಿಕ ವೆಚ್ಚವನ್ನು ಸಹಾಯಧನವಾಗಿ ನೀಡಬಹುದು.
- ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವೈಯಕ್ತಿಕ ಫಲಾನುಭವಿ ಪ್ರಯೋಜನವಾಗಿ ಸೋಲಾರ್ ಲಾಟೀನು ದೀಪಗಳನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಸಮುದಾಯ

ಪ್ರಯೋಜನವಾಗಿ ಸೋಲಾರ್ ಬೀದಿ ದೀಪಗಳನ್ನು ಅಳವಡಿಸಲು ಶೇಖಡ 25ರ ಪರಿಮಿತಿಯ ಅನುದಾನವನ್ನು ಬಳಸಿಕೊಳ್ಳಬಹುದು.

- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲನಿಗಳಲ್ಲಿ ಅರ್ಹ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದೊಂದಿಗೆ ಆರೋಗ್ಯ ಶಿಬಿರ, ನೈರ್ಮಲ್ಯ ಶಿಬಿರಗಳನ್ನು ಏರ್ಪಡಿಸಿದಲ್ಲಿ ಸದರಿ ಸಂಸ್ಥೆಗಳಿಗೆ ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲನಿಗಳಲ್ಲಿ ಕಾನೂನು ಅರಿವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾನೂನು ನೆರವು ಮಂಡಳಿಗೆ ಗರಿಷ್ಠ ರೂ.5000 ವರೆಗೆ ಸಹಾಯಧನ ನೀಡಬಹುದು.
- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಗುಡಿಸಲು ಹಾಗೂ ಮನೆಗಳು ಪ್ರಕೃತಿ ಹಾನಿಯಿಂದ ಹಾಳಾಗಿ ವಾಸಿಸಲು ತೀರಾ ಯೋಗ್ಯವಿರದಿದ್ದಲ್ಲಿ ಅಗತ್ಯಕ್ಕನುಗುಣವಾಗಿ ರೂ.1000 ರಿಂದ 2000 ವರೆಗೆ ಸಹಾಯಧನ ನೀಡಬಹುದು.

**2. ಅನುದಾನ ನಿಗಧಿಪಡಿಸುವಲ್ಲಿ ಅನುಸರಿಸಬೇಕಾದ ಕ್ರಮಗಳು:**

- ಗ್ರಾಮ ಪಂಚಾಯಿತಿ ಸ್ವಂತ ಆದಾಯದಲ್ಲಿ ಉಪಕರಗಳನ್ನು ಹೊರತುಪಡಿಸಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಖರ್ಚು ಭರಿಸುವುದು.
- ಕಾಮಗಾರಿಗಳನ್ನು ಅನುಷ್ಠಾನಗೊಳಿಸಿದ್ದಲ್ಲಿ ಸರ್ಕಾರಿ ಹಾಗೂ ಇತರೆ ಇಲಾಖೆಗಳ ಪರವಾಗಿ ಸಂಗ್ರಹಿಸಿ, ಸರ್ಕಾರಕ್ಕೆ ಮರುಪಾವತಿಸಬೇಕಾದ ತೆರಿಗೆಗಳನ್ನು ಹೊರತುಪಡಿಸಿ ಶೇಕಡ ಇಪ್ಪತ್ತೈದಕ್ಕಿಂತ ಕಡಿಮೆ ಇರದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣಕ್ಕಾಗಿ ಖರ್ಚು ಭರಿಸುವುದು.
- ಪ್ರಸಕ್ತ ಸಾಲಿನ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿದ ಅನುದಾನವನ್ನು ಆಯಾ ಆರ್ಥಿಕ ಸಾಲಿನಲ್ಲೇ ಕಡ್ಡಾಯವಾಗಿ ಖರ್ಚು ಭರಿಸುವುದು.
- ಈ ಸುತ್ತೋಲೆಯಲ್ಲಿ ಹೊರಡಿಸಿದ ಮಾರ್ಗಸೂಚಿಗಳನ್ನು ಗ್ರಾಮ ಪಂಚಾಯತಿಯ ಸಾಮಾನ್ಯ ಸಭೆಯ ನಿರ್ಣಯದಂತೆ ಅನುಷ್ಠಾನಗೊಳಿಸುವುದು.

**ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಧಾರ್ಮಿಕ ಸಭೆ, ಸಮಾರಂಭ, ಕಾರ್ಯಕ್ರಮಗಳಿಗೆ, ಧಾರ್ಮಿಕ ಕಟ್ಟಡ ನವೀಕರಣ ಹಾಗೂ ದುರಸ್ಥಿ ಹಾಗೂ ಇನ್ನಿತರ ಯಾವುದೇ ಧಾರ್ಮಿಕ ಚಟುವಟಿಕೆಗಳಿಗೆ ಈ ಅನುದಾನವನ್ನು ಬಳಸತಕ್ಕದ್ದಲ್ಲ.**

ಮೇಲೆ ನೀಡಿರುವ ಮಾರ್ಗಸೂಚಿಗಳಲ್ಲದೆ, ಪ್ರದೇಶಿಕ ಭಿನ್ನತೆಯ ಕಾರಣದಿಂದ ಇನ್ಯಾವುದೇ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲ್ಯಾಣ ಕಾರ್ಯಕ್ರಮಗಳು ಮುಖ್ಯವೆನಿಸಿದಲ್ಲಿ, ಗ್ರಾಮ ಪಂಚಾಯಿತಿಗಳು ತಮ್ಮ ತಮ್ಮ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಅನುಮೋದನೆ ಪಡೆದು ಅಗತ್ಯ ಕ್ರಮವಹಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ಅನುಮೋದನೆಯನ್ನು ನೀಡಲು ಕ್ರಮವಹಿಸಲು ತಿಳಿಸಿದೆ. ಮೇಲೆ ತಿಳಿಸಿರುವ ಕಾರ್ಯಕ್ರಮಗಳಲ್ಲದೆ ಇನ್ನು ಕೆಲವು ಕಾರ್ಯಕ್ರಮಗಳು ಅಗತ್ಯವೆನಿಸಿ ಸೇರಿಸಬೇಕಾಗಿದ್ದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದಲ್ಲಿ ಅವುಗಳನ್ನು ಸಹ ಪರಿಗಣಿಸಲು ಅಗತ್ಯ ಸುತ್ತೋಲೆಯನ್ನು ಹೊರಡಿಸಲಾಗುವುದು.

**(ಕೆ. ಯಾಲಕ್ಕಿಗೌಡ)**
ನಿರ್ದೇಶಕರು (ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಸುತ್ತೋಲೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 22.07.2015

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣಾ ಮತ್ತು ಸರಹದ್ದುಗಳ ನಿರ್ಧರಣಾ ಸಮಿತಿಯ ವರದಿ ಮತ್ತು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ್ವಯ ಹೊಸದಾಗಿ 6 ಗ್ರಾಮ ಪಂಚಾಯತಿಗಳನ್ನು ರಚಿಸುವ ಬಗ್ಗೆ. ಓದಲಾಗಿದೆ:–**

1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 38 ಗ್ರಾಪಸ 2013, ದಿನಾಂಕ:01–03–2014.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 10 ಗ್ರಾಪಂಅ 2015,ದಿನಾಂಕ: 09–01–2015.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಗ್ರಾಪಂಅ 2015, ದಿನಾಂಕ:13–02–2015.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಗ್ರಾಪಸ 2014, ದಿನಾಂಕ:30–04–2015.

************

**ಪ್ರಸ್ತಾವನೆ:**

1. ಸಾರ್ವಜನಿಕರಿಂದ, ಶಾಸಕರುಗಳಿಂದ, ಸ್ಥಳೀಯ ಸಂಸ್ಥೆಗಳ ಗ್ರಾಮೀಣ ಚುನಾಯಿತ ಸದಸ್ಯರುಗಳಿಂದ, ಸ್ವಯಂ ಸೇವಾ ಸಂಸ್ಥೆಗಳಿಂದ ಮತ್ತು ಇತರೆಯವರಿಂದ ಗ್ರಾಮ ಪಂಚಾಯತಿಗಳನ್ನು ವಿಭಜಿಸುವ ಬಗ್ಗೆ ಮತ್ತು ಪಂಚಾಯತಿಗಳ ಕೇಂದ್ರಸ್ಥಾನವನ್ನು ಬದಲಾಯಿಸುವ ಬಗ್ಗೆ ಅನೇಕ ಬೇಡಿಕೆಗಳು ಹಾಗೂ ಮನವಿಗಳು ಬಂದಿದ್ದವು. ಒಂದು ಗ್ರಾಮ ಪಂಚಾಯತಿಯಿಂದ ಮತ್ತೊಂದು ಗ್ರಾಮ ಪಂಚಾಯತಿಗೆ ಗ್ರಾಮಗಳನ್ನು ಬದಲಾಯಿಸುವ ಬಗ್ಗೆಯೂ ಬೇಡಿಕೆ ಇರುತ್ತವೆ. ಇದರ ಹಿನ್ನೆಲೆಯಲ್ಲಿ ಸರ್ಕಾರವು ಉನ್ನತ ಮಟ್ಟದ ಸಮಿತಿಯನ್ನು ಶ್ರೀ ಎಸ್. ಜಿ. ನಂಜಯ್ಯನಮಠ, ಮಾಜಿ ಶಾಸಕರು ಇವರ ನೇತೃತ್ವದಲ್ಲಿ ಹಾಗೂ ಇತರೆ ತಜ್ಞರನ್ನೊಳಗೊಂಡಂತೆ ಒಂದು ಸಮಿತಿಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಸರ್ಕಾರ ಆದೇಶ ಸಂಖ್ಯೆ ಗ್ರಾಅಪ 38 ಗ್ರಾಪಸ 2013 ದಿನಾಂಕ: 01–03–2014 ರಲ್ಲಿ ರಚಿಸಲಾಗಿತ್ತು. ಸಮಿತಿಯು ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯತಿಗಳ ಪುನರ್ ವಿಂಗಡಣಾ ಮತ್ತು ಸರಹದ್ದುಗಳ ನಿರ್ಧರಣಾ ಸಮಿತಿಯು ಸಲ್ಲಿಸಿದ ವರದಿಯ ಶಿಫಾರಸ್ಸಿನನ್ವಯ 439 ಹೊಸ ಗ್ರಾಮ ಪಂಚಾಯತಿಗಳನ್ನು ರಚಿಸಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಮೇಲೆ ಓದಲಾದ ಕ್ರಮ ಸಂಖ್ಯೆ: (3) ರ ಸರ್ಕಾರದ ಆದೇಶದಲ್ಲಿ 15 ಹೊಸ ಗ್ರಾಮ ಪಂಚಾಯತಿಗಳನ್ನು ರಚಿಸಲು ಮತ್ತು ಕೆಲವು ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನ ಬದಲಾವಣೆ ಮಾಡಲು ಹಾಗೂ ಕೆಲವು ಗ್ರಾಮಗಳನ್ನು ಬೇರೊಂದು ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ. ಮತ್ತು ಮೇಲೆ ಓದಲಾದ ಕ್ರಮ ಸಂಖ್ಯೆ: (4) ರ ಸರ್ಕಾರದ ಆದೇಶದಲ್ಲಿ 7 ಹೊಸ ಗ್ರಾಮ ಪಂಚಾಯತಿಗಳನ್ನು ರಚಿಸಲು ಮತ್ತು ಕೆಲವು ಗ್ರಾಮ ಪಂಚಾಯತಿಗಳ ಕೇಂದ್ರ ಸ್ಥಾನ ಬದಲಾವಣೆ ಮಾಡಲು ಹಾಗೂ ಕೆಲವು ಗ್ರಾಮಗಳನ್ನು ಬೇರೊಂದು ಗ್ರಾಮ ಪಂಚಾಯತಿಗೆ ವರ್ಗಾವಣೆ ಮಾಡಲು ಸರ್ಕಾರವು ಮಂಜೂರಾತಿ ನೀಡಿರುತ್ತದೆ.

2. ಆದರೆ, ಕೆಲವು ಜಿಲ್ಲೆಗಳ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಕಾರಣಾಂತರಗಳಿಂದ ಕೆಲವು ಗ್ರಾಮ ಪಂಚಾಯತಿಗಳ ರಚನೆ / ಪುನರ್ ವಿಂಗಡಣೆ ಸೂಕ್ತವಲ್ಲವೆಂದು ಅಭಿಪ್ರಾಯಿಸಿ, ಗ್ರಾಮ ಪಂಚಾಯತಿಗಳ ರಚನೆಯ ಅಧಿಸೂಚನೆ ಹೊರಡಿಸಿರುವುದಿಲ್ಲ. ಮುಂದುವರೆದು, ಕೆಲವು ಜಿಲ್ಲಾಧಿಕಾರಿಗಳು ಹೆಚ್ಚುವರಿಯಾಗಿ ತಮ್ಮ ಜಿಲ್ಲೆಗಳಲ್ಲಿ ಅಂದರೆ ಚಿಕ್ಕಬಳ್ಳಾಪುರ ಜಿಲ್ಲೆಯ ಪೋಲುನಾಯಕನಪಲ್ಲಿ, ಬಾಗಲಕೋಟೆ ಜಿಲ್ಲೆಯ ಚಿಕ್ಕಮ್ಮಗೇರಿ, ಬೇವಿನ ಮಟ್ಟಿ, ಹೆಗ್ಗೂರು, ಹೊಸಕೋರ್ತಿ, ಕಂಪನಿಂಬರ್ಗಿ, ಉಡುಪಿ ಜಿಲ್ಲೆಯ ಆರೂರು ಮತ್ತು ಗದಗ ಜಿಲ್ಲೆಯ ಶಿವಾಜಿನಗರ ಗ್ರಾಮ ಪಂಚಾಯತಿಗಳನ್ನು ಸೃಜಿಸಿ, ನಿಯಮಾನುಸಾರ

ಅಧಿಸೂಚನೆ ಹೊರಡಿಸಿರುತ್ತಾರೆ. ಜಿಲ್ಲಾಧಿಕಾರಿಗಳು ರಚಿಸಿರುವ ಈ 8 ಹೊಸ ಗ್ರಾಮ ಪಂಚಾಯತಿಗಳ ರಚನೆಯು ಮೇಲೆ ಓದಲಾದ ಕ್ರಮ ಸಂಖ್ಯೆ: (2) ರ ಸರ್ಕಾರದ ಆದೇಶದಲ್ಲಿ ರಚಿಸಿರುವ 439 ಗ್ರಾಮ ಪಂಚಾಯತಿಗಳ ಸಂಖ್ಯೆಯ ಮಿತಿಯೊಳಗೆ ಬರುತ್ತವೆ. ಇವುಗಳಲ್ಲದೆ, ಪ್ರಾದೇಶಿಕ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಬೆಳಗಾವಿ ಜಿಲ್ಲೆಯ ಕೆಂಪಟ್ಟಿ, ಶಿರಡಾಣ, ಓಬಳಾಪುರ ಮತ್ತು ಧಾರವಾಡ ಜಿಲ್ಲೆಯ ಪಶುಪತಿಹಾಳ ಗ್ರಾಮ ಪಂಚಾಯತಿಗಳನ್ನು ಸೃಜಿಸಲು ಸರ್ಕಾರ ನಿರ್ಧರಿಸಿದೆ.

3. ನಗರಾಭಿವೃದ್ಧಿ ಇಲಾಖೆಯು 64 ಗ್ರಾಮ ಪಂಚಾಯತಿಗಳನ್ನು ಪಟ್ಟಣ ಪಂಚಾಯತಿ, ಪುರಸಭೆ ಮತ್ತು ನಗರಸಭೆಗಳನ್ನಾಗಿ ಉನ್ನತಿಕರಿಸಲು ಕ್ರಮ ವಹಿಸುತ್ತಿರುವುದರಿಂದ, ಈ ಗ್ರಾಮ ಪಂಚಾಯತಿಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಈ ಗ್ರಾಮ ಪಂಚಾಯತಿಗಳಿಗೆ ಮಂಜೂರಾಗಿರುವ ಹುದ್ದೆಗಳನ್ನು ಹೊಸದಾಗಿ ರಚನೆಯಾಗುವ ಗ್ರಾಮ ಪಂಚಾಯತಿಗಳಿಗೆ ಹಾಗೂ ಇನ್ನಿತರೆ ಗ್ರಾಮ ಪಂಚಾಯತಿಗಳಿಗೆ ಮರುಹೊಂದಾಣಿಕೆ ಮಾಡಿಕೊಳ್ಳಬಹುದಾಗಿದೆ. ಹೊಸ ಗ್ರಾಮ ಪಂಚಾಯತಿಗಳ ಕಛೇರಿಗಳಿಗೆ ಕಟ್ಟಡ ನಿರ್ಮಾಣ, ಪಿಠೋಪಕರಣಗಳು, ಶಾಸನಬದ್ಧ ಅನುದಾನ ಒದಗಿಸಲು, ಸರ್ಕಾರವು ನಿರ್ಧರಿಸಿದೆ.

**ಅದರಂತೆ ಈ ಕೆಳಕಂಡ ಆದೇಶ.**

**ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 73 ಗ್ರಾಪಂಅ 2015, ಬೆಂಗಳೂರು, ದಿನಾಂಕ: 10–08–2015.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಸರ್ಕಾರವು ಮಂಜೂರಾತಿ ನೀಡಿ ಆದೇಶಿಸಿದೆ.

(1) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 4(1) ಮತ್ತು 4(2) ರಂತೆ ಜಿಲ್ಲಾಧಿಕಾರಿಗಳು 6 ಗ್ರಾಮ ಪಂಚಾಯತಿಗಳನ್ನು ಹೊಸದಾಗಿ ಅನುಬಂಧ–ಅ ರಲ್ಲಿರುವಂತೆ ರಚಿಸಲು

(2) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 4(1) ಮತ್ತು 4(2) ರಂತೆ ಜಿಲ್ಲಾಧಿಕಾರಿಗಳು ಅನುಬಂಧ–ಆ ನಲ್ಲಿರುವಂತೆ ಈಗಾಗಲೇ ಹೆಚ್ಚುವರಿಯಾಗಿ ರಚಿಸಿರುವ ಗ್ರಾಮ ಪಂಚಾಯತಿಗಳ ಸೃಜನೆಗೆ ಘಟೋನ್ನತ್ತರ ಮಂಜೂರಾತಿ ನೀಡಲು ಅನುಮೋದನೆ ನೀಡಿದೆ.

ಗ್ರೇಡ್–1 ಮತ್ತು ಗ್ರೇಡ್–2 ಗ್ರಾಮ ಪಂಚಾಯತಿಗಳ ವಿವರ, ಗ್ರಾಮ ಪಂಚಾಯತಿವಾರು ಮಂಜೂರಾದ ಹುದ್ದೆಗಳ ವಿವರ, ಗ್ರಾಮ ಪಂಚಾಯತಿ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ಅನುದಾನದ ವಿವರ, ಶಾಸನಬದ್ಧ ಅನುದಾನ, ಪೀಠೋಪಕರಣಗಳು ಮತ್ತು ಗಣಕಯಂತ್ರ ಮತ್ತು ಸಂಬಂಧಿ ಸಾಧನಗಳು, ಇತ್ಯಾದಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಆದೇಶ ಹೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ



**(ಸಿ.ಎಸ್. ರಾಜಶೇಖರೇಗೌಡ)**
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

## ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 73 ಗ್ರಾಪಂಅ 2015 ದಿನಾಂಕ:10–08–2015 ಕ್ಕೆ

### ಅನುಬಂಧ – ಅ

### ನೂತನ ಗ್ರಾಮ ಪಂಚಾಯಿತಿಗಳ ಪಟ್ಟಿ:

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಹೊಸದಾಗಿ ರಚಿಸಬೇಕಾದ ಗ್ರಾಮ ಪಂಚಾಯತಿ | ಗ್ರಾಮಗಳು |
|---|---|---|---|---|
| 1 | ಗದಗ | ರೋಣ | ಜಂತ್ಲಿ ಶಿರೂರ * | ಜಂತ್ಲಿ ಶಿರೂರ |
| 2 | ಉತ್ತರ ಕನ್ನಡ | ಜೋಯಿಡಾ | ಗಾಂಗೋಡಾ * | ಗಾಂಗೋಡಾ |
| 3 | ಬೆಳಗಾವಿ | ರಾಯಭಾಗ | ಕೆಂಪಟ್ಟಿ | ಕೆಂಪಟ್ಟಿ |
| 4 | ಬೆಳಗಾವಿ | ಹುಕ್ಕೇರಿ | ಶಿರಡಾಣ | 1 ಶಿರಡಾಣ<br>2 ಝುಂಗಟಿಹಾಳ |
| 5 | ಬೆಳಗಾವಿ | ರಾಮದುರ್ಗ | ಓಬಳಾಪುರ | 1 ಓಬಳಾಪುರ<br>2 ಸೊಪ್ಪಡ್ಲಾ<br>3 ವೆಂಕಟೇಶ್ವರ ನಗರ |
| 6 | ಧಾರವಾಡ | ಕುಂದಗೋಳ | ಪಶುಪತಿಹಾಳ | ಪಶುಪತಿಹಾಳ |

ಜಂತ್ಲಿ ಶಿರೂರ ಮತ್ತು ಗಾಂಗೋಡಾ ಗ್ರಾಮ ಪಂಚಾಯತಿಗಳನ್ನು ಸೃಜಿಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಗ್ರಾಪಸ 2014 ದಿನಾಂಕ: 30–04–2015 ರಲ್ಲಿ ಈಗಾಗಲೇ ಆದೇಶಿಸಲಾಗಿದೆ. ಇವುಗಳ ಸಂಬಂಧ ಜಿಲ್ಲಾಧಿಕಾರಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 4 ರಡಿ ಅಧಿಸೂಚನೆ ಹೊರಡಿಸುವಂತೆ ಆದೇಶಿಸಿದೆ.

### ಅನುಬಂಧ – ಆ

### ಜಿಲ್ಲಾಧಿಕಾರಿಗಳು ಹೆಚ್ಚುವರಿಯಾಗಿ ಸೃಜಿಸಿರುವ ಗ್ರಾಮ ಪಂಚಾಯತಿಗಳು

| ಕ್ರ.ಸಂ. | ಜಿಲ್ಲೆ | ಗ್ರಾಮ ಪಂಚಾಯತಿಗಳು |
|---|---|---|
| 1 | ಚಿಕ್ಕಬಳ್ಳಾಪುರ | ಪೋಲುನಾಯಕನಪಲ್ಲಿ |
| 2 | ಬಾಗಲಕೋಟೆ | ಚಿಕ್ಕಮ್ಯಾಗೇರಿ, |
| 3 | ಬಾಗಲಕೋಟೆ | ಬೇವಿನಮಟ್ಟಿ |
| 4 | ಬಾಗಲಕೋಟೆ | ಹೆಗ್ಗೂರು |
| 5 | ಬಾಗಲಕೋಟೆ | ಹೊಸಕೋಠಿ |
| 6 | ಬಾಗಲಕೋಟೆ | ಕಂಪನಿಂಬರ್ಗಿ |
| 7 | ಉಡುಪಿ | ಆರೂರು |
| 8 | ಗದಗ | ಶಿವಾಜಿನಗರ |

(ಸಿ.ಎಸ್. ರಾಜಶೇಖರೇಗೌಡ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 10–8–2015

ಸಂಖ್ಯೆ: ಗ್ರಾಅಪ 631 ಗ್ರಾಪಂಅ 2015

# ಸುತ್ತೋಲೆ

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

ಇವರಿಗೆ:

ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಮಾನ್ಯರೆ,

**ವಿಷಯ: ಗ್ರಾಮ ಪಂಚಾಯತಿಗಳು ದಿನಾಂಕ:20–08–2015 ರಂದು ವಿಶೇಷ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ನಡೆಸುವ ಬಗ್ಗೆ.**

**ಉಲ್ಲೇಖ:** 1. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 3–ಎ.

2. ಕರ್ನಾಟಕ ಪಂಚಾಯತ್ ರಾಜ್ (ವಾರ್ಡ್‌ಸಭೆ ಮತ್ತು ಗ್ರಾಮಸಭೆ) ನಿಯಮಗಳು 2004.

3. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 250 ಗ್ರಾಪಂಅ 2011, ದಿನಾಂಕ: 22–09–2011.

4. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 8 ಗ್ರಾಪಂಅ 2012, ದಿನಾಂಕ: 08–03–2012.

ವಿಕೇಂದ್ರೀಕೃತ ಆಡಳಿತದ ಯಾವುದೇ ವ್ಯವಸ್ಥೆಯ ತಳಹದಿಯು ಜನರ ಭಾಗವಹಿಸುವಿಕೆಯೇ ಆಗಿದ್ದು, ಜನರಿಗೆ ಅಧಿಕಾರ ವಹಿಸಿಕೊಟ್ಟಾಗ ಮಾತ್ರ ಇದು ಅರ್ಥಪೂರ್ಣವಾಗುತ್ತದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಸಭೆಯು ಜನರಿಗೆ ಅಧಿಕಾರ ವಹಿಸಿಕೊಡುವುದನ್ನು ಖಚಿತಪಡಿಸುವುದಕ್ಕೆ ಒಂದು ಅತ್ಯಾವಶ್ಯಕ ಸಾಂಸ್ಥಿಕ ವ್ಯವಸ್ಥೆಯಾಗಿರುತ್ತದೆ. ಹೀಗೆ, ವಿಕೇಂದ್ರಿಕರಣದ ಮಾದರಿಗಳು ಗ್ರಾಮ ಸಭೆಯೆಂಬ ಸ್ಪಂದನಶೀಲ ವ್ಯವಸ್ಥೆಯ ತಳಪಾಯವನ್ನು ಆಧರಿಸುತ್ತವೆ. **ಗ್ರಾಮ ಸಭೆಯು ಹಳ್ಳಿಯ ವಿಧಾನಸಭೆಯಾಗಿರುತ್ತದೆ.** ಈ ಹಿನ್ನಲೆಯಲ್ಲಿ ಹೊಸದಾಗಿ ಆಯ್ಕೆಯಾಗಿರುವ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಗ್ರಾಮ ಸಭೆಯ ಬಗ್ಗೆ ಅರಿವು ಮೂಡಿಸಬೇಕಾಗಿದೆ.

**ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ, 1993 ರ ಪ್ರಕರಣ 3–ಎ** ರಲ್ಲಿ ನಿಯತ ಮತ್ತು ಮಧ್ಯಂತರ ವಾರ್ಡ್ ಸಭೆ ಮತ್ತು ಗ್ರಾಮ ಸಭೆಯನ್ನು ಸಮಾವೇಶಗೊಳಿಸುವುದನ್ನು ಗ್ರಾಮ ಪಂಚಾಯತಿಗಳಿಗೆ ಕಡ್ಡಾಯಗೊಳಿಸಲಾಗಿದೆ. ಗ್ರಾಮಸಭೆಗಳನ್ನು ನಡೆಸುವ ಸಂಬಂಧ ಈ ಹಿಂದೆ ಹಲವಾರು ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ.

ಪ್ರತಿಯೊಂದು ಗ್ರಾಮ ಪಂಚಾಯತಿಯಲ್ಲಿ ನಡೆಯುವ ಗ್ರಾಮ ಸಭೆಗಳನ್ನು ದಾಖಲೀಕರಿಸುವ ದೃಷ್ಟಿಯಿಂದ ಹಾಗೂ ಸಾರ್ವಜನಿಕರಿಗೆ ಅವಶ್ಯಕವಿದ್ದಾಗ ಮಾಹಿತಿ ನೀಡುವ ದೃಷ್ಟಿಯಿಂದ ಎಲ್ಲಾ ಗ್ರಾಮ ಸಭೆಗಳ ಕಾರ್ಯಕಲಾಪಗಳನ್ನು ಕಡ್ಡಾಯವಾಗಿ ವಿಡಿಯೋ ಚಿತ್ರೀಕರಣ ಮಾಡತಕ್ಕದ್ದು. ವಿಡಿಯೋ ಚಿತ್ರೀಕರಣದ ಬಗ್ಗೆ ಉಲ್ಲೇಖ (3) ರ ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಅಲ್ಲದೇ ಪಂಚತಂತ್ರ/ಆರ್.ಎಫ್.ಡಿ.ಯಲ್ಲಿ ಛಾಯಾಚಿತ್ರ ಮತ್ತು ನಡವಳಿಗಳನ್ನು ಅಪ್ಲೋಡ್ ಮಾಡಲು ತಿಳಿಸಿದೆ.

ಉಲ್ಲೇಖ (4) ಸುತ್ತೋಲೆಯಲ್ಲಿ ಗ್ರಾಮ ಸಭೆಯನ್ನು ಪರಿಣಾಮಕಾರಿಯಾಗಿ ನಡೆಸುವ ಬಗ್ಗೆ ಹಾಗೂ ಆಡಳಿತ ವ್ಯವಸ್ಥೆಯಲ್ಲಿ ಜನರ ಸಹಭಾಗಿತ್ವವನ್ನು ಹೆಚ್ಚಿಸುವ ಬಗ್ಗೆ ವಿವರವಾಗಿ ತಿಳಿಸಲಾಗಿದೆ.

ಪ್ರಸ್ತುತ ಗ್ರಾಮ ಪಂಚಾಯತಿಗಳಿಗೆ 2015 ರ ಮೇ ಮತ್ತು ಜೂನ್ ತಿಂಗಳಿನಲ್ಲಿ ಚುನಾವಣೆ ನಡೆದು ಹೊಸದಾಗಿ ಆಡಳಿತ ಮಂಡಳಿಯು ಅಸ್ತಿತ್ವಕ್ಕೆ ಬಂದಿದ್ದು, ನೂತನವಾಗಿ ಚುನಾಯಿತರಾದ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಗ್ರಾಮ ಸಭೆಯ ಬಗ್ಗೆ ತಿಳುವಳಿಕೆ ನೀಡುವ ಸಲುವಾಗಿ ದಿನಾಂಕ:20-08-2015 ರಂದು ಗ್ರಾಮ ಸಭೆ ನಡೆಸಲು ಈ ಮೂಲಕ ತಿಳಿಸಲಾಗಿದೆ. ಅಗತ್ಯಕ್ಕೆ ತಕ್ಕಂತೆ ನೋಡೆಲ್ ಅಧಿಕಾರಿಗಳನ್ನು ನೇಮಿಸಿಕೊಂಡು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಏಕ ಕಾಲದಲ್ಲಿ ವಿಶೇಷ ಗ್ರಾಮ ಸಭೆಗಳನ್ನು ನಡೆಸುವ ಬಗ್ಗೆ ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಈ ಮೂಲಕ ಕೋರಿದೆ. ಅಗತ್ಯವಿದ್ದಲ್ಲಿ ಬೆಳಿಗ್ಗೆ ಮತ್ತು ಮಧ್ಯಾಹ್ನಗಳಂದು ಬೇರೆ ಬೇರೆಯಾಗಿ ಗ್ರಾಮ ಸಭೆಗಳನ್ನು ನಡೆಸಬಹುದು ಎಂದು ತಿಳಿಸಿದೆ.

ಸದರಿ ಸಭೆಗಳಿಗೆ ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರುಗಳು, ಮಾನ್ಯ ಶಾಸಕರುಗಳು, ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಸದಸ್ಯರುಗಳು, ಜಿಲ್ಲಾ ಉಸ್ತುವರಿ ಕಾರ್ಯದರ್ಶಿಗಳು ಮೊದಲಾದವರು ಭಾಗವಹಿಸುವರು ಎಂದು ತಮಗೆ ತಿಳಿಸಲಾಗಿದೆ. ಯಾವ ಯಾವ ಗ್ರಾಮ ಸಭೆಯಲ್ಲಿ ಭಾಗವಹಿಸುವುದು ಎಂಬುದು ತಿಳಿದು ಬಂದಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಎಲ್ಲಾ ಗ್ರಾಮ ಪಂಚಾಯಿತಿಗಳು ಗ್ರಾಮ ಸಭೆಗಳನ್ನು ನಡೆಸಲು ಅಗತ್ಯ ಕ್ರಮ ವಹಿಸುವಂತೆ ತಮಗೆ ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 10–8–2015

ಸಂಖ್ಯೆ: ಗ್ರಾಅಪ 638 ಗ್ರಾಪಂಅ 2015

# ಸುತ್ತೋಲೆ

**ವಿಷಯ: ಪಂಚಾಯತ್ ರಾಜ್ ಸಂಸ್ಥೆಗಳು ಸಭೆ ಸೇರುವಾಗ ಕಡ್ಡಾಯವಾಗಿ ನಾಡಗೀತೆಯೊಂದಿಗೆ ಪ್ರಾರಂಭ ಮಾಡಿ ಸಭೆಯನ್ನು ಮುಕ್ತಾಯ ಮಾಡುವಾಗ ಕಡ್ಡಾಯವಾಗಿ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸುವ ಬಗ್ಗೆ.**

**ಉಲ್ಲೇಖ: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಟಿಪ್ಪಣಿ ಸಂಖ್ಯೆ:**
**ಗ್ರಾಅಪ 1187/2015–16 ದಿನಾಂಕ:15–07–2015.**

*********

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಸಭೆ ಸೇರುವಾಗ ಕಡ್ಡಾಯವಾಗಿ ನಾಡಗೀತೆಯೊಂದಿಗೆ ಪ್ರಾರಂಭ ಮಾಡಿ ಸಭೆಯನ್ನು ಮುಕ್ತಾಯ ಮಾಡುವಾಗ ಕಡ್ಡಾಯವಾಗಿ ರಾಷ್ಟ್ರಗೀತೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸುವ ಬಗ್ಗೆ ಸುತ್ತೋಲೆಯೊಂದನ್ನು ಕೂಡಲೇ ಹೊರಡಿಸಲು ಉಲ್ಲೇಖಿತ ಟಿಪ್ಪಣಿಯಲ್ಲಿ ನಿರ್ದೇಶನ ನೀಡಿರುತ್ತಾರೆ.

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ನಾಡಗೀತೆ ಹಾಗೂ ರಾಷ್ಟ್ರಗೀತೆಯ ಮಹತ್ವವನ್ನು ಪಂಚಾಯತ್ ರಾಜ್ ಸಂಸ್ಥೆಗಳು ಸಾರಲು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, "ದೇಶ ನನ್ನದು, ನಾಡು ನನ್ನದು ಎನ್ನದ ಮಾನವನೆದೆ ಸುಡುಗಾಡು" ಎನ್ನುವ ರಾಷ್ಟ್ರ ಕವಿ ಕುವೆಂಪು ರವರ ಕವಿವಾಣಿಯನ್ನು ಸ್ಮರಿಸಬೇಕಾಗುತ್ತದೆ. ಆದ್ದರಿಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಗಳ ಸಾಮಾನ್ಯ ಸಭೆಗಳು, ವಿಶೇಷ ಸಭೆಗಳು, ಕೆಡಿಪಿ ಸಭೆಗಳು, ಗ್ರಾಮ ಸಭೆಗಳ ಪ್ರಾರಂಭದಲ್ಲಿ ನಾಡಗೀತೆಯೊಂದಿಗೆ ಪ್ರಾರಂಭಿಸಿ, ಸಭೆಯನ್ನು ಮುಕ್ತಾಯ ಮಾಡುವಾಗ ಕಡ್ಡಾಯವಾಗಿ ರಾಷ್ಟ್ರಗೀತೆಯೊಂದಿಗೆ ಮುಕ್ತಾಯ ಮಾಡಲು ಕ್ರಮವಹಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ, ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮತ್ತು ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದೆ.

(ಕೆ. ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್) ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
# ರೋಜ್‌ಗಾರ್ ದಿನಾಚರಣೆಯ ಛಾಯಾಚಿತ್ರಗಳು













# KARNATAKA VIKAS : SEPTEMBER - 2015

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road,
Bengaluru on 9th, 10th, 11th of Every Month




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ₹10.00
ಬೆಲೆ :